

ಕೊಟ್ಟೆ

(ಕಥಾ ಸಂಕಲನ)

ತೇಜಸ್ವಿನಿ ಹೆಗಡೆ

ಕಾಣ್ಕೆ

(ಕಥಾ ಸಂಕಲನ)

ಲೇಖಕರು
ತೇಜಸ್ವಿನಿ ಹೆಗಡೆ

ಪ್ರಕಾಶಕರು
ಜಯಶ್ರೀ ಪ್ರಕಾಶನ
ಮಂಗಳೂರು–೫೭೫೦೦೮

Kaanke - (Katha Sankalana)

Written by Tejaswini Hegde

Published by Jayashree Prakashana, "Bhramari" house no.1-17-122,
Landlinks Township, Derebail, Konchadi
Mangalore-575008, Ph : 0824-2247761

Year of Publication : 2008

Pages : X + 57

Price : 48-00

DTP by : Tejaswini Hegde, Bangalore
[Mobile : 9980028005]

Printed at : Gayathri Printing Press, Mangalore.

ಮುನ್ನುಡಿ

ಪ್ರಕೃತಿ ಪ್ರೇಮ ಇರುವವರಲ್ಲಿ ಪ್ರೇಮದ ಪ್ರಕೃತಿಯೂ ಸಹಜವಾಗಿರುತ್ತದೆ ಎಂಬುದೊಂದು ನಂಬುಗೆ, ಪ್ರೀತಿ, ವಾತ್ಸಲ್ಯ, ಮಮತೆಗಳಂಥ ಮಧುರ ಬಂಧಗಳಿಂದಲೇ ಕೂಡಿದ ಮನುಷ್ಯ ಸಂಬಂಧಗಳ ಕುರಿತಾಗಿ ಇಂಥವರಿಗೆ ಸದಾ ಅಕ್ಕರೆ. ಎಲ್ಲೂ ಕಟುವಾಗದ, ಕ್ರೌರ್ಯದ ಕಲ್ಪನೆಯೂ ಇರದ ಸುಕುಮಾರ ಸ್ನಿಗ್ಧ ಮನಸ್ಸು....ಒಟ್ಟಾರೆಯಾಗಿ ಆರೋಗ್ಯವಂತ ಮನಸ್ಸೊಂದು ತನ್ನ ಸಂಸ್ಕಾರ ಸಂಸ್ಕೃತಿಗಳ ಮೂಸೆಯಲ್ಲಿ ಅರಳಿದ ಮೃದು ಮಧುರ ಭಾವನೆಗಳನ್ನೂ ದಟ್ಟವಾಗಿ ಅನುಭವಿಸುತ್ತಾ ತನ್ನನ ಅನುಭವಗಳನ್ನೂ ಕತೆಗಳ ರೂಪದಲ್ಲಿ ಹಿಡಿದಿಟ್ಟ ಪರಿಣಾಮವೇ ಈ ಕೃತಿ-ಕಾಣ್ಕೆ

'ಕಾಣ್ಕೆ' ಎಂಬ ಪದಕ್ಕೆ ಹಲವು ಅರ್ಥಗಳನ್ನು ಕಲ್ಪಿಸಬಹುದು. ಕಾಣಿಕೆಯಾಗಿ ಬೇರೆಯವರಿಗೆ ನೀಡುವ ಲೌಕಿಕ ಅರ್ಥವೊಂದಾದರೆ ಆ ಉಡುಗೊರೆಯ ಹಿಂದಿರುವ ಒಳನೋಟಗಳ ದರ್ಶನ ಅರಿವು ಕಾಣ್ಕೆಯಾದೀತು. ಇಂಥದೊಂದು ಕಾಣ್ಕೆಯನ್ನು ಕನ್ನಡದ ಓದುಗರಿಗೆ ನೀಡುತ್ತಿರುವ ಯುವ ಕತೆಗಾರ್ತಿ ತೇಜಸ್ವಿನಿಯವರ ಚೊಚ್ಚಲ ಕಥಾ ಸಂಗ್ರಹ ಕಾಣ್ಕೆಗೆ ಮುನ್ನುಡಿ ರೂಪವಾಗಿ ನಾಲ್ಕು ಮಾತು ಹೇಳುವುದು ನನಗೆ ತುಂಬ ಸಂತೋಷದ ಸಂಗತಿ.

ತೇಜಸ್ವಿನಿಯನ್ನು ಪ್ರಾಥಮಿಕ ವಿದ್ಯಾರ್ಥಿನಿಯಾಗಿದ್ದಾಗಲೇ ಅವಳು ಮಾಡಿದ ಭಾಷಣವೊಂದಕ್ಕೆ ಫಸ್ಟ್ ಪ್ರೈಜ್‌ಕೊಟ್ಟು "ವೆರಿಗುಡ್, ಕೀಪಿಟಪ್" ಹೇಳಿದ ನೆನಪು ನನಗಿನ್ನೂ ಹಸಿಹಸಿಯಾಗಿರುವಾಗಲೇ ಕಥಾ ಸಂಕಲನ ಹೊರತರುತ್ತಿದ್ದೇನೆ, ಮುನ್ನುಡಿ ಬರೆಯಿರಿ ಎಂದು ಕೇಳಿದ್ದಾಳೆ. ಎಳವೆಯಿಂದಲೂ ಸಾಹಿತ್ಯ ಸಂಸ್ಕೃತಿಗಳ ಸಂಸರ್ಗದಲ್ಲೇ ಬೆಳೆದ ಮನಸ್ಸೊಂದು ತನ್ನ ಸುತ್ತಲಿನ ಬದುಕನ್ನೂ ಬೆರಗುಗಣ್ಣಿನಿಂದ ನೋಡುತ್ತಾ, ತನಗೆ ದಕ್ಕಿದ ಅನುಭವವನ್ನೂ ತೆರೆದಿಡುತ್ತಾ ಹೋಗುತ್ತದೆ.

ಕಾಣ್ಕೆ ಒಂಬತ್ತು ಕಥೆಗಳ ಒಂದು ಗುಚ್ಚ. ಇಲ್ಲಿನ ಕಥೆಗಳ ಬಹತೇಕ ನಾಯಕಿಯರು (ಹಾಗೆನ್ನಲೂ ಮನಸ್ಸಾಗದಷ್ಟು ಸರಳ ಸಂಪನ್ನೆಯರಿವರು) ಬದುಕಿನ ವಿವಿಧ ಮಜಲುಗಳಲ್ಲಿ ಕಷ್ಟಗಳನ್ನು ಕಂಡಂತವರು. ಒಡಹುಟ್ಟಿದವರನ್ನು ಪ್ರಾಣಕ್ಕಿಂತ ಮಿಗಿಲಾಗಿ ಪ್ರೀತಿಸುವ ಹೆಗ್ಗೂರತ್ತೆ ತನ್ನ ಅಪ್ಪನನ್ನೂ ಸಾಕಿದ ಪರಿ, ತಿಂಡಿಕಟ್ಟಿಕೊಡುವ ಕಕ್ಕುಲತೆ, ತನ್ನ ಕೈಲಾಗುವಷ್ಟು ಕಾಲ ಮಾಡಿಬಡಿಸಿ ಸಂತೃಪ್ತಿ ಹೊಂದುತ್ತಿದ್ದ ಅನ್ನಪೂರ್ಣೆ..... ವೈಧವ್ಯಕ್ಕೆ ತುತ್ತಾದಾಗ ಕತೆಗಾರ್ತಿಯ ಮನದಲ್ಲೇಳುವ ಸಂಕಟದ ಅಲೆ.......ಕೃತಕತೆಯಿಲ್ಲದೆ ನೈಜವಾಗಿ ಮೂಡಿ ಬಂದ ರೀತಿ ಕಥಾ ನಿರೂಪಣೆಯ ಮೇಲಿರುವ ಲೇಖಕಿಗಿರುವ ಹಿಡಿತವನ್ನು ತೋರಿಸುತ್ತದೆ.

ಇಡೀ ಕಥಾ ಸಂಕಲನದಲ್ಲಿ ಎಲ್ಲಿಯೂ ಉತ್ಪ್ರೇಕ್ಷೆ ಆಡಂಬರಗಳಾಗಲೀ ಕಣ್ಣಿಗೆ ರಾಚುವ ದೃಶ್ಯ ವೈಭವಗಳಾಗಲೀ, ವರ್ಣನೆಗಳಾಗಲೀ ಕಾಣಸಿಗುವುದಿಲ್ಲ. ಎಲ್ಲವೂ ಹದವರಿತು ಬಳಸುವ ಪದಗಳು. ಪದಗಳ ಬಳಕೆಯಲ್ಲಿ ಮೃದುತ್ವ ಸರಳತೆಗಳೇ ಎದ್ದು ಕಾಣುವುದು.

ಹೆಚ್ಚಿನ ಕಥೆಗಳ ಹಂದರ ಸಿರಸಿಯ ಹತ್ತಿರ ಅಡಿಕೆ ತೋಟದ ಹಳ್ಳಿಯೊಂದರ ಹವ್ಯಕ ಕುಂಟುಂಬವೇ ಆಗಿದೆ. ಉತ್ತರ ಕನ್ನಡ ಜಿಲ್ಲೆಯ ಪರಿಸರ, ಅಡಿಕೆ, ಬಾಳೆ, ಏಲಕ್ಕಿಗಳ ತೋಟ

ಕಣ್ಮುಂದೆ ಕಟ್ಟಿ ನಿಲ್ಲುತ್ತದೆ. ಹವ್ಯಕರ ವೈಶಿಷ್ಟ್ಯ, ಸರಳತೆ, ಜೀವನ ಶೈಲಿ, ತಿಂಡಿ, ತೀರ್ಥ ಅಡುಗೆಗಳ ಬಗ್ಗೆ ಹೇಳುವಾಗ ಶುದ್ಧ ಗ್ರಾಮೀಣ ಜನಪದ ಲೋಕವೊಂದನ್ನು ಹೊಕ್ಕಂಥ ಹಿತವಾದ ಅನುಭವವಾಗುತ್ತದೆ.

ಆಗಲೇ ಕಾರು ಮನೆಯ ದಣಪೆಯ ಮುಂದೆ ನಿಂತಾಗಿತ್ತು. "ಬಪ್ಪ ಅಂದಿ, ದೊಡ್ಡಾಯಿ ಅಂದಿ, ತೇಜಕ್ಕ ಅಂದಿ, ಪಯಕ್ಕ ಅಂದಿ...(ಸಿರಸಿಯ ಸುತ್ತಮುತ್ತಲಿನ ಮಲೆನಾಡಿನ ಯಾವುದೇ ಹವ್ಯಕ ತೋಟಿಗರ ಮನೆಗೆ ನೆಂಟರು ಬಂದಿಳಿದರೂ ಹೀಗೆ ಪ್ರತಿಯೊಬ್ಬರನ್ನು ಹೆಸರು ಹೇಳಿ ಸ್ವಾಗತಿಸುವುದು ಈಗಲೂ ಇರುವ ಕ್ರಮ.) ಎಂಬ ಮಕ್ಕಳ ಮಾತನಾಡಿಸುವಿಕೆ, ದೊಡ್ಡವರ ಕುಶಲೋಪಚಾರಗಳ ಗಲಾಟೆಯೊಂದಿಗೆ ಮನೆ ಹೊಕ್ಕಾಯಿತು. ಸುಮಾರು ಅರ್ಧ ಗಂಟೆ ಇಡೀ ಮನೆ ತುಂಬಾ ನಗುವಿನ ಅಲೆಯೇ ತುಂಬಿತು. "ನಿಂಗಕ್ಕೆಲ್ಲಾ ಆಸ್ರಿಗೆ ಎಂತಾ ಅಕ್ಕು" ಎಂಬ ಚಿಕ್ಕಮ್ಮನ ಪ್ರಶ್ನೆಯಿಂದಲೇ ಎಲ್ಲರ ಯೋಚನೆಯೂ ಅತ್ತ ಹರಿದಿದ್ದು (ಇಂಬಕ್ಕ)

ಮನೆಯಲ್ಲೊಬ್ಬದು ವಾತ್ಸಲ್ಯ ಮೂರ್ತಿ ಅಜ್ಜಿ, ಹಸಿಮೆಣಸು ಬೆರೆಸಿದ್ದ ಸವತೆ ಮಿಡಿ, ಮೆಣಸು ಹಾಕಿ ಕಡ್ಡಿ ಸಿಕ್ಕಿಸಿಕೊಡುತಿದ್ದ ಹುಣಸೆ ಹಣ್ಣಿನ ಲಾಲಿಪಾಪ್, ಏಲಕ್ಕಿ ತೋಟದಲ್ಲಿರುವ ಅಪ್ಪ ಕೊಡುವ ಹಸಿ ಏಲಕ್ಕಿ..... ಹೆಗ್ನೂರು, ನಿಲ್ಕುಂದಗಳಂಥ ಹಳ್ಳಿಗಳ ಮಕ್ಕಳು ಬೆಳೆಯುವ ಪರಿಸರವೇ ಇಂಥದು. ಇದನ್ನೂ ಯಾವ ಉತ್ಪ್ರೇಕ್ಷೆಯೂ ಇಲ್ಲದೆ ಲೇಖಕಿ ತೆರೆದಿಡುತ್ತಾ ಹೋಗಿದ್ದಾರೆ.

ಹಾಗೆಂದು ಈ ಪ್ರಕೃತಿ ಸಮೃದ್ಧಿಯ ನಡುವೆ ಘಟಿಸುವುದೆಲ್ಲಾ ರಮ್ಯ ಸುಂದರವೆಂದು ಭಾವಿಸಬೇಕಿಲ್ಲ. "....ತಾಯಿ ಪ್ರಾಪಂಚಿಕ ಜ್ಞಾನವಿಲ್ಲದ ಮುಗ್ಧೆ. ತಂದೆ ಏನೊಂದು ಅಧಿಕಾರವಿಲ್ಲದವ. ಒಬ್ಬ ಅಪ್ರಯೋಜಕ ಅಣ್ಣ. ಸದಾ ಜೂಜು ಹೊಡೆತ ಬೈಗುಳಲ್ಲೇ ಆತನ ದಿನದ ಆರಂಭ. ತಂದೆ ತಾಯಿಯೆಂಬ ಭಯವಾಗಲೀ ತಂಗಿಯೆಂಬ ಪ್ರೇಮವಾಗಲೀ ಇನಿತೂ ಇಲ್ಲದವ. ಒಬ್ಬ ತಮ್ಮ. ಆತನೂ ಅಷ್ಟಕಷ್ಟೆ. ಅಣ್ಣನಂತೆ ದುಷ್ಟನಲ್ಲದಿದ್ದರೂ ಏನೊಂದು ಕೆಲಸವನ್ನೂ ಮಾಡದೆ ಸುಮ್ಮನೆ ಕುಳಿತಿರುವವ. ಮನೆಯಲ್ಲೋ ಕಡುಬಡತನ ಇಂತಹ ಪರಿಸರದಲ್ಲಿ ಇಂಬಕ್ಕ ಕೆಸರುಗೊಳ್ಳದಲ್ಲಿರುವ ತಾವರೆಯಂತಿದ್ದಳು...(ಇಂಬಕ್ಕ) ಈ ತಾವರೆಯಂಥಹ ಹುಡುಗಿ ಬೆಳೆದು ದೊಡ್ಡವಳಾಗಿ ಮಾನಸಿಕ ಅಸ್ವಸ್ಥತೆಗೆ ಒಳಗಾಗಿ ಗುಣಮುಖಳಾಗಿ, ಮದುವೆಯೂ ಆಗಿ ಬದುಕು ಅರಳುವ ಮೊದಲೇ ನಿಗೂಢವಾಗಿ ಸಾವನ್ನಪ್ಪುತ್ತಾಳೆ. ಬಡತನ ಮುಗ್ಧತೆ ಅಜ್ಞಾನಗಳನ್ನೊಳಗೊಂಡಿರುವ ಹಳ್ಳಿಯ ಬಡ ಕುಟುಂಬವೊಂದರ ದಾರುಣ ಚಿತ್ರಣವನ್ನು ಪರಿಣಾಮಕಾರಿಯಾಗಿ ಕಟ್ಟಿಕೊಡುವ ಈ ಕತೆ ತುಂಬಾ ಕಾಲ ನಮ್ಮನ್ನು ಆವರಿಸಿಕೊಳ್ಳುತ್ತದೆ.

ಈ ಸಂಕಲನದ ಅತ್ಯುತ್ತಮ ಕಥೆ ಕಾಣ್ಕೆ ಎನ್ನಬಹುದು. ಹವ್ಯಕ ಸಂಸ್ಕೃತಿಯ ಸಾಕಾರ ಮೂರ್ತಿಯಾದ ಸಾತಜ್ಜಿ, ಮೊಮ್ಮಗಳಾದ ಕಥಾ ನಿರೂಪಕಿಯ ಮೇಲೆ ತೋರುವ ಅಪಾರ ಪ್ರೀತಿ ತಲೆಮಾರುಗಳು ತಲೆಮಾರನ್ನೂ ಅಪ್ಪಿಕೊಂಡ ವಾತ್ಸಲ್ಯದ ಅಗಾಧತೆಗೆ ಕನ್ನಡಿ ಹಿಡಿದಿದೆ. ಕಥಾ ನಿರೂಪಕಿ ಭಾವನ ಬೆಳಗಾಗುವಷ್ಟರಲ್ಲಿ ತೋಟವಿಳಿದು ಪ್ರಕೃತಿ ಸೌಂದರ್ಯದಲ್ಲಿ ವಿಹರಿಸುವಳು.

"ಅಲ್ದೇ ಭಾವನ, ಯಾವಾಗ್ ನೋಡಿದ್ರೂ ತೋಟ, ಗದ್ದೆ, ನದಿ ಹೇಳಿ ಭೂತದ್ಹಾಂಗೆಯಾ ತಿರಗ್ತಾ ಇರ್‍ತ್ಯಲೇ? ಅದೆಂಥಾ ಖುಶಿ ಸಿಗ್ತೋ ಏನೋ? ಅದೇ ಗಿಡ ಅದೇ ಹೂವು... ನೋಡಿದ್ದನ್ನೇ ನೋಡದು... ಇಶೀ ಬರೀ ಬೇಜಾರಪ್ಪ" ಎನ್ನುವ ಗೆಳತಿಯೂ ಇದ್ದಾಳೆ.

ಸಾತಜ್ಜಿಗೆ ತಾಯಿಯಿಂದ ಬಂದಿರುವ ಏಕೈಕ ಬಳುವಳಿ ಆಭರಣವಾದ ಮೂಗುತಿ ಕೇವಲ ಒಂದು ಒಡವೆಯಾಗಿ ಕಂಡು ಬರುವಂಥದಲ್ಲ. ತನ್ನಜ್ಜಿಯ ಆತ್ಮಬಲ, ವಿಶ್ವಾಸ, ಛಲ ಎಲ್ಲವೂ ಅದರಲ್ಲಿ ಅಡಕವಾಗಿರುವಂತೆ ಅವಳಿಗೆ ಭಾಸವಾಗುತಿತ್ತು.

"ಜೀವ ನಮ್ಮನ್ನು ಕೇಳಿ ಬತ್ತೂ ಇಲ್ಲೆ, ಹೇಳಿ ಹೋಗ್ತೂ ಇಲ್ಲೆ" ಎನ್ನುತಿದ್ದ ಸಾತಜ್ಜಿಯ ಕೊನೆಯಾಸೆ ತನ್ನ ದೇಹದ ಅವಿಬಾಜ್ಯ ಅಂಗವಾಗಿದ್ದ ಈ ಮೂಗುತಿಯನ್ನು ತನ್ನ ಪ್ರೀತಿಯ ಮೊಮ್ಮಗಳಾದ ಭಾವನಾಳಿಗೆ ತಾನು ಸತ್ತ ಬಳಿಕ ಕೊಡಬೇಕೆಂಬುದು. "ಚಿನ್ನ ಇಪ್ಪದು ಮೈಮೇಲೆ ಹಾಕ್ಯಂಡು ಮೆರೆಸಲಾ? ಎಂದು ಕೇಳುವ ಚಿಕ್ಕ ವಯಸ್ಸಿನ ನಿರೂಪಕಿಯ ಚಿಂತನೆಯ ಪ್ರೌಢಿಮೆಗೆ ಆಶ್ಚರ್ಯವಾಗದಿರದು. ಸಾತಜ್ಜಿ ತೀರಿಕೊಂಡ ದಿನ ಅಲ್ಲಿಗೆ ಹೋದ ಮೊಮ್ಮಗಳಿಗೆ ಕೊನೆಯಲ್ಲಿ ಸಾತಜ್ಜಿಯ ಮಗಳು ಅಜ್ಜಿಯ ಮೂಗುತಿಯಿಟ್ಟ ಕರಡಿಗೆಯನ್ನು ನೀಡುತ್ತಾಳೆ. ಮೂಗುತಿ ತೆರೆದಾಗ ದೂರ ಹೋದ ಸಾತಜ್ಜಿಯೇ ತನ್ನ ಬಳಿ ಮರಳಿ ಬಂದ ಅನುಭವವಾಯಿತು ಅವಳಿಗೆ.....ಅವಳ ಮುಖದಲ್ಲಿ ಅಪೂರ್ವ ತೇಜಸ್ಸು ಮೂಡಿ ಮಂದದಾಸ ಮಿನುಗಿತು. ಆ ನಗು ಫೋಟೋದೊಳಗಿನ ಸಾತಜ್ಜಿಯರೆಗೂ ಹಬ್ಬಿ ಅಲ್ಲೇ ಸ್ಥಿರಗೊಂಡಿತು. ಹೃದಯದಾಳಕ್ಕಿಳಿಯುವ ಕಥೆ ಕಾಣ್ಕೆ.

'ಮೂವತ್ತು ರೂಪಾಯಿ', 'ನಿರ್ಧಾರ', 'ಕೊಲೆಯ ಸುತ್ತ'..... ದಂತ ಕತೆಗಳು ಲೇಖಕಿಯ ಲೋಕ ವೀಕ್ಷಣಾ ಪ್ರವೃತ್ತಿಯಿಂದ ಮೂಡಿ ಬಂದವುಗಳೆನಿಸುತ್ತವೆ. ವಿಡಂಬನೆಗೆ ಅರ್ಹವಾದ ಪಕ್ಕದ್ಮನೆ ಪಂಕಜ್ಜಮ್ಮನಂಥ ಪಾತ್ರಗಳೂ ಇವೆ.

ಲೇಖಕಿ ಮನುಷ್ಯ ಪ್ರಪಂಚದ ಪ್ರಾಪಂಚಿಕ ಕಷ್ಟ ಸುಖ, ವಿಧಿ ತಂದೊಡ್ಡುವ ಸಮಸ್ಯೆಗಳು, ಅವುಗಳ ನಡುವೆಯೂ ಬದುಕಿನಲ್ಲಿ ಆಶಾವಾದವನ್ನು ಸ್ಫುರಿಸುವ ಮನುಷ್ಯ ಸಂಬಂಧಗಳು, ಇವುಗಳನ್ನು ಚಿತ್ರಿಸುವ ಕತೆಗಳಿಗಿಂತ ಭಿನ್ನವಾದ ನೆಲೆಯಲ್ಲಿ ಮೂಡಿ ಬಂದ ಕತೆ 'ಸಾಗರದೊಳಗಿನ ಮಾತು'.

"ನೋವು ಕಣ್ಣೀರಾಗಿ ಹರುಯುತಿದೆ ಕಾಣುವುದಿಲ್ಲವೇ ಉಕ್ಕಿ ಹರಿಯುತ್ತಿರುವುದು? ನನ್ನ ನೀರು ಉಪ್ಪಾಗಿ ನಿನ್ನ ಕಣ್ಣೀರಿನಂತೆ .. ಆದರೂ ನಗುತ್ತಿರುವೆ ಬಿಳಿ ನೊರೆಗಳನ್ನು ಚೆಲ್ಲುತ್ತಾ ಕಪ್ಪು ತೆರೆಗಳನ್ನು ಮರಳಿಸಿ." ಎಂಬ ಸಾಗರದ ಮಾತುಗಳು ನಮ್ಮನ್ನು ಚಿಂತನೆಗೆ ಹಚ್ಚುತ್ತವೆ. ಮನುಷ್ಯನ ಹೆಚ್ಚಿನ ದುಃಖ ತಲ್ಲಣಗಳಿಗೆ ತಾರ್ಕಿಕ ಕಾರಣವನ್ನೂ ಕೊಡುವ ಈ ಕತೆಯಲ್ಲಿ ಸಮುದ್ರ ಕೇಳುವ ಪ್ರಶ್ನೆ "ನಿವೇಕೆ ನಿಮಗೆ ಸೇರದ ನಿಮ್ಮ ಸುಡುವ ಕಾಮನೆ, ಭಾವನೆ, ಆಕಾಂಕ್ಷೆಗಳನ್ನೆಲ್ಲಾ ಹೊರದೂಡಿ ನನ್ನಂತೆ ಆಗಬಾರದು?" ತಾತ್ವಿಕ ಪರಿಹಾರವೂ ಸೂಚ್ಯವಾಗಿ ಹೊಮ್ಮಿರುವುದು ಈ ಕತೆಯ ವೈಶಿಷ್ಟ್ಯ. ವಿಶಿಷ್ಟ ಅನುಭವ ನೀಡುವ ಕತೆ ಸಾಗರದೊಳಗಿನ ಮಾತು.

ಭಾವನೆಗಳನ್ನೂ ಭಾಷೆಯನ್ನೂ ತಾದಾತ್ಮ್ಯದಿಂದ ಜತನದಿಂದ ದುಡಿಸಿಕೊಳ್ಳುವಲ್ಲಿ ಇನ್ನೂ ಸ್ವಲ್ಪ ಶ್ರಮವಹಿಸುವಂತಾದರೆ ತೇಜಸ್ವಿನಿ ಕನ್ನಡದ ಭರವಸೆಯ ಕತೆಗಾರ್ತಿಯಾಗುವಲ್ಲಿ ಸಂಶಯವಿಲ್ಲ.

ಕನ್ನಡದ ಕಥಾ ಕಣಜಕ್ಕೆ ನೀಡಿದ 'ಕಾಣ್ಕೆ'ಗಾಗಿ ತೇಜಸ್ವಿನಿಯನ್ನು ಅಭಿನಂದಿಸುತ್ತಾ, ಈಕೆಯ 'ಕಾಣ್ಕೆ' ಕನ್ನಡಿಗರ ಹೃನ್ಮನಗಳೊಳಗೆ ಪ್ರವೇಶಿಸಲಿ ಎಂದು ಹಾರೈಸುತ್ತೇನೆ.

ವಿಶ್ವವಿದ್ಯಾನಿಲಯ ಕಾಲೇಜು
ಮಂಗಳೂರು.

ಭುವನೇಶ್ವರಿ ಹೆಗಡೆ

ಪ್ರಕಾಶಕರ ನುಡಿ

ಅಧ್ಯಯನ - ಅಧ್ಯಾಪನ, ಸಂಶೋಧನ ಹಾಗೂ ವಿಮರ್ಶಾ ಕ್ಷೇತ್ರಗಳನ್ನು ಒಳಗೊಂಡಿದೆ. ಶೈಕ್ಷಣಿಕ ಕ್ಷೇತ್ರ ಶೈಶವಾವಸ್ಥೆಯಲ್ಲಿ ಮುಖದಿಂದ ಹೊರಟ ಧ್ವನಿಯನ್ನು ಶಿಕ್ಷಣ ಶಾಸ್ತ್ರದಿಂದ ವೇದೋಚ್ಚಾರಕ್ಕೆ ಅಣಿಗೊಳಿಸಿದಾಗ ಅದು ನಾದಪೂರ್ಣ ಮಂತ್ರವಾಗಿ ಹೊರಹೊಮ್ಮುತ್ತದೆ. ಅಂದರೆ 'ಶೀಕ್ಷ್' ಧಾತುವಿನಿಂದ ಶಿಕ್ಷಣವೆಂಬ 'ತಂತ್ರ' ಸಿದ್ಧವಾಯಿತು. ಅದನ್ನು ಸಂಯೋಜಿಸಿದಾಗ (ಸಂಯೋಜಕಃ ದುರ್ಲಭಃ) ಅದು ಮಂತ್ರವಾಗಿ ಪ್ರಭಾವಿಯಾಗಿರುತ್ತದೆ.

ಅದೇ ರೀತಿ ಲಿಪಿಯಿಂದ ಲೇಖನ, ಅದು ಇನ್ನೊಂದು ಕಲೆ. ವಿದ್ಯಾರ್ಥಿ - ಅಧ್ಯಾಪಕರು ಪೂರ್ವೋತ್ತರ ರೂಪಗಳಾದರೆ ವಿದ್ಯೆ ಸಂಧಿಯಾಗುತ್ತದೆ. ಪ್ರವಚನ ಅರ್ಥಾತ್ ಮಾತು (ನಾಲಿಗೆ) - ವಿಮರ್ಶೆ ಸಂಧಾನವಾಗುತ್ತದೆ.

ಮಂತ್ರ, ವಿಮರ್ಶೆಗಳ ಬಗೆಗೆ ಇಂದಿನವರಿಗೆ ಹೇಳಿದರೆ 'ಕಬ್ಬಿಣದ ಕಡಲೆ'ಯೆಂಬ ಪಟ್ಟಿ ಸಿದ್ಧವಾಗಿಬಿಡುತ್ತದೆ. ಹಾಗಾಗಿ ಇದನ್ನು ಪುಸ್ತಕ ರೂಪದಲ್ಲಿ ಪ್ರಕಾಶಿಸಿ ಧನಹೀನರಾಗಲು ಸಾಮಾನ್ಯ ಜನ ತಯಾರಿಲ್ಲ. ಅದಕ್ಕಾಗಿಯೇ '**ಜಯಶ್ರೀ ಪ್ರಕಾಶನ**' ಮಾಡಿದೆ. ಪ್ರಥಮವಾಗಿ ನಮ್ಮ ಮಾರ್ಗದರ್ಶಕರಾದ ಪ್ರೊ. ದಯಾನಂದ ಶಾನಭಾಗರ ಸಲಹೆಯಂತೆ ಲಾಭವಿಲ್ಲದೇ Bhramarshi Daviratars Chando Darshana : A critical study (ಸಂ. ಡಾ| ಜಿ.ಎನ್. ಭಟ್) ಪ್ರಕಟವಾಗಿತ್ತು (2001). ಅನಂತರ Ph.D ಮಹಾಪ್ರಬಂಧವನ್ನು ಪುಸ್ತಕ ರೂಪದಲ್ಲಿ तौळव मण्डलस्य संस्कृत कृति समीक्षा (ಡಾ. ಕೃಷ್ಣಮೂರ್ತಿ ನಿಟಿಲಾಪುರ 2006) ಪ್ರಕಾಶಿತವಾಯಿತು. ಇದೀಗ ಶ್ರೀಮತಿ ತೇಜಸ್ವಿನಿ ಹೆಗಡೆಯವರ '**ಕಾಣ್ಕೆ**' ಕಥಾಸಂಕಲನ ಹಾಗೂ '**ಪ್ರತಿಬಿಂಬ**' ಕವನಸಂಕಲನವನ್ನು ಪ್ರಕಾಶಿಸುತ್ತಿದ್ದೇವೆ. ಇಂತಹ ಪ್ರಕಟಣೆಯಿಂದ ಧನಲಾಭವಿಲ್ಲವೆಂಬುದು ಶತಃ ಸಿದ್ಧ. ಆದರೂ ಉತ್ತಮ ಕೃತಿಗಳು ಬೆಳಕು ಕಾಣಲೇಬೇಕೆಂಬುದೇ ನಮ್ಮ ಧ್ಯೇಯ. ಅದರ ಸಾಕಾರವೇ ನಮ್ಮ ಕಾರ್ಯ.

ಪ್ರಸ್ತುತ ಈ ಕಥೆ, ಕವನಗಳ ಪುಸ್ತಕಗಳನ್ನು ಪ್ರಕಟಿಸಲು ಅನುಮತಿ ನೀಡಿದ ಶ್ರೀಮತಿ ತೇಜಸ್ವಿನಿ ಹೆಗಡೆಯವರಿಗೆ ಶುಭಕೋರುವೆ. ಅಂದವಾಗಿ ಮತ್ತು ಸಕಾಲದಲ್ಲಿ ಮುದ್ರಿಸಿದ ಗಾಯತ್ರಿ ಪಿಂಟರ್ಸ್ ಮಾಲಕರಾದ ಶ್ರೀ ಎಂ. ನಾಗರಾಜರಿಗೆ ವಂದನೆಗಳು.

• **ಡಾ| ಜಿ.ಎನ್. ಭಟ್**
ಪ್ರಕಾಶಕರ ಪರವಾಗಿ

ನನ್ನ ಮಾತು

'ಕಾಣ್ಕೆ' ಇದು ನನ್ನ ಮೊದಲನೆಯ ಕಥಾ ಸಂಕಲನ. ಮೊದಲಿನಿಂದಲೂ ನನಗೆ ವೈದೇಹಿ ಅವರ ಕಥೆಗಳೆಂದರೆ ಬಲು ಇಷ್ಟ. ಅವರ ಶೈಲಿ, ವಸ್ತು ನಿರೂಪಣೆ, ಪಾತ್ರಗಳು, ಎಲ್ಲಕ್ಕಿಂತ ಹೆಚ್ಚಾಗಿ, ಅವರು ಬಳಸಿದ ಹವ್ಯಕ ಭಾಷೆ ನನಗೆ ತುಂಬಾ ಮೆಚ್ಚುಗೆಯಾದವು. ಇವರ ಕಥೆಗಳನ್ನು ಓದುತ್ತಾ ನನಗೇ ತಿಳಿಯದಂತೆಯೇ, ನನ್ನೊಳಗಿದ್ದ ಓರ್ವ ಕಥೆಗಾರ್ತಿ ಹೊರಬಂದಳೆನ್ನಬಹುದು. ನನಗೆ ಕೇವಲ ಕಪೋಕಲ್ಪಿತ ವಸ್ತುಗಳನ್ನು ಕಥೆಗಳನ್ನಾಗಿ ರಚಿಸಿ ಗೊತ್ತಿಲ್ಲ. ಹಾಗಾಗಿ ನನ್ನ ಅನುಭವಕ್ಕೆ ಬಂದ, ಸತ್ಯಕ್ಕೆ ಸನಿಹವಾದ ವಾಸ್ತವಿಕ ವಿಷಯಗಳಿಗೆ ಕಲ್ಪನೆಯ ಮೆರುಗನ್ನು ಕೊಟ್ಟು ರಚಿಸಿದ ಕಥೆಗಳು 'ಕಾಣ್ಕೆ'ಯಲ್ಲಿದೆ. ಇಲ್ಲಿಬರುವ ಕಥೆಗಳ ಎಳೆಗಳೆಲ್ಲಾ ಒಂದೋ ನನ್ನೊಂದಿಗೆ ಘಟಿಸಿದಂತವುಗಳು, ನಾನೇ ಕಂಡವು, ಇಲ್ಲಾ ಇತರರಿಂದ ಕೇಳಿದಂತವುಗಳು.

ನನ್ನ ಮೊದಲ ಕತೆ 'ಹೆಗ್ಗೂರತ್ತೆ'. ನನ್ನತ್ತೆಯ ಬಗ್ಗೆ ನನಗಿದ್ದ ಅದಮ್ಯ ಪ್ರೀತಿಯನ್ನು ವ್ಯಕ್ತ ಪಡಿಸಿ ಆದಕ್ಕೆ ಕಥಾನಕ ರೂಪವನ್ನು ಕೊಡಲು ಹೊರಟಾಗ ನನಗೆ ಪ್ರಿಯವೆನಿಸದ್ದು ನನ್ನ ಮಾತೃಭಾಷೆಯೂ ಆಗಿರುವ ಹವ್ಯಕ ಭಾಷೆ. ಈ ಭಾಷೆಯ ಮೂಲಕ ನನ್ನೊಳಗಿನ ಭಾವನೆಗಳನ್ನು ತುಂಬಾ ಪ್ರಭಾವಿಯಾಗಿ ಹೊರತರಬಹುದೆಂದು ನನಗಾಗ ಅನಿಸಿತು. ಹಾಗಾಗಿಯೇ ನನ್ನ ಕಥಾ ಸಂಕಲನದಲ್ಲಿರುವ ಒಟ್ಟು ೯ ಕಥೆಗಳಲ್ಲಿ ೬ ಕಥೆಗಳು ಹವ್ಯಕ ಭಾಷೆಯ ನಿರೂಪಣೆಯಲ್ಲಿವೆ.

ಈ ಕಥಾ ಸಂಕಲನದಲ್ಲಿರುವ 'ಹೆಗ್ಗೂರತ್ತೆ' ಮತ್ತು 'ಕಾಣ್ಕೆ' ಕಥೆಗಳು **ಹೊಸದಿಗಂತದಲ್ಲೂ**, 'ಇಂಬಕ್ಕ' ಕಥೆ **ತರಂಗದಲ್ಲೂ**, 'ಮೂವತ್ತು ರೂಪಾಯಿ' ಕಥೆ **ಶಿರಸಿ ಸಮಾಚಾರ ಪತ್ರಿಕೆಯಲ್ಲೂ** ಪ್ರಕಟವಾಗಿವೆ. ಪ್ರಕಟಿಸಿದ ಎಲ್ಲಾ ಪತ್ರಿಕೆಗಳಿಗೆ ನನ್ನ ಕೃತಜ್ಞತೆಗಳು.

ನನ್ನ ಕಥೆಗಳನ್ನು ತಿದ್ದಿ, ಸಲಹೆಗಳನ್ನಿತ್ತ ನನ್ನ ತಂದೆಯವರಾದ ಡಾ.ಜಿ.ಎನ್.ಭಟ್ಟರಿಗೂ ಹಾಗೂ ಗುರುಗಳಾದ ಶ್ರೀ ಸುಮುಖಾನಂದ ಜಲವಳ್ಳಿಯವರಿಗೂ, ನನ್ನ ತುಂಬು ಮನದ ಕೃತಜ್ಞತೆಗಳು. ನನಗೆ ಕಥೆ ಬರೆಯಲು ಪ್ರೋತ್ಸಾಹಿಸಿದ ನನ್ನ ತಾಯಿ ಶ್ರೀಮತಿ ಜಯಲಕ್ಷ್ಮಿ ಭಟ್ ಅವರಿಗೂ ನನ್ನ ಮನದಾಳದ ಕೃತಜ್ಞತೆಗಳು. ನನ್ನೆಲ್ಲಾ ಆಸಕ್ತಿಗಳಿಗೆ, ಆಕಾಂಕ್ಷೆಗಳಿಗೆ ನೀರೆರೆದು, ಪ್ರೋತ್ಸಾಹಿಸಿ, ನನಗೆ ಬೆನ್ನೆಲುಬಾಗಿ ನಿಂತು,

ನನ್ನ ಬರಹಗಳಿಗೆ ಸ್ಫೂರ್ತಿಯ ಸೆಲೆಯಾಗಿರುವ ನನ್ನ ಪತಿ ಶ್ರೀ ರಾಮಕೃಷ್ಣ ಹೆಗಡೆಯವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ನಾನೇನೂ ದೊಡ್ಡ ಕಥೆಗಾರ್ತಿಯಲ್ಲ. ಹಾಗಾಗಿ ನನಗೆ ಈ ಪುಸ್ತಕ ಹೊರ ತರಲು ಸ್ವಲ್ಪ ಅಂಜಿಕೆಯಿತ್ತು. ಆದರೆ ಇತ್ತೀಚಿಗೆ ಅಂತರ್ಜಾಲದಲ್ಲಿ ತೆಗೆದ ನನ್ನದೇ ಆದ ಬ್ಲಾಗ್‌ನಿಂದಾಗಿ ನನಗೆ ಹೊಸ ಸ್ಫೂರ್ತಿ ಬಂತು. ಅಲ್ಲಿ ಹಾಕಿದ ನನ್ನ ಕೆಲವೊಂದು ಕವನ, ಕಥೆಗಳಿಗೆ ಹಲವಾರು ಮೆಚ್ಚುಗೆಗಳು, ಸಲಹೆಗಳು ಬಂದವು. ಇದರಿಂದಾಗಿ ನನ್ನ ಬರಹಗಳನ್ನು ತಿದ್ದಿಕೊಂಡು ಪುಸ್ತಕ ರೂಪದಲ್ಲಿಹೊರತರುವ ಸಾಹಸಕ್ಕೆ ಮತ್ತಷ್ಟು ಪುಷ್ಟಿ ಸಿಕ್ಕಂತಾಯಿತು. ನನಗೆ ಸಲಹೆ, ಪ್ರೋತ್ಸಾಹಗಳನ್ನಿತ್ತು ಹುರಿದುಂಬಿಸಿದ ಎಲ್ಲಾ ಬ್ಲಾಗಿಶ್ಚರಿಗಳಿಗೂ ನನ್ನ ವಂದನೆಗಳು.

ವೈದೇಹಿಯವರಂತೇ ನಾನು ತುಂಬಾ ಮೆಚ್ಚಿಕೊಂಡಿರುವ ಇನ್ನೊಬ್ಬ ಲೇಖಕಿಯೆಂದರೆ, ವಿಶ್ವವಿದ್ಯಾನಿಲಯ ಕಾಲೇಜಿನಲ್ಲಿ ಅರ್ಥಶಾಸ್ತ್ರ ಅಧ್ಯಾಪಕಿಯಾಗಿರುವ, ಶ್ರೀಮತಿ ಭುವನೇಶ್ವರಿ ಹೆಗಡೆಯವರು. ಅದೃಷ್ಟವಶಾತ್ ಅವರೇ ಈ ಕಥಾ ಸಂಕಲನಕ್ಕೆ ತುಂಬಾ ಆಸ್ಥೆಯಿಂದ, ಆಕ್ಕರೆಯಿಂದ 'ಮುನ್ನುಡಿ' ಬರೆದುಕೊಟ್ಟು ನನ್ನನ್ನು ಆಶೀರ್ವದಿಸುವಂತಾದದ್ದು, ನನ್ನ ಸುದೈವವೆಂದೇ ಹೇಳಬಹುದು. ಅವರಿಗೆ ನಾನೆಂದೆಂದೂ ಚಿರಋಣಿ.

'ಕಾಣ್ಕೆ' ಕಥಾ ಸಂಕಲನವನ್ನು ನನ್ನ ಇಬ್ಬರು ಅಜ್ಜಿಯಂದಿರಾದ ದಿ.ಸುಬ್ಬಲಕ್ಷ್ಮಿ ಭಟ್ಟ ಅವರಿಗೂ (ನನ್ನ ತಂದೆಯ ಮಾತೃಶ್ರೀ) ಹಾಗೂ ದಿ. ಸರಸ್ವತಿ ಜೋಶಿಯವರಿಗೂ (ನನ್ನ ತಾಯಿಯ ಮಾತೃಶ್ರೀ) ಅರ್ಪಿಸಿದ್ದೇನೆ. ಇವರಿಬ್ಬರ ಒಡನಾಟದಲ್ಲಿ ನಾನದೆಷ್ಟೋ ಬೆಳೆದಿದ್ದೇನೆ. ಅವರು ಕಲಿಸಿಹೋದ ಜೀವನ ಪಾಠಗಳನ್ನು ನನಗೆಂದೂ ಮರೆಯಲಾಗದು. ಹಾಗಾಗಿ ಇವರಿಬ್ಬರಿಗೂ ನಾನು 'ಕಾಣ್ಕೆ'ಯ ಮೂಲಕ ನನ್ನ ಕಥಾಂಜಲಿಪೂರ್ವಕ ಶ್ರದ್ಧಾಂಜಲಿ ಅರ್ಪಿಸುತ್ತಿದ್ದೇನೆ.

'ಕಾಣ್ಕೆ' ಯನ್ನು ಕಾಣ್ಕೆಯಾಗಿ ನಿಮ್ಮ ಮುಂದಿಡುತ್ತಿದ್ದೇನೆ. ಕಥಾ ಪ್ರಪಂಚಕ್ಕೆ ಇದು ನಾನಿಡುತ್ತಿರುವ ಅಂಬೆಗಾಲಷ್ಟೇ. ಹಾಗಾಗಿ ಯಾವುದೇ ಕಂದುಕೊರತೆಗಳಿದ್ದರೂ ತಿದ್ದಿ, ಸಲಹೆಗಳನ್ನಿತ್ತು, ಪ್ರೋತ್ಸಾಹ ನೀಡಬೇಕೆಂದು ವಿನಮ್ರಳಾಗಿ ವಿನಂತಿಸುವೆ.

• ತೇಜಸ್ವಿನಿ ಹೆಗಡ

ತಂದೆ ತಾಯಂದಿರ ತಾಯಂದಿರಾದ ದಿ। ಸುಬ್ಬುಲಕ್ಷ್ಮಿ
ಹಾಗೂ ದಿ। ಸರಸ್ವತಿ ಅಜ್ಜಿಯರಿಗೆ

ಕಾಣ್ಕೆ - ಅರ್ಪಿತ





<u>ಪರಿವಿಡಿ</u>

ಜಯಶ್ರೀ ಪ್ರಕಾಶನದ ಪ್ರಕಟಣೆಗಳು :

- Bhramarshi Daviratars Chando Darshana :
  A critical study - **Ed. Dr. G.N. Bhat**
- तौळव मण्डलस्य संस्कृत कृति समीक्षा
  - **Dr. Krishnamurthy Nitilapura**
- ಕಾಣ್ಕೆ
- ಪ್ರತಿಬಿಂಬ

} - ಶ್ರೀಮತಿ ತೇಜಸ್ವಿನಿ ಹೆಗಡೆ

ಹೆಗ್ನೂರತ್ತೆ

"ತೇಜು ಈಗಷ್ಟೇ ಹೆಗ್ನೂರಿಂದ ಫೋನ್ ಇತ್ತು. ಮಾವಂಗೆ ರಾಶಿ ಹೆಚ್ಚಾಗ್ಹೋಯಡ, ಅಪ್ಪಯ್ಯ ಅಲ್ಲಿಗೇ ಹೋಜ, ಬಪ್ಪಂಗ್ ತಿಳ್ಸವುಡು" ಚಿಕ್ಕಪ್ಪನ ಮಗಳಾದ ಪೂರ್ಣಿಮಳ ಈ ಮಾತುಗಳು ಇಡೀ ಶರೀರವನ್ನೇ ಮರಗಟ್ಟುವಂತೆ ಮಾಡಿದವು. ಒಂದು ಕ್ಷಣ ಏನೂ ತೋಚಲಿಲ್ಲ. ಆಕೆಯಲ್ಲಿ ಕೇಳಬೇಕಾದ ಪ್ರಶ್ನೆಗಳೆಲ್ಲಾ ನನ್ನಲ್ಲೇ ಉಳಿದವು. ಯಾವಾಗ ನಾನು ಫೋನ್ ಅಮ್ಮನಿಗೆ ಕೊಟ್ಟೆ ಎಂದೇ ತಿಳಿಯಲಿಲ್ಲ. ಅಮ್ಮನ ಗಾಬರಿಯಿಂದ ಕೂಡಿದ ಉದ್ಗಾರದ ಮಾತುಗಳೊಂದೂ ಕೇಳದಂತಾದವು.

ನಮ್ಮ ಮೂಲ ಮನೆ ಇರುವುದು ಶಿರಸಿಯಿಂದ 25 ಕಿ.ಮೀ. ಒಳಗೆ. ಊರ ಹೆಸರು 'ಹರಿಗಾರ'. ಅಪ್ಪ ಆಡಿ ಬೆಳೆದ, ಕಲಿತು ನುರಿತ, ಅನುಭವಗಳ ಮೂಟೆ ಹೊತ್ತು ಪ್ರಬುದ್ಧನಾದ ಊರು. ಹಾಗಾಗಿ ನನ್ನ ಪಾಲಿಗೆ ಅದು ಸದಾ ಅಪ್ಪನ ಮನೆ ಎಂದೇ ಅನಿಸುತ್ತಿತ್ತು. ಹುಟ್ಟಿ ಬೆಳೆದ ಈ ಮಂಗಳೂರೇ ನನ್ನ ಮನೆ ಎಂದೆನಿಸುತ್ತಿತ್ತು. ಆದರೆ ನಾನು ಬೆಳೆದಂತೆ ಅಪ್ಪನ ಅನುಭವಗಳ ಕಥೆ, ಅದನ್ನು ಹೇಳುವಾಗ ಮೂಡುತ್ತಿದ್ದ ಅಮಿತಾನಂದ, ಬಾಲ್ಯದ ನೆನಪನ್ನು ಒಂದೊಂದೇ ತೆರೆದು ಖುಷಿ ಪಡುವ ಮುಖ ಇವನ್ನೆಲ್ಲಾ ಕಂಡಾಗ ಅದೇ ನನ್ನ ಮನೆ ಎಂದೆನಿಸಿತು. ವಿಶೇಷ ಅಂದರೆ ಅಪ್ಪ ಮನೆಯ ಕುರಿತು, ತನ್ನ ಬಾಲ್ಯದ ಕುರಿತು ಏನೇ ವಿಷಯ ಹೇಳುತ್ತಿರಲಿ, ಅದು ಕೊನೆಗೆ ಆತನ 'ಹೆಗ್ನೂರ್ ಅಕ್ಕಯ್ಯ'ನ ಕಡೆಗೇ ಬಂದು ನಿಲ್ಲುತ್ತಿತ್ತು.

ಹರಿಗಾರದಿಂದ ಸುಮಾರು ೩ ಕಿಲೋಮೀಟರ್ ದೂರದಲ್ಲಿದೆ "ಹೆಗ್ನೂರು". ಅದೇ ನನ್ನ ಹೆಗ್ನೂರತ್ತೆಯ, ಅಪ್ಪನ ಪ್ರೀತಿಯ ಅಕ್ಕಯ್ಯನ ಮನೆ. ಕೆಲವೊಮ್ಮೆ ನಾನು ಅಪ್ಪನನ್ನು ಚುಡಾಯಿಸಲು 'ಹೆಗ್ಗಣೂರು' ಎಂದೂ ಕರೆಯುವುದಿದೆ. ನನಗಿರುವ ಐದು ಮಂದಿ ಅತ್ತೆಯಂದಿರಲ್ಲಿ ಹೆಗ್ನೂರತ್ತೆಯೇ ಮೊದಲನೆಯವಳು. ಅಪ್ಪನ ಹಿರಿಯಕ್ಕ. ಉಳಿದ ಅಕ್ಕಂದಿರನ್ನು ಚಂದ್ರಕಲಕ್ಕಯ್ಯ, ರಾಧಕ್ಕಯ್ಯ ಎಂದು ಕರೆಯುವ ಅಪ್ಪ ಮತ್ತು ಚಿಕ್ಕಪ್ಪಂದಿರು ದೊಡ್ಡತ್ತೆಯನ್ನು ಮಾತ್ರ ಪ್ರೀತಿಯಿಂದ ಅಕ್ಕಯ್ಯ ಎಂದೇ ಕರೆಯುವುದು. ನಾವೂ ಅಷ್ಟೆ ಉಳಿದ ಅತ್ತೆಯರನ್ನು ಸುಶೀಲತ್ತೆ, ಸಾವಿತ್ರತ್ತೆ ಅಂದು ಕರೆದರೆ, ದೊಡ್ಡತ್ತೆಯನ್ನು ಮಾತ್ರ ಹೆಗ್ನೂರತ್ತೆ ಎಂದೇ ಕರೆಯುವುದು. ಅಪ್ಪನ 'ಅಕ್ಕಯ್ಯ' ಎಂಬ ಕರೆಯಲ್ಲೇ ಆತನಿಗೆ ಅತ್ತೆಯ ಮೇಲೆ ಇರುವ ಗೌರವ, ಭಕ್ತಿ, ಅದಮ್ಯವಾದ ಪ್ರೀತಿ, ಶ್ರದ್ಧೆ ಎಲ್ಲವನ್ನೂ ಕಾಣಬಹುದು.

"ತೇಜು ನಿಂಗಕಗೆ ನೆನ್ಪಿದ್ದದ್ ಸುಳ್ಳು. ನಿಂಗ ಸಣ್ಕಿರ್ಬೇಕಿದ್ರೆ ಬೆಳ್ಗ್ಗಂಜಾವ ಹೆಗ್ನೂರ್ ಕತ್ರ್ಯಲ್ಲಿ ಬಸ್ಸಿಗ್ ಕಾದ್‌ನಿಂತ್ಕಂಡು ಅಕ್ಕಯ್ಯ ತಿಂಡಿ ಕಟ್ಟಕೊಡ್ತಿತ್ತು. ಈಗ ಅನಸ್ತು, ಬಹುಶಃ ಆಯಿಗೆ ಮಾಡಲಾಗ್ತಿಲ್ಲೆ ಹೇಳಿ ತಾನೇ ಮಾಡ್ ಕೊಡ್ತಿತ್ತು" ಎಂದು ಅಪ್ಪ ಹಿಂದಿನ ಸವಿನೆನಪಿಗೆ ತೊಡಗುವಾಗ ನನಗೂ ಆ ದೃಶ್ಯ ಅಸ್ಪಷ್ಟವಾಗಿ ನೆನಪಿಗೆ ಬರುತ್ತಿತ್ತು. "ಆನು ಹುಟ್ಬೇಕಿದ್ರೆ ಅಕ್ಕಯ್ಯಂಗೆ ಮದ್ವೆಯಾಗಿ ಒಂದವರ್ಷ ಆಗಿತ್ತಡ. ಹಾಂಗಾಗಿ ಯಂಗೆ ಅಕ್ಕಯ್ಯ, ಭಾವ ಇನ್ನೊಂದು ಅಪ್ಪಯ್ಯ, ಆಯಿ ಇದ್ದಾಂಗೆಯಾ" ಎಂದು ಅಪ್ಪ ಮೊದಲ ಬಾರಿ ಹೇಳಿದಾಗ ತುಂಬಾ ಬೆರಗಾಗಿದ್ದೆ. ಇದರಿಂದಲೇ ಅಪ್ಪನ ಹಾಗೂ ಅತ್ತೆಯ ನಂಟು ಎಷ್ಟು ಗಾಢವಾಗಿರಬಹುದೆಂದು ಎಣಿಸಿದ್ದೆ. ಮನೆಯಿಂದ ಬಂದ ಲಾಡು, ಲಡ್ಡಿಗೆ, ಹೋಳಿಗೆ, ತೊಡೆದೇವ, ಯಾವುದೇ ಸಿಹಿ ತಿನಿಸಿರಲಿ, ಎಲ್ಲದರ ನಡುವೆಯೂ ಅಪ್ಪ "ಈ ಹೋಳ್ಗಿ ಅಕ್ಕಯ್ಯಂದೆಯಾ, ತೊಡೆದೇವಂತೂ ಹೆಗ್ನೂರಿದೆಯಾ" ಎಂದು ತಟ್ಟನೆ ಹೇಳಿಬಿಡುವ. ನಾನೂ ಕೆಲವೊಮ್ಮೆ ಹೆಗ್ನೂರತ್ತೆಯ ತಿಂಡಿ ಮತ್ತು ಬೇರೆಯ ಸಿಹಿತಿಂಡಿಗಳ ನಡುವಿನ ವ್ಯತ್ಯಾಸ ತಿಳಿಯದಿದ್ದರೂ ಅಪ್ಪನ ಮಾತಿಗೆ ದನಿ ಗೂಡಿಸುತ್ತಿದ್ದೆ. ಅತ್ತೆಯ ಸಿಹಿ ತಿಂಡಿಯ ಮೇಲೆ ಆತನಿಗಿದ್ದ ಅಮಿತ ಪ್ರೀತಿ, ವಿಶ್ವಾಸ ನನಗೂ ತಾಗಿ ನನ್ನಿಂದ ಹಾಗೆ ನುಡಿಸುತ್ತಿತ್ತು.

ಈ ಮೇ ತಿಂಗಳಲ್ಲಿ ಚಿಕ್ಕಪ್ಪನ ಮಗನ ಉಪನಯನ ನಡೆಯಿತು. ಆಗಲೂ ಅಪ್ಪ ಅಕ್ಕಯ್ಯನ ವಿಷಯ ಹೇಳಲು ಮರೆಯಲಿಲ್ಲ. "ತೇಜು ಯನ್ನುಪನಯನ್ದ ದಿನ ಬೆಳ್ಗ್ಗೆ ಮೂರಗಂಟೆಗೆ ಅಕ್ಕಯ್ಯ 'ಬೆಳಗಾಯಿತು ಏಳೋ ಗೋಪಾಲಕೃಷ್ಣ...' ಎಂದ್ ಹಾಡ್ ಹೇಳಿ ಎಬ್ಸಿತ್ತು. ಯಾನುವಾ ಎಚ್ಚರಾಗಿದ್ರೂವಾ, ಅಕ್ಕಯ್ಯಂಗೆ ತ್ರಾಸ್ ಕೊಡನ ಹೇಳಿ ಕಣ್ಣ್‌ಮುಚ್ಕಂಡು ಮನ್ಕ್ಯಂಡಿದ್ದಿ" ಎಂದು ತನ್ನ ಆ ಬಾಲ್ಯದ ಸವಿನೆನಪನ್ನು ಕರದು ತಂದಿದ್ದ. ಆಗ ನಾನು ಅಲ್ಲೇ ಇದ್ದ ತಮ್ಮನ ಕಡೆ ಪ್ರೀತಿಯ ನೋಟ ಬೀರಿದ್ದೆ. ನಾನೂ ನಾಳೆ ಹಾಗೆಯೇ ಮಾಡಬೇಕಂದಿದ್ದೆ. ಆದರೆ ನಾನು ಕಣ್ಣು ಬಿಟ್ಟಾಗ ಗಂಟೆ ಆರಾಗಿತ್ತು!

ಮೂರುವರ್ಷದ ಕೆಳಗಿನವರೆಗೂ ಹೆಗ್ನೂರತ್ತೆಯ ಮುಖ ಕಂಡಕೂಡಲೇ ಮೊರದಗಲವಾಗುತ್ತಿದ್ದ ಅಪ್ಪನ ಮುಖದಲ್ಲಿ, ಮಾವನ ವ್ಯಾಧಿಯ ಸುದ್ದಿ ತಿಳಿದಾಗಿನಿಂದ ಅಕ್ಕಯ್ಯನ ಕಂಡ ಸಂತೋಷದ ನಡುವೆಯೂ ನೋವಿನ ಎಳೆಯನ್ನು ಗುರುತಿಸಬಹುದಾಗಿತ್ತು. ನನಗಂತೂ ಮಾವನ ನಂತರದ ಅತ್ತೆಯ ಮುಖವನ್ನು ಎಣಿಸಿದರೆ ಸಾಕು ನಡುಕ ಬಂದ ಅನುಭವ. ನನ್ನ ಅನುಭವವೇ ಹೀಗಿರುವಾಗ ಅಪ್ಪನ ಸ್ಥಿತಿಯನ್ನು ಎಣಿಸಲೂ ಮನಸ್ಸು ಬರುತ್ತಿಲ್ಲ.

ಹಣೆಯಲ್ಲಿ ಕಾಸಗಲದ ಕೆಂಪುಬೊಟ್ಟು, ಕಿವಿಯಲ್ಲಿ ಚಿನ್ನದ ಹರಳಿನ ಕುಡುಕು, ಬುಡಿಕೆ, ಎಣ್ಣೆ ಹಾಕಿ, ಬೈತಲೆ ತೆಗೆದು ಬಾಚಿದ ತಲೆಯಲ್ಲಿ ಸದಾ ನಗುವ ಮನೆಯಲ್ಲೇ ಬೆಳೆದ ಸೇವಂತಿ ಹಾಗೂ ಗುಲಾಬಿ ಹೂಗಳು, ಕೊರಳಲ್ಲಿ ಕಾಸಿನ ಸರದಡಿ ಹುದುಗಿದ್ದರೂ ವಿಶೇಷ ಮೆರುಗು ನೀಡುವ ದಪ್ಪ ಕರಿಮಣಿ, ಸದಾ ವಾತ್ಸಲ್ಯದ ನಗೆ ಬೀರುವ ತುಟಿಯ ಮೇಲಿರುವ ಕರಿಮಚ್ಚೆ, ಎಲ್ಲರನ್ನೂ ನಿಯಂತ್ರಿಸಬಲ್ಲ, ಕಣ್ಣಿನಲ್ಲೇ ಆದೇಶಿಸಬಲ್ಲ, 'ದಾಕ್ಷಾಯಿಣಿ' ಎಂಬ ಹೆಸರಿಗೆ ತಕ್ಕ ಮೆರುಗು ನೀಡುವಂತಹ ವ್ಯಕ್ತಿತ್ವ ಹೆಗ್ಗೂರತ್ತೆಯದು. ತನ್ನ ಕೈಲಾಗುವಷ್ಟು ಕಾಲ ತಾನೇ ಮಾಡಿ ಬಡಿಸಿ, ಸಂತೃಪ್ತಿ ಹೊಂದುತ್ತಿದ್ದ, ಅತ್ತೆ ಮನೆಯಲ್ಲಿ ದಿನವೂ ಅನ್ನ ಸಂತರ್ಪಣೆ.

"ತೇಜುಂಗೆ ಒಂದ್ ಲಾಡ್ ಕೊಡ್ರೆ" ಎಂದು ಹೇಳಿಯೂ ತೃಪ್ತಿ ಸಿಗದೆ, ತಾನೇ ಸ್ವತಃ ಬಂದು ಮೆಲ್ಲನೆ ಲಾಡನ್ನು ನನ್ನ ಕೈಯಲ್ಲಡಗಿಸುವ ಅತ್ತೆಯ ಈಗಿನ ಸ್ಥಿತಿಗಾಗಿ ಹೃದಯ ಯಾವಾಗಲೂ ಮಿಡಿಯುತ್ತಿರುತ್ತದೆ. ವೊದಲ ಬಾರಿ ಮಾವನಿಗೆ ಕ್ಯಾನ್ಸರ್ ಎಂದು ತಿಳಿದಾಗ ಮನೆಯಲ್ಲಿ ಎಲ್ಲರಿಗೂ ಸಿಡಿಲು ಬಡಿದಂತಾಗಿತ್ತು. ನಾನು ಮಾವನನ್ನು ನೋಡಿದ್ದು ಅರಿತದ್ದು ಹೆಗ್ಗೂರತ್ತೆಯ ಪ್ರೀತಿ ವಾತ್ಸಲ್ಯದ ಮೂಲಕವೇ. ಆಕೆ ತೋರುವ ಆತ್ಮೀಯತೆಯಿಂದಲೇ ಮಾವನೂ ನನಗೆ ಪ್ರೀತಿಪಾತ್ರನಾಗಿದ್ದ.

"ಪೂರ್ಣಿಮ ಎಂತ ಅಂತೆ? ಸರಿ ಹೇಳು" ಎಂದ ಅಮ್ಮನ ಮಾತಿಗೆ ನಾನು ನನ್ನ ನೆನಪಿನ ಸುರುಳಿಯಿಂದ ತಟ್ಟನೆ ಎಚ್ಚೆತ್ತೆ. ಆಗಲೇ ಅಪ್ಪನೂ ಒಳ ಬಂದ. ಗಾಬರಿಯಿಂದ ಕೂಡಿದ ನನ್ನ ಮತ್ತು ಅಮ್ಮನ ಮುಖ ಕಂಡು "ಎಂತಾ ಆತ್ರೆ?" ಎಂದು ಪ್ರಶ್ನಿಸಿದ. "ಅಪ್ಪ ಮನಿಂದವ ಫೋನಿತ್ತು, ಹೆಗ್ಗೂರ್ ಮಾವಂಗೆ ಸೀರಿಯಸ್ಸಡ, ಕೂಡ್ಲೇ ಬಪ್ಲಕ್ಹೇಳಿದ್ದೊ" ಎಂದು ತಡೆ ತಡೆದು ಹೇಳಿದೆ. ಕೂಡಲೇ ಒಂದು ನಿಟ್ಟುಸಿರು ಬಿಟ್ಟ ಅಪ್ಪ ಖುರ್ಚಿಯಲ್ಲಿ ಕಣ್ಣು ಮುಚ್ಚಿ ಕುಳಿತ. ಅವನ ಈ ಪ್ರಯತ್ನದಲ್ಲಿ ದುಃಖ ನುಂಗುವ ವ್ಯರ್ಥ ಪ್ರಯತ್ನವನ್ನು ಕಾಣಬಹುದಿತ್ತು. ಮಾವನ ಸ್ಥಿತಿಯನ್ನು ಮೊದಲೇ ಎಲ್ಲರೂ ಅರಿತಿದ್ದರೂ, ಅವರ ಹಾಗೂ ಅತ್ತೆಯ ಮೇಲಣ ಪ್ರೀತಿ ಇದನ್ನು ಅನಿರೀಕ್ಷಿತ ಘಟನೆಯನ್ನಾಗಿ ಮಾರ್ಪಡಿಸಿತ್ತು. "ಆನು ಹೆಗ್ಗೂರಿಗೆ ನಾಳಂಗ್ಹೋಗ್ತಿ, ಅಷ್ಟ್ರೊಳ್ಗೆ ಎನೂ ಅಪ್ದದ್ ಸುಳ್ಳು. ಈಗ ಕತ್ಲಾತು, ಬಸ್ಸ್ ಬೇರೆ ಸರಿ ಸಿಗ್ತಿಲ್ಲೆ" ಎಂದು ಹೇಳಿ ಅಪ್ಪ ಒಳ ನೆಡೆದ. ನನಗೆ ಅನಿಸಿತು ಮಾತಿನ ಮೂಲಕ, ಇಲ್ಲಾ, ಸಮಯದ ಮೂಲಕ ಬರುವ ಸಾವನ್ನು ಒಂದು ದಿನದ ಮಟ್ಟಿಗೆ ತಡೆಯುವ ಪ್ರಯತ್ನವಿದಿರಬಹು ಅಥವಾ ಮುಂಚಿತವಾಗಿ ಹೋಗಿ ಅಕ್ಕಯ್ಯನ ದುಃಖವನ್ನು ಎದುರಿಸುವ ಸಾಮರ್ಥ್ಯ ಈಗಲೇ ಅಪ್ಪನಲ್ಲಿ ಬಂದಿರಲಾರದು. ಅಂತೂ ಅಪ್ಪ ಆ ದಿನ ಹೋಗಲಿಲ್ಲ. ಮರುದಿನ ಮಾವ ಸ್ವಲ್ಪ

ಚೇತರಿಸಿಕೊಂಡ ಸುದ್ದಿ ಬಂದರೂ ಮಧ್ಯಾಹ್ನದ ವೇಳೆಗೆ ಅಪ್ಪ ಹೊರಡುವುದಕ್ಕೂ ಮಾವ ತೀರಿಕೊಂಡ ಸುದ್ದಿ ಬರುವುದಕ್ಕೂ ಸರಿಯಾಯಿತು. ಏನೂ ಪ್ರತಿಕ್ರಿಯಿಸದೇ ಎಲ್ಲವನ್ನೂ ಎದುರಿಸಲು ಸಿದ್ಧನಿರುವಂತೆ ತುಂಬಿದ ಕಣ್ಣುಗಳಿಂದ ಅಪ್ಪ ಹೊರಟ. ಹೆಗಲಿಗೆ ಬ್ಯಾಗನ್ನೇರಿಸಿ, ತಲೆ ಕೆಳಗೆ ಹಾಕಿ ಗೇಟು ದಾಟುವುದನ್ನು ನಾನೂ ಮಂಜಾದ ಕಣ್ಗಳಿಂದ ನೋಡಿದೆ.

ಈಗಲೂ ಹೆಗ್ನೂರತ್ತೆಯ ತಿಂಡಿ ಮನೆಗೆ ಬರುತ್ತಿದೆ. ಆದರೆ ಮಾವ ತೀರಿಕೊಂಡು ತಿಂಗಳಾರು ಸಂದರೂ ನಾನು ಆಕೆಯನ್ನು ಕಾಣಲಾಗಲಿಲ್ಲ. "ನವರಾತ್ರಿಗಾದರೂ ಹೆಗ್ನೂರಿಗೆ ಹೋಗ್‌ಬರವು" ಎಂದು ಅಪ್ಪ ನನಗೆ ಹೇಳುವಾಗಲೆಲ್ಲಾ ನನ್ನ ಮನ ಹೋಗದಿರಲು ಬಯಸುತ್ತದೆ. ಮೆಲ್ಲನೆ ಲಾಡನ್ನು ಕೈಗಿಟ್ಟು ಪ್ರೀತಿಯ ನಗೆ ಸೂಸುತ್ತಿದ್ದ ಮುಖವೇ ನೆನಪಿಗೆ ಬರುತ್ತದೆ. ಸದಾ ತನ್ನ ತ್ತ ಸೆಳೆಯುವ ಕಾಸಗಲಿನ ಕುಂಕುಮ ಹಾಗೂ ತೇಜಸ್ಸಿನಿಂದ ಕೂಡಿದ ಹಿಂದಿನ ಹೆಗ್ನೂರತ್ತೆಯ ಮುಖವೇ ನನ್ನೊಂದಿಗಿರಲಿ ಎಂದೆನಿಸುತ್ತದೆ.

***

ಮೂವತ್ತು ರೂಪಾಯಿ

"ಅಮ್ಮಾ..ಅಮ್ಮಾ ಎಲ್ಲಿದ್ದೀ?" ಎಂದು ಅರಚುತ್ತಾ 'ವಿಭಾ' ಮನೆಯೊಳಗೆ ಒಂದೇ ಉಸುರಿಗೆ ನುಗ್ಗಿದಳು. ಮಗಳ ಬೊಬ್ಬೆ ಕೇಳಿ 'ಉಮಾ' ನಗುತ್ತಾ ಕೂಡಲೇ ಹೊರಬಂದಳು. "ಬಾ ಮರಿ, ಬೇಗ ಬಟ್ಟೆ ಬದಲಾಯಿಸಿ ಬಾ. ನಿನಗಿಷ್ಟವಾದ ಹಲ್ವ ಮಾಡುತ್ತಿದ್ದೇನೆ. ಬಿಸಿ ಬಿಸಿ ಇದೆ. ತಿನ್ನುವಿಯಂತೆ ಬಾ" ಎಂದು ಪ್ರೀತಿಯಿಂದ ಬರಮಾಡಿಕೊಂಡಳು. ಯಾವತ್ತೂ ಹಲ್ವ ಎಂದಾಕ್ಷಣ ಅಡುಗೆ ಮನೆ ನುಗ್ಗುತ್ತಿದ್ದ ವಿಭಾ ಇಂದು ಹಾಗೆ ಮಾಡಲಿಲ್ಲ. ಅಮ್ಮನ ಸೆರಗು ಹಿಡಿದು ಹಿಂದೆಯೇ ಹೊರಟಳು. ಕೂಡಲೇ ಉಮಾ ಮಗಳಿಗೆ ತನ್ನಲ್ಲಿ ಏನೋ ಹೇಳಲಿರಬೇಕೆಂದು ಗ್ರಹಿಸಿದಳು. ಅಮ್ಮನ ಸೆರಿಗಿನೊಂದಿಗೆ ಆಡುತ್ತಾ ವಿಭಾ ಮೆಲ್ಲನೆ "ಅಮ್ಮ ಮತ್ತೆ..ಮತ್ತೆ.. ಆವತ್ತು ನೀನೊಂದು ಪ್ರಾಮಿಸ್ ಮಾಡಿದ್ದೆ ನೆನಪಿದ್ಯಾ?" ಎಂದು ಮುದ್ದಾಗಿ ಕೇಳಿದಳು. ಆಶ್ಚರ್ಯಗೊಂಡ ಉಮಾ "ಯಾವುದೇ ಅದು? ನೆನ್ಪಿಗೆ ಬರ್ತಾ ಇಲ್ಲಾ. ಅದೆಲ್ಲಾ ಆಮೇಲೆ. ಮೊದ್ಲು ತಿಂಡಿ ತಿನ್ನು. ಇನ್ನೊಂದು ವಾರದಲ್ಲಿ ಪರೀಕ್ಷೆ ಇದೆ. ಎಷ್ಟೊಂದು ಓದಲಿಕ್ಕಿದೆ. ಬಾ ಬೇಗ" ಎಂದು ಮಗಳನ್ನು ಅವಸರಿಸಿದಳು. ಅಮ್ಮನ ಮಾತಿನಿಂದ ಅಸಮಧಾನಗೊಂಡ ವಿಭಾ "ಹೋಗಮ್ಮ ಮಾತು ಕೊಟ್ಟು ಮರೆತಿದ್ದಿ. ನಂಗೆ ತಿಂಡಿನೂ ಬೇಡ, ಪರೀಕ್ಷೆಗೆ ಓದೋದೂ ಬೇಡ" ಎಂದು ಕೆನ್ನೆ ಉಬ್ಬಿಸಿದಳು. ಮಗಳ ಕೋಪಗೊಂಡ ಮುದ್ದು ಮುಖ ಕಂಡು ಉಮಾ ನಗುತ್ತಾ ವಿಭಾಳನ್ನು ಬರಸೆಳೆದು ಮುತ್ತುಕೊಟ್ಟಳು. "ಏನಮ್ಮಾ ಆ ಪ್ರಾಮಿಸ್ಸು?! ನೀನೇ ಹೇಳು... ನಾನು ಮರೆತಿದ್ದೀನಿ, ನೆನಪಿಗೇ ಬರ್ತಾ ಇಲ್ಲ" ಎಂದು ಮುದ್ದುಗರೆದಳು. ಕೂಡಲೇ ಕಣ್ಣರಳಿಸಿ ನಗುಸೂಸಿ ತಾಯ ಕೊರಳ ಬಳಸಿದಳು ವಿಭಾ. "ಮತ್ತೆ ಆವತ್ತು ನಾ ಅತ್ತಾಗ, 'ಪುಟ್ಟಿ ನಿನ್ನ ಒಂಬತ್ತನೇ ವರ್ಷದ ಹುಟ್ಟಿದ್ಹಬ್ಬಕ್ಕೆ ಚೆಂದದ ಅಂಗಿ ತೆಕ್ಕೊಡ್ತೀನಿ. ಆಮೇಲೆ ನಿಂಗೆ ಬೇಕಾದ್ದ ವಸ್ತೂನೂ ನೀನು ತಗೋಬಹುದು', ಎಂದು ಹೇಳಿದ್ದೆ. ಈಗ ಏನೂ ಗೊತ್ತಿಲ್ಲ ಅಂತೀಯಲ್ಲಾ" ಎಂದು ಮುಗ್ಧವಾಗಿ ಮುದ್ದಾಗಿ ಪ್ರಶ್ನಿಸಿದಳು. ಅವಳ ಕಣ್ಣೊಳಿದ್ದ ಆಕಾಂಕ್ಷೆ, ಆತುರತೆಯ ಕಂಡ ಉಮಾ ಸರಿಯಾಗಿ ನೆನಪಿಗೆ ಬರದಿದ್ದರೂ "ಹೌದು ಮರಿ, ನೆನಪಿಗೆ ಬಂತು. ಹಾಗಂದಿದ್ದೆ. ಏನೀಗ? ಆಯ್ತು ಕೊಡಿಸ್ತೀನಿ. ಆದರೆ ನಿನ್ನ ಹುಟ್ಟಿದ ದಿನಕ್ಕೆ ಇನ್ನೂ ಎರಡು ವಾರ ಇದೆಯಲ್ಲಾ?" ಎಂದು ಸಮಾಧಾನಿಸಿದಳು. ಆದರೆ ಅಸಹನೆಯಿಂದ ಒಂದೂ ಕೇಳದ ವಿಭಾ

“ಎರಡು ವಾರ ಬೇಗ ಕಳೆದು ಹೋಗತ್ತೆ. ಅಂಗಿ ಅಪ್ಪ ಕೊಡಿಸ್ತಾರೆ. ಆದ್ರೆ ನ
ಒಂದು ವಸ್ತು ಈಗ್ಲೇ ಬೇಕು. ಕೊಡಿಸ್ತೀಯಾ ಹೇಳು; ಇಲ್ಲದಿದ್ದರೆ ತಿಂಡಿನೂ ತಿನ್ನೊದಿ
ನೀನು ಹೇಳಿದ ಹಾಗೆ ಓದೋದೂ ಇಲ್ಲ.” ಎಂದು ಸೋಫಾದ ಮೇಲೆ ಕೈಕಟ್ಟಿಕೊಂ
ಮುಖ ದುಮ್ಮಿಸಿಕೊಂಡು ಕುಳಿತಳು. ಅವಳ ಈ ಪರಿಕಂಡು ಉಮಾಳಿಗೆ ನಗು ಬಂ
ಮುಖದ ಮೇಲೆ ಗಂಭೀರತೆಯನ್ನು ತಂದುಕೊಂಡು ಉಮಾ “ಏಳು ವಿಭಾ, ಏನಿ
ಹಠ? ಜಾಸ್ತಿ ಕೂಗಾಡಿದರೆ ಅಂಗೀನೂ ಸಿಗೋದಿಲ್ಲ. ಮೊದ್ಲುಅಪ್ಪ ಬರ್‍ಲಿ , ಆಮೇ
ಮಾತಾಡುವ.” ಎಂದು ಗದರುವ ಧ್ವನಿ ಮಾಡಿದಳು. ತಾಯಿಯ ಬಿರು ನುಡಿ ಕೇಳಿ
ವಿಭಾ, ತನಗೆ ಬೇಕಾದ್ದ ವಸ್ತು ಸಿಗದೆಂದು ಎಣಿಸಿದಳು. ಕೋಪದಿಂದ ಒಂದೇ ಸಮ
ಜೋರಾಗಿ ಅಳತೊಡಗಿದಳು. ಖಾಲಿ ಹೊಟ್ಟೆಯಲ್ಲಿ ಅಳುತ್ತಿದ್ದ ಮಗಳ ಮುಖ ಕಂ
ತಾಯಿಯ ಹೃದಯ ಚುರ್ ಎಂದಿತು. ಆದರೂ ಬೆಳಗ್ಗಿನಿಂದ ಕೆಲಸ ಮಾಡಿ ದಣಿದಿ
ಅವಳ ತನು-ಮನ ಮಗಳನ್ನು ರಮಿಸುವ ಶಕ್ತಿ, ಸಹನೆಗಳೆರಡನ್ನೂ ಕಳಕೊಂಡಿತ
ಬೇಸರದಿಂದ ಹೊರ ಬಂದು ಕುಳಿತಳು. ಗಂಟೆ ಆರಾಯಿತು. ವಿಭಾ ಥಂಗನೆ ಜಿಗಿ
ಓಡಿ ಗೇಟಿನ ಮುಂದೆ ನಿಂತಳು. ಆಕೆಯ ಕಣ್ಣು ದಾರಿಯುದ್ದಕ್ಕೂ ಯಾರನ್ನೊ
ಕಾಯುವಂತಿತ್ತು. ದೂರದಲ್ಲಿ ಬರುತ್ತಿರುವ ತನ್ನ ಪ್ರೀತಿಯ ಅಪ್ಪನ ಸ್ಕೂಟರ್ ಕಂಡಳ
ನಿಧಾನವಾಗಿ ನಸುನುಗು ತುಟಿಯಲ್ಲಿ ಮಿನುಗಿತು. ಆಕೆಗೆ ತನ್ನ ಮನದ ಆಸೆಯೇ ಬ
ಬರುತ್ತಿರುವಂತೆ ಭಾಸವಾಯಿತು.

ಒಂದೆಡೆ ಮಗಳ ಅತ್ತ ಮುಖ. ಇನ್ನೊಂದೆಡೆ ಪತ್ನಿಯ ಅಸಹನೆಯ ನೋಟ
ಇವರೆಡನ್ನೂ ಕಂಡು ಪರಿಸ್ಥಿಯ ಅರಿವಾಯಿತು ಶ್ರೀಹರಿಗೆ. ತಾಯಿ ಮಗಳ ನಡುವ
ಏನೋ ವಾಗ್ವಾದ ನಡೆದಿದೆ ಎಂದೆನಿಸಿತು. ಆದರೂ ಏನೂ ಕೇಳದೆ ಸ್ಕೂಟರ್ ಒಳಗಿಟ್ಟ
ಮುಖ ತಿರುಗಿಸಿ ನಿಂತಿದ್ದ ಮಗಳನ್ನೆತ್ತಿಕೊಂಡ. ಎಂದಿನಂತೆ ಅಪ್ಪನಿಗೆ ಮುತ್ತನ್ನಿಡದ
ವಿಭಾ, ಕೊಸರಾಡಿ ಕೆಳಗಿಳಿದಳು. ಮಗಳ ತುಂಟಾಟ ಗೊತ್ತಿದ್ದ ಶ್ರೀಹರಿ ಮನದಲ್ಲೆ
ನಗತೊಡಗಿದ. ಕಣ್ಣಿನಲ್ಲೇ ಹೆಂಡತಿಯಲ್ಲಿ ವಿಷಯ ಏನೆಂದು ಕೇಳಿದ. ಆದರೆ ಆಕೆ ಉತ್ತರಿಸದೇ
ನಗುತ್ತಾ ಒಳ ಬರಲು ಹೇಳಿದಳು. ಮಗಳನ್ನೂ ಜೊತೆಗೇ ಎತ್ತಿಕೊಂಡು ಒಳ ಬಂದನು
“ಏನು ವಿಭಾ ಮರಿ? ಅತ್ತ ಹಾಗಿದೆ. ಅಮ್ಮ ಬೈದಳಾ? ಹೊಡೆದಳಾ? ಏನಾಯ್ತು ಹೇಳು
ಚಿನ್ನಾ” ಎಂದು ಲಲ್ಲೆಗರೆದನು. ಅಪ್ಪನ ಸಿಹಿ ಮಾತು ಕೇಳು ವಿಭಾಳಿಗೆ ದುಃಖ ಉಕ್ಕಿ ಬಂತು.
ಅಪ್ಪನ ತೆಕ್ಕೆಗೆ ಬಿದ್ದು ಗೋಳೋ ಎಂದು ಅಳತೊಡಗಿದಳು. ಅಷ್ಟರಲ್ಲಿ ಅಲ್ಲಿಗೆ ಬಂದ
ಉಮಾ “ವಿಭಾ ನಿಂದು ಅತಿಯಾಯ್ತು. ಈಗಷ್ಟೇ ಅಪ್ಪ ಬಂದಿದ್ದಾರೆ. ಅವರಿಗೆ ಸ್ವಲ್ಪ ಸಮಯ
ಕೊಡು. ಆಮೇಲೆ ನಿನ್ನ ಗೋಳು ಶುರು ಮಾಡು.” ಎಂದು ಗದರಿದಳು. ನಂತರ

ಅಸಹನೆಯಿಂದ ಪತಿಯತ್ತ ತಿರುಗಿದಳು. "ಇವಳ ಹಠ ನಿಮ್ಮ ಮುದ್ದಿನಿಂದ ದಿನೇ ದಿನೇ ಹೆಚ್ಚಾಗುತ್ತಲಿದೆ. ನನ್ನ ಮಾತೇ ಕೇಳೊಲ್ಲ. ಈಗ ಏನೂ ತಿನ್ನದೆ ಕೂತಿದ್ದಾಳೆ. ಪರೀಕ್ಷೆ ಬೇರೆ ಹತ್ರ ಬರ್‍ತಿದೆ. ಸಣ್ಣ ಸಣ್ಣ ವಿಷಯಕ್ಕೆಲ್ಲಾ ಅಳು, ಕೋಪ. ನಾನೇನಾದರೂ ಬೈದರೆ, ಹೊಡೆದರೆ ನಂಗೇ ಅಂತೀರಿ. ನೀವೇ ಕೇಳಿ ಏನೂಂತಾ.ನೀವುಂಟು, ನಿಮ್ಮ ಮಗಳುಂಟು." ಎಂದು ಶ್ರೀಹರಿಯನ್ನೂ ದೂರಿ ಅಡುಗೆ ಮನೆಸೇರಿದಳು. ತನ್ನನ್ನು ಮಾತ್ರ ಅಲ್ಲದೆ ಪ್ರೀತಿಯ ಅಪ್ಪನನ್ನೂ ಅಮ್ಮ ಬೈದಳಲ್ಲಾ ಎಂದು ವಿಭಾ ಅಳುವನ್ನು ಮತ್ತಷ್ಟು ಹೆಚ್ಚಿಸಿದಳು. ಮಗಳ ಅಳುವ ಕಂಡು ಶ್ರೀಹರಿ ಚಲಿಸಿಹೋದ. ಹೆಂಡತಿಯ ಮೇಲೆ ತುಸು ಸಿಟ್ಟೂ ಬಂತು. "ಏನಮ್ಮಾ ವಿಭಾ ಅಮ್ಮ ಅಂದ ಮಾತಿಗೆ ಇಷ್ಟು ಅಳ್ತಾರಾ? ನಿನ್ನ ಅಮ್ಮ ತಾನೇ ಹೇಳಿದ್ದು. ಏನಾಯ್ತೀಗ? ನಂಗೆ ಹೇಳು. ಏನ್ಬೇಕು ನಿಂಗೆ?" ಎಂದು ಸಂತೈಸಿದ. ಅಪ್ಪನ ಆಶ್ವಾಸನೆಯಿಂದ ಆಕೆಯ ಅಳು ನಿಂತಿತು. ಆದರೂ ಬಿಗುವಿನಿಂದಲೇ "ಆವತ್ತು ಅಮ್ಮ ನಂಗೆ ಮಾತು ಕೊಟ್ಟಿದ್ಲು. ಈ ವರ್ಷದ ಹುಟ್ಟಿದ ಹಬ್ಬಕ್ಕೆ ನಿಂಗೆ ನಾನು ಡ್ರೆಸ್ಸ್ ಕೊಡ್ಸ್‌ತೀನಿ, ಜೊತೆಗೆ ಬೇಕಾದ್ದ ವಸ್ತುನೂ ನೀನು ತಗೋಬಹುದು ಅಂತ ಹೇಳಿದ್ಲು. ಆದರೆ ಅಮ್ಮಂಗೆ ಅದ್ಯಾವ್ದೂ ನೆನ್ಪೇ ಇರೊಲ್ಲ. ಬರೀ ಓದು ಓದು ಅಂತಿರ್‍ತಾಳೆ. ಅವಳಿಗೆ ನನ್ನ ಮೇಲೆ ಕೋಪ. ಹಿಂದಿನ ಪರೀಕ್ಷೇಲಿ ಪಕ್ಕದ ಬೀದಿ ನೀತಾ ಪಸ್ಟ್ ರ್‍ಯಾಂಕ್ ಬಂದಿದ್ಲು. ನಾ ಬಂದಿಲ್ವಲ್ಲ ಅದಕ್ಕೇ." ಎಂದು ಒಂದೇ ಉಸಿರಿನಲ್ಲಿ ಅಮ್ಮನನ್ನು ದೂರಿದಳು. ಆಕೆಯ ವಾದದ ವೈಖರಿಯ ನೋಡಿ ಶ್ರೀಹರಿಗೆ ನಗು ಬಂತು. ಆದರೂ ಕೋಪ ನಟಿಸಿ -"ನೀನು ಬೇಜಾರು ಮಾಡ್ಕೋಬೇಡ ಮರಿ. ಈ ಅಮ್ಮಂದಿರೆಲ್ಲಾ ಹೀಗೇ. ಓದೋದೊಂದು ಬಿಟ್ಟು ಬೇರೇನೂ ಬೇಡ ಅಂತಾರೆ. ಆದರೆ ಆಕೆಗೆ ನಿನ್ನ ಮೇಲೆ ಸಿಟ್ಟಿಲ್ಲ. ಎಲ್ಲೋ ಮರೆತಿರ್ಬೇಕು. ಏನೀಗ? ನಾನಿದ್ದೇನಲ್ಲಾ.. ಕೇಳು ಏನ್ಬೇಕು ನಿಂಗೆ? ನೀ ಕೇಳಿದ್ದು ಸಿಗುತ್ತೆ." ಎಂದು ಅಕ್ಕರೆಯಿಂದ ಸಮಾಧಾನಿಸಿದ. ಅಪ್ಪನ ಮಾತು ಕೇಳಿ ವಿಭಾಳ ಕೋಪ-ತಾಪವೆಲ್ಲಾ ಕರಗಿಹೋಯಿತು. ಹಕ್ಕಿಯಂತೆ ಹಾರಿ ಅಪ್ಪನ ತೊಡೆ ಏರಿ ಕುಳಿತಳು. "ಅಪ್ಪ ನೀ ನಂಗೆ ಅಂಗಿ ತೆಕ್ಕೊಡ್ಬೇಕೆಂದು ಅನ್ಸಿದ್ರೆ ಮಾತ್ರ ಕೊಡ್ಸು. ಆದ್ರೆ ನಂಗೊಂದು ವಸ್ತು ಬೇಕು. ಅದು ಬೇಕೇ ಬೇಕು. ತೆಕ್ಕೊಡ್ತೀಯಾ?" ಎಂದು ಕಾತುರದಿಂದ ಕೇಳಿದಳು. "ಏನು ಚಿನ್ನಾ ಅದು? ಆಯ್ತು ನೀ ಕೇಳಿದ್ದು ಸಿಗುತ್ತೆ. ಆದ್ರೆ ಮೊದ್ಲು ನೀನು ತಿಂಡಿ ತಿನ್ನು." ಎಂದು ಮಗಳ ಕೆನ್ನೆ ತಟ್ಟಿದನು. ಕೂಡಲೇ ವಿಭಾ ಅಪ್ಪನ ಕೆನ್ನೆಗೆ ಒಂದು ಸಿಹಿ ಮುತ್ತನಿತ್ತಳು. ಮಗಳ ಓಲೈಸುವ ಪರಿ ಕಂಡು ಶ್ರೀಹರಿಗೆ ಒಂದುಕ್ಷಣ ಚಿಂತೆಯಾಯಿತು. ಆಕೆಯ ಬೇಡಿಕೆಯ ಕುರಿತೇ ಯೋಚಿಸತೊಡಗಿದ. ಅಂತೂ ಅಪ್ಪ, ಮಗಳ ಕಾಫಿ-ತಿಂಡಿಯ ಕಾರ್ಯಕ್ರಮ ನಗುನಗುತ್ತಾ ಮುಗಿಯಿತು. ಮಗಳ

ನಗು ಮುಖ ಕಂಡು ಉಮಾಳೂ ನಿಟ್ಟುಸಿರಿಟ್ಟಳು. ಸ್ವಲ್ಪ ಸಮಯದ ನಂತರ ವಿಭಾ ಮೆಲ್ಲನೆ ತನ್ನ ಬೇಡಿಕೆ ಮುಂದಿಟ್ಟಳು. "ಅಪ್ಪ ಇವತ್ತು ನಮ್ಮ ಸ್ಕೂಲಿಗೆ ಬಣ್ಣ ಬಣ್ಣದ, ಬೇರೆ ಬೇರೇ ರೀತಿಯ ಬಾಕ್ಸ್ ಮಾರಲು ಬಂದಿದ್ರು. ಇನ್ನೂ ಎರ್ಡ್‌ದಿನ ಬರ್ತಾರಂತೆ. ಎಷ್ಟು ಚೆಂದ ಇವೆ ಗೊತ್ತಾ? ನೀಲಿ, ಕೆಂಪು, ಹಸಿರು ಮತ್ತೆ ನಿಂಗಿಷ್ಟವಾದ ಬಣ್ಣ ಕಂದು ಎಲ್ಲಾ ತರಹದ್ದೂ ಇವೆ. ನಂಗೆ ಎಲ್ಲಾ ಬೇಡಪ್ಪಾ. ಆದ್ರೆ ಒಂದೇ ಒಂದು ಕಂದು ಬಣ್ಣದ ಕ್ಯಾಡ್ಬರೀಸ್ ಚಾಕೊಲೇಟ್ ತರಹದ ಬಾಕ್ಸ್ ಮಾತ್ರ ಸಾಕು. ಅನಿತಾ, ಶ್ವೇತಾ ಎಲ್ಲಾ ಇವತ್ತೇ ತಗೊಂಡ್ರು. ನಾಳೆ ಇನ್ನೂ ಕೆಲವ್ರು ತಗೋತಾರಂತೆ. ಅದ್ಕೇ ನಂಗೂ ಬೇಕು. ಹೆಚ್ಚು ಹಣ ಇಲ್ವಂತೆ. ಬರೀ ಮೂವತ್ತು ರೂಪಾಯಿ ಮಾತ್ರ. ತಗೊಳ್ಲಾ?" ಎಂದು ಗೋಗರೆಯುವ ಧ್ವನಿಯಲ್ಲಿ ಕೇಳಿದಳು. ಅವಳ ಮಾತಿನಲ್ಲಿ ಒಪ್ಪದಿದ್ದರೆ ಮುಂದಿನ ಪರಿಣಾಮದ ಮುನ್ಸೂಚನೆಯನ್ನೂ ಕಾಣಬಹುದಿತ್ತು. ಏನು ಕೇಳುವಳೋ ಎಂದು ಹೆದರಿದ್ದ ಶ್ರೀಹರಿ ಮಗಳ ಕೋರಿಕೆ ಕೇಳಿ ಸಮಾಧಾನದ ನಿಟ್ಟುಸಿರು ಬಿಟ್ಟನು. "ವಿಭಾ ಇಷ್ಟೇನಾ! ಇಷ್ಟಕ್ಕೇ ಏನೆಲ್ಲಾ ರಾಮಾಯಣ ಮಾಡಿದೆ! ಆಯ್ತು ತಗೊಳ್ಳುವಿಯಂತೆ." ಎಂದು ಒಪ್ಪಿದನು. ಪರ್ವತವೇ ತಲೆಯಿಂದ ಇಳಿದಂತಾಯಿತು ವಿಭಾಗೆ. ಬೆಳಿಗ್ಗೆ ಶಾಲೆಗೆ ಹೋಗುವಾಗ ಮೂವತ್ತು ರೂಪಾಯಿ ಕೊಡುವುದೆಂದೂ, ಅದರಿಂದ ಬಾಕ್ಸ್ ತರುವುದೆಂದೂ ತಂದೆ ಮಗಳಲ್ಲಿ ಮಾತಾಯಿತು. ನಂತರ ಶ್ರೀಹರಿ ಆಕೆಗೆ ಹೋಮ್‌ವರ್ಕ್ ಮಾಡಲು ಹೇಳಿ, ಹೊರಬಂದನು. ವಿಷಯದ ಸ್ಪಷ್ಟತೆ ತಿಳಿಯದ ಉಮಾಳೂ ಅಲ್ಲಿಗೆ ಬಂದಳು. ಆತ ಆಕೆಯಲ್ಲಿ ನಗುತ್ತಾ ಮಗಳ ಬೇಡಿಕೆಯನ್ನು ತಿಳಿಸಿದನು. "ಇಷ್ಟು ಸಣ್ಣ ವಿಷಯವೇ?! ಛೇ.. ಇಷ್ಟಕ್ಕೇ ತಾನು ಮಗಳನ್ನು ವಿಚಾರಿಸದೇ ಅಳಿಸಿದೆನಲ್ಲಾ" ಎಂದು ಆಕೆಗೆ ಬೇಸರವಾಯಿತು.

ಯಾವತ್ತೂ ಟಿ.ವಿ. ನೋಡಿ ಹತ್ತು ಗಂಟೆಗೇ ಮಲುಗುತ್ತಿದ್ದ ವಿಭಾ ಇವತ್ತು ಬೇಗ ಓದಿ, ಹಠಮಾಡದೇ ಊಟ ಮಾಡಿ ಒಂಭತ್ತು ಗಂಟೆಗೇ ಮಲಗಲು ಮಂಚ ಏರಿದಳು. ಯಾವಾಗ ಬೆಳಗಾಗುವುದೋ? ಯಾವಾಗ ಮೂವತ್ತು ರೂಪಾಯಿ ಕೈಸೇರುವುದೋ? ಯಾವಾಗ ಆ ಬಾಕ್ಸ್ ನನ್ನದಾಗುವುದೋ ಎಂದು ಯೋಚಿಸುತ್ತಾ ನಿದ್ರೆಯ ಮಡಿಲನ್ನು ಸೇರಿದಳು. ಆದಿನ ವಿಭಾ ಕನಸಿನ ತುಂಬೆಲ್ಲಾ ಆಕೆ ಬಾಕ್ಸ್ ಪಡೆದಂತೆ, ಅದನ್ನು ಹಿಡಿದು ಕ್ಲಾಸ್ ತುಂಬಾ ಹೆಮ್ಮೆಯಿಂದ ನಡೆದಂತೆ, ಇದನ್ನು ಕಂಡು ತನ್ನ ಪ್ರತಿಸ್ಪರ್ಧಿ ನೀತಾ ಹೊಟ್ಟೆಯುರಿಯಿಂದ ನೋಡಿದಂತೆ, ಇನ್ನೂ ಏನೇನೋ ದೃಶ್ಯಗಳನ್ನು ಕಂಡಳು. ಆ ಬಾಕ್ಸಿನಲ್ಲಿ ಪೆನ್ನು, ಪೆನ್ಸಿಲ್ಲು ಎಲ್ಲಾ ವಸ್ತುಗಳನ್ನೂ ಸುಂದರವಾಗಿ ಜೋಡಿಸುವಂತೆ ಕಂಡು, ಕನಸಿನಲ್ಲಿಯೇ ಕಿಲಕಿಲ ಎಂದು ನಕ್ಕೂ ಬಿಟ್ಟಳು.

ಪ್ರತಿದಿನ ಕಿರಿಕಿರಿ-ರಗಳೆಯ ಸುಪ್ರಭಾತದೊಂದಿಗೇ ಏಳುವುದು ವಿಭಾಳ ದಿನಚರಿ. ಆದರೆ ಇಂದು ಸದ್ದು ಗದ್ದಲ ಮಾಡದೇ, ತಾನೇ ಸ್ನಾನ ಮಾಡಿ ತಯಾರಾದಳು. ತಿಂಡಿ ಕಾಫಿ ಕೂಡಾ ಹೆಚ್ಚು ತಂಟೆ ಮಾಡದೇ ಮುಗಿಸಿದಳು. ಮಗಳ ಈ ಹೊಸ ಪರಿಕಂಡು ಉಮಾ-ಶ್ರೀಹರಿಗೆ ಆಶ್ಚರ್ಯವಾಯಿತು. ಕೂಡಲೇ ಕಾರಣ ಗ್ರಹಿಸಿ ನಗುವೂ ಬಂತು. ಕೊನೆಗೆ ಶಾಲೆಗೆ ಬಿಡುವಾಗ ಶ್ರೀಹರಿ ಮೂವತ್ತು ರೂಪಾಯಿಯನ್ನು ಮಗಳಿಗೆ ಕೊಟ್ಟು 'ಜೋಪಾನ' ಎಂದು ಹೇಳಿದನು. ವಿಭಾ ಆ ಹಣವನ್ನು ಅಮೂಲ್ಯ ರತ್ನ ಎಂಬಂತೆ ಜಾಗ್ರತೆಯಿಂದ ತನ್ನ ಜೇಬೊಳಗೆ ಇಟ್ಟುಕೊಂಡಳು. ಕ್ಲಾಸಿಗೆ ಬಂದಕೂಡಲೇ ಗೆಳತಿ ಶ್ವೇತಳಲ್ಲಿ ಬಾಕ್ಸ್ ಮಾರುವವ ಬಂದನೇ? ಎಂದು ವಿಚಾರಿಸಿಯೂ ಆಯಿತು. ನಿಮಿಷಗಳುರುಳಿದಂತೆ ಕ್ರಮೇಣ ಸಹನೆ ಕಡಿಮೆಯಾಗತೊಡಗಿತು.

ಸ್ವಲ್ಪ ಸಮಯದ ನಂತರ ಹಿಂದಿನ ಬೆಂಚಿನಿಂದ ಯಾರೋ ಅಳುವ ಸದ್ದು ಕೇಳಿಸಿತು. ಕ್ಷಣದಲ್ಲಿ ಎಲ್ಲರೂ ಗುಂಪುಗೂಡಿದರು. ವಿಭಾಳೂ ಅತ್ತ ಹೋದಳು. ಎಲ್ಲರ ನಡುವೆ ನೀತಾ ಗೋಳೋ ಎಂದು ಒಂದೇ ಸಮನೆ ಅಳುತ್ತಿದ್ದಳು. ಎಲ್ಲರೂ ತಮಗೆ ತೋಚಿದಂತೆ ಸಮಾಧಾನಿಸುತ್ತಿದ್ದರು. ಅವಳ ಅಳು ನಿನ್ನೆ ತಾನು ಅತ್ತದ್ದಕ್ಕಿಂತ ಜೋರಾಗಿದೆ ಎಂದೆನಿಸಿತು ವಿಭಾಗೆ. ಆಕೆ ನೀತಳನ್ನು ಅಳುವುದೇತಕ್ಕೆ? ಎಂದು ವಿಚಾರಿಸಿದಳು. ಆಗ ನೀತಾ- "ನನ್ನ ತಮ್ಮ ಕಾಲಿಗೆ ಬಿದ್ದು ಗಾಯ ಮಾಡಿಕೊಂಡಿದ್ದಾನೆ. ಅಪ್ಪ ದೂರದ ಊರಿಗೆ ಲಾರಿ ಬಿಟ್ಟುಕೊಂಡು ಹೋಗಿದ್ದಾರೆ. ಬರುವುದು ಎರಡು ದಿನ ಬಿಟ್ಟೇ. ಅಮ್ಮ 'ಔಷಧಿ ಬರುವಾಗ ತಾ' ಎಂದು ಹಣಕೊಟ್ಟಿದ್ಲು. ಆದ್ರೆ ಅದು ಸ್ಕೂಲಿಗೆ ಬರುವಾಗ ಎಲ್ಲೋ ಬಿದ್ಹೋಯ್ತು. ಅಮ್ಮನ್ಹತ್ರ ಬೇರೆ ದುಡ್ಡಿದ್ಯೋ ಇಲ್ವೋ ಗೊತ್ತಿಲ್ಲ. ಹಾಗೇ ಹೋದ್ರೆ ಹೊಡೀತಾಳೆ. ಪಾಪ ತಮ್ಮ ಬೇರೆ ನೋವಿಂದ ಅಳ್ತಿರ್ಬೇಕು" ಎಂದು ಮತ್ತೂ ಜೋರಾಗಿ ಅಳತೊಡಗಿದಳು. ಆಗ ಶ್ವೇತಾಳಿಗೆ ತನ್ನಲಿರುವ ಎರಡು ರೂಪಾಯಿಯ ನೆನಪಾಯಿತು. ಅದನ್ನು ಅಮ್ಮ ಚಾಕೋಲೇಟಿಗಾಗಿ ಕೊಟ್ಟಿದ್ದಳು. "ಎಷ್ಟು ಹಣ ಬೇಕು?" ಎಂದು ಕೇಳಿದಳು. "ಮೂವತ್ತೈದು ರೂಪಾಯಿ!" ಎಂದು ದೊಡ್ಡ ಉದ್ಗಾರ ತೆಗೆದಳು ನೀತಾ. ಆ ಹಣ ಆಕೆಯ ಪಾಲಿಗೆ ಬಹು ದೊಡ್ಡದ ಮೊತ್ತವಾಗಿತ್ತು. ಶ್ವೇತಳ ಮುಖ ಚಿಕ್ಕದಾಯಿತು. ಎಲ್ಲರೂ ಏನೂ ತೋಚದೆ ತಮಗೆ ತೋಚಿದಂತೆ ಆಕೆಯನ್ನು ಸಂತೈಸತೊಡಗಿದರು.ಆ ಪುಟ್ಟ ಮಕ್ಕಳ ಹೃದಯ ಕಾಣದ ಅವಳ ತಮ್ಮನಿಗಾಗಿ ಮರುಗಿತು. ತಮ್ಮ ತಮ್ಮಲ್ಲಿಯೇ ಇದ್ದ ಹಣ ಕೂಡಿಸಿ ಐದು ರೂಪಾಯಿ ನೀಡಿದರು. ಆದರೆ ವಿಭಾ ಆಕೆಯ ತಮ್ಮನನ್ನು ಹಲವು ಸಲ ನೋಡಿದ್ದಳು. ಪಕ್ಕದ ಬೀದಿಯಲ್ಲೇ ನೀತಾಳ ಮನೆಯೂ ಇದ್ದುದರಿಂದ ಅವಳ ತಾಯಿ ಕಮಲಮ್ಮ ಇವರ ಮನೆಗೆಲಸಕ್ಕಾಗಿ ಆಗಾಗ ಬರುತ್ತದ್ದಳು. ಹಾಗೆ ಬಂದಾಗ ಒಮ್ಮೊಮ್ಮೆ ಇವಳ

ತಾಯಿಯಲ್ಲಿ ತನ್ನ ದುಃಖವನ್ನೆಲ್ಲಾ ಹೇಳುಕೊಳ್ಳುವುದಿತ್ತು. ಆಕೆಯ ಗಂಡ ಲಾರಿ ಡ್ರೈವರ್ ಆಗಿದ್ದ. ಕುಡಿತದ ಚಟಕ್ಕೆ ಬಲಿಯಾಗಿದ್ದ. ಹಾಗಾಗಿ ಅವನ ಸಂಬಳ ಏನೇನೂ ಸಾಲುತ್ತರಲಿಲ್ಲ. ಆದರೂ ಆಕೆ ಹಿಂಜರಿಯದೇ ಕಷ್ಟಪಟ್ಟು ಅವರಿವರ ಮನೆ ಕೆಲಸಗಳನ್ನು ಮಾಡಿ ಮಗಳಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ನೀಡುತ್ತಿದ್ದಳು. ಹಾಗಾಗಿ ಆಗಾಗ ಸ್ವಲ್ಪ ಹಣವನ್ನು ವಿಭಾಳ ಅಮ್ಮನಿಂದ ಸಾಲವಾಗಿಯೂ ಪಡೆಯುವುದಿತ್ತು. ಹಾಗೆ ಬಂದಾಗ ವಿಭಾಳೂ ಎಷ್ಟೋ ಸಲ ಕಮಲಮ್ಮನ ಪುಟ್ಟ ಮಗುವನ್ನು ಎತ್ತಿ ಆಡಿಸಿದ್ದಳು. ಅವಳ ಮುಂದೆ ನೀತಾಳ ತಮ್ಮನ ಮುದ್ದು ಮುಖ ತೇಲಿ ಬಂತು. ಆತನ ನೋವಿನನುಭವ ಅವಳನ್ನೂ ತಾಗಿದಂತಾಗಿ ಚಡಪಡಿಸಿದಳು. ಹೆಚ್ಚು ಯೋಚಿಸದೆ, ತನ್ನ ಜೇಬಿನಿಂದ ಮೂವತ್ತು ರೂಪಾಯಿಯನ್ನು ತೆಗೆದು ನೀತಾಳಿಗೆ ನೀಡಿದಳು. ಒಂದು ಕ್ಷಣ ನೀತಾ ಹಿಂಜರಿದರೂ, ತಾಯಿಯ ಏಟಿಗೆ ಹೆದರಿಯೋ ಇಲ್ಲಾ ತಮ್ಮನ ಸ್ಥಿತಿಯ ನೆನೆದೋ, ಹಣವನ್ನು ತೆಗೆದುಕೊಂಡಳು. ಯಾವ ಮೂವತ್ತು ರೂಪಾಯಿಗಾಗಿ ವಿಭಾ ತಾಯಿಯೊಡನೆ ಗಲಾಟೆಮಾಡಿದ್ದಳೋ, ಆ ಹಣ ಆ ಕ್ಷಣ ಅವಳಿಗೆ ವಿಶೇಷವಾಗಿ ಕಾಣಿಸಲಿಲ್ಲ.

ಸ್ಕೂಲಿನ ಗಂಟೆ ಕೇಳಿ ಎಲ್ಲರೂ ತಮ್ಮ ತಮ್ಮ ಜಾಗ ಸೇರಿದರು. ಒಂದು ಕ್ಷಣ ಬಾಕ್ಸ್ ನೆನಪಾಗಿ ವಿಭಾಳಿಗೆ ಕಣ್ಣೀರು ಬಂದರೂ, ನೀತಾಳ ತಮ್ಮನನ್ನು ನೆನೆದು ಸಮಾಧಾನಗೊಂಡಳು. ಆದರೆ ಕ್ರಮೇಣ ಅವಳಲ್ಲಿ ಭಯ ಆವರಿಸತೊಡಗಿತು. ಅಪ್ಪ ಅಮ್ಮ ಏನೆನ್ನುವರೋ? ಅಮ್ಮ ಹೊಡೆಯಲೂ ಬಹುದು. ಹೀಗೆಲ್ಲಾ ಎಣಿಸಿ ಇಡೀ ದಿನ ಚಿಂತೆ, ದುಃಖದಲ್ಲೇ ಕಳೆಯಿತು. ಸಂಜೆ ಜೋಲು ಮುಖ ಹಾಕಿ ಮನೆಗೆ ಬಂದಳು. ಮನೆಯಲ್ಲಿ ಬೇಗ ಬಂದಿದ್ದ ತಂದೆಯ ಮುಖ ನೋಡಿ ವಿಭಾಳಲ್ಲಿ ಆತಂಕ ಹಾಗೂ ದುಃಖ ಮತ್ತೂ ಹೆಚ್ಚಾಯಿತು. ಸೀದಾ ರೂಮಿಗೆ ಓಡಿಹೋದಳು. ಮಂಚದ ಮೇಲೆ ಬೋರಲಾಗಿ ಬಿದ್ದು ಅಳತೊಡಗಿದಳು. ಮಗಳ ಅಳು ಕಂಡು ದಂಪತಿಗಳಿಗೆ ಆಶ್ಚರ್ಯವಾಯಿತು. ಮಗಳ ಅರಳಿದ ಮುಖವನ್ನು ನಿರೀಕ್ಷಿಸಿದ್ದ ಅವರು ಆಕೆಯ ಅಳು ಮುಖ ಕಂಡು ದಂಗಾದರು. ಎಚ್ಚೆತ್ತ ಶ್ರೀಹರಿ ವಿಭಾಳನ್ನು ಎಬ್ಬಿಸಿ ಅಪ್ಪಿಕೊಂಡ. "ಏನಮ್ಮಾ, ಏನಾಯ್ತು? ಬಾಕ್ಸ್‌ನವನು ಬರಲಿಲ್ವೇ? ಅಳ್ಬೇಡ ಏನಂತ ಹೇಳು?" ಎಂದು ಪರಿ ಪರಿಯಾಗಿ ಸಂತೈಸಿದ. ಆಗ ವಿಭಾ ಹೆದರುತ್ತಾ ಬಿಕ್ಕುತ್ತಾ, ಮೆಲ್ಲನೆ ಅಂದು ನಡೆದ ಘಟನೆಯನ್ನೂ ತಾನು ಹಣಕೊಟ್ಟದ್ದನ್ನೂ ವಿವರಿಸಿದಳು. ಮಗಳ ತ್ಯಾಗ ಬುದ್ದಿ, ಸಹೃದಯತೆ ಕಂಡು ಅವರಿಬ್ಬರ ಹೃದಯ ಸಂತೋಷದಿಂದ ತುಂಬಿ ಬಂತು. ಹಣಕೊಡಲು ಆಕೆ ನೀಡಿದ ಕಾರಣವೂ ಅವರನ್ನು ಸಂತಸದಲ್ಲಿ ತೇಲಿಸಿತು. ಎಷ್ಟು ಚಿಕ್ಕ ವಯಸ್ಸಿನಲ್ಲಿ ಎಷ್ಟು ದೊಡ್ಡ ಬುದ್ಧಿ ಎಂದು ಅಚ್ಚರಿಯೂ ಉಂಟಾಯಿತು. ಉಮಾ-ಶ್ರೀಹರಿ ಇಬ್ಬರೂ ಆಕೆಯನ್ನು

ಸಂತೈಸಿದರು. ಆಕೆಯನ್ನೆತ್ತಿಕೊಂಡು ಮುದ್ದಾಡಿದರು. ಭಯ ಮುಕ್ತಳಾದ ವಿಭಾ ಈಗ ಸಮಾಧಾನಗೊಂಡಳು. ನಂತರ ಶ್ರೀಹರಿ -"ನಿಂದೇನೂ ತಪ್ಪಿಲ್ಲಮ್ಮ ವಿಭಾ. ನೀನು ಮಾಡಿದ್ದು ಸರಿ. ನಾವು ನಮ್ಮ ಕೈಲಾದಷ್ಟು ಬಡವರಿಗೆ, ಅಸಹಾಯಕರಿಗೆ ಸಹಾಯ ಮಾಡಬೇಕು. ನೀನು ಅಳಬೇಡ. ನಿಂಗೆ ಬೇರೆ ಬಾಕ್ಸೂ ಸಿಗುತ್ತೆ. ಅಂಗೀನೂ ಸಿಗುತ್ತೆ." ಎಂದು ಸಮಾಧಾನದ ನುಡಿ ನುಡಿದನು. ಆಮೇಲೆ ನಿಧಾನವಾಗಿ ಆಕೆಯನ್ನು ಕೂರಿಸಿಕೊಂಡು ತಿಳಿಹೇಳಿದನು. "ವಿಭಾ ಸಹಾಯ ಮಾಡಬೇಕು ನಿಜ. ಆದರೆ ಸದಾ ಯೋಚಿಸಿ ಮಾಡಬೇಕು. ಸಹಾಯ ಮಾಡುವಾಗ ಸರಿಯಾಗಿ ವಿಚಾರಿಸಿ ಮಾಡಬೇಕು. ಉಪಕಾರಮಾಡುವುದು ಒಳ್ಳೆಯದು ಎಂದು ಕೈಮೀರಿ ಕೊಡುವುದು ಸರಿಯಲ್ಲ. ನೀನು ಚಿಕ್ಕವಳಿದ್ದಿ. ಹಾಗಾಗಿ ಹಣಕೊಡುವಾಗಲೆಲ್ಲಾ ಅಪ್ಪ ಅಮ್ಮನ ಕೇಳಿಕೊಡಬೇಕು. ಮುಂದೆ ಹಾಗೆ ಮಾಡುವಾಗ ನೆನಪಿಡು." ಎಂದು ನಯವಾಗಿ ಎಚ್ಚರಿಸಿದನು. ಉಮಾಳ ಭಾವವೂ ಅದೇ ಆಗಿತ್ತು. ಆಮೇಲೆ ವಿಭಾ ನಿಶ್ಚಿಂತೆಯಿಂದ ಹಾಯಾಗಿ ಮಲಗಿದಳು. ಆದಿನ ಆಕೆ ಕನಸಿನಲ್ಲಿ ನೀತಾಳ ತಮ್ಮನೊಂದಿಗೆ ನಗುತ್ತಾ ಆಡುವ ದೃಶ್ಯ ಕಂಡಳು. ಕ್ರಮೇಣ ಕನಸಿನಲ್ಲಿ ಕಂಡ ಆ ನಗು ಅವಳ ತುಟಿಯಂಚಿನಲ್ಲೂ ಮಿನುಗಿತು. ಮುಗ್ಧತೆ ಮತ್ತು ನಿರ್ಮಲತೆಯಿಂದ ಕೂಡಿದ ಯಾವುದೋ ಒಂದು ವಿಶೇಷ ಕಾಂತಿ ಅವಳ ಮುಖವನ್ನೆಲ್ಲಾ ಆವರಿಸಿತು.

***

ಇಂಬಕ್ಕ

"ತೇಜು ಇನ್ನ ಬೇಕಾದ್ರೆ ಎದ್ಕಳ್ಳಕ್ಕೇ ಮನೆ ಹತ್ರ ಬಂತು, ಇನ್ನು ಮನಿಗ್ಹೋಗೆ ಮಲ್ಗಲಕ್ಕೂ"ಎಂಬ ಅಪ್ಪನ ಎಚ್ಚರಿಸುವಿಕೆಯಿಂದಲೇ ನನಗರಿವಾದದ್ದು ನಾನಿರುವುದು ಕಾರಿನಲ್ಲಿ ಎಂದು. ಪ್ರಯಾಸದಿಂದ ಕಣ್ಣು ಬಿಟ್ಟು ವಾಚ್ ನೋಡಿದರೆ ಗಂಟೆ ಆರು ಆಗಿತ್ತು. ಮಧ್ಯಾಹ್ನ ಒಂದು ಗಂಟೆಗೇ ಮಂಗಳೂರಿನಿಂದ ಹೊರಟಿದ್ದರೂ ಶಿರಸಿ ಮುಟ್ಟುವಾಗ ಐದು ತಾಸು ಬೇಕಾಯಿತೇ ಎಂದು ಆಶ್ಚರ್ಯವಾಯಿತು. ಅಷ್ಟೂ ಹೊತ್ತು ಒಂದೇ ಭಂಗಿಯಲ್ಲಿ ಕುಳಿತಿದ್ದರಿಂದ ಮೈಯನ್ನೆಲ್ಲಾ ಒಂದು ತರಹ ಜಡತ್ವ ತುಂಬಿದಂತಾಗಿತ್ತು. ಅದನ್ನು ನೀಗಿಸಲು ಕಾರಿನ ಕಿಟಿಗಿ ಗಾಜನ್ನು ತೆಗೆದೆ, ಕೂಡಲೇ ಘಟ್ಟದ ತಂಪಾದ ಮುಸ್ಸಂಜೆ ಗಾಳಿ ರೊಯ್ಯನೆ ತೂರಿ ಬಂದು ಮೈ ಮನವನ್ನೆಲ್ಲಾ ಉಲ್ಲಾಸಗೊಳಿಸಿತು. ಆಗಲೇ ಕಾರು ಮನೆಯ ದಣಪೆಯ ಮುಂದೆ ನಿಂತಾಗಿತ್ತು. "ಬಪ್ಪ ಅಂದಿ, ದೊಡ್ಡಾಯಿ ಅಂದಿ, ತೇಜಕ್ಕ ಅಂದಿ, ಪಯುಕ್ಕ ಅಂದಿ" ಎಂಬ ಮಕ್ಕಳ ಮಾತಾಡಿಸುವಿಕೆ, ದೊಡ್ಡವರ ಕುಶಲೋಪಚಾರಗಳ ಗಲಾಟೆಯೊಂದಿಗೆ ಮನೆಹೊಕ್ಕಾಯಿತು. ಸುಮಾರು ಅರ್ಧ ಗಂಟೆ ಇಡೀ ಮನೆತುಂಬಾ ನಗುವಿನ ಅಲೆಯೇ ತುಂಬಿತು. "ನಿಂಗಕಗೆಲ್ಲಾ ಆಸ್ರಿಗೆ ಎಂತ ಅಕ್ಕು?" ಎಂಬ ಚಿಕ್ಕಮ್ಮನ ಪ್ರಶ್ನೆಯಿಂದಲೇ ಎಲ್ಲರ ಯೋಚನೆಯೂ ಅತ್ತ ಹರಿದಿದ್ದು. ಊರಿಗೆ ಬಂದರೆ ಸಾಕು ಚಿಕ್ಕಪ್ಪನ ಮಕ್ಕಳು, ಅತ್ತೆಯ ಮಕ್ಕಳು, ಎಲ್ಲರೂ ಸುಮಾರು ಒಂದೇ ವಯಸ್ಸಿನವರಾದ್ದರಿಂದ ಮಾತು ಕತೆ, ನಗು, ಹರಟೆಗೆ ಕೊನೆಯೇ ಇರುವುದಿಲ್ಲ. ಊಟ, ತಿಂಡಿ, ನಿದ್ದೆ ಎಲ್ಲವನ್ನೂ ದೊಡ್ಡವರು ಒಮ್ಮೊಮ್ಮೆ ನೆನಪಿಸಬೇಕಾಗುತ್ತಿತ್ತು. ಈಗಲೂ ಅಷ್ಟೇ.. ನಾವೆಲ್ಲಾ ಊರ ಸುದ್ದಿಗಳಿಗಾಗಿ ಒಂದೆಡೆ ಸೇರಿಯಾಯಿತು. ನಾನು ನನ್ನ ತಂಗಿಯಂದಿರು ವರ್ಷಕ್ಕೆ ಒಂದೆರೆಡು ಸಲ ಮಾತ್ರ ಬರುವವರಾಗಿದ್ದರಿಂದ ಬಹಳಷ್ಟು ಪಾಲು ಸುದ್ದಿಗಳನ್ನು ಮನೆಯವರು ಹೇಳುವುದೇ ಆಗಿತ್ತು. ನಾವು ಬರೇ ಕೇಳುಗರು. ಅಲ್ಲಿ ಈಗಾಗಲೇ ಹಳತಾಗಿದ್ದ ಸುದ್ದಿಗಳೆಲ್ಲ ನಮ್ಮ ಪಾಲಿಗೆ ಹೊಸ ಸುದ್ದಿಗಳಾಗಿರುತ್ತಿದ್ದವು.

ಮಾತುಮಾತಿನಮೇಲೆ ನನ್ನ ಅತ್ತೆಯ ಮಗಳು ಮೆಲ್ಲನೆ ಇಳಿದನಿಯಲ್ಲಿ "ತೇಜು ನಿಂಗಕಗೆ ಗೊತ್ತಿದ್ದೋ ಇಲ್ಯೋ, ಪಕ್ಕದ ಮನೆ ಇಂಬಕ್ಕ ಒಂದು ತಿಂಗಳ ಹಿಂದೆ ತೀರ್ಹೋತು" ಎಂದಳು. ಮೊದಲು ನಾನು ಆಕೆ ಯಾರ ಕುರಿತು ಹೇಳುತ್ತಿದ್ದಾಳೆಂದೇ ತಿಳಿಯಲಾಗಲಿಲ್ಲ.

"ಯಾರು ಗಪ್ಪತ್ತೆ ಮಗ್ಳು ಇಂಬಕ್ಕನೇಯಾ?" ಎಂದು ಒತ್ತಿ ಕೇಳಿದೆ. "ಹೌದೇ ಅದೇಯಾ ಮತ್ಯಾರು ಮಾಡ್ಕಂಡೆ? ಈ ಊರಲ್ಲಿದ್ದುದು ಒಂದೇ ಇಂಬಕ್ಕಲ್ದ ಮಳ್ಳ?" ಎಂದು ಹಾಸ್ಯ ಮಿಶ್ರಿತವಾಗಿ ನುಡಿದಳು. ನನಗೆ ನಂಬಲೇ ತುಸು ಕಷ್ಟವಾಯಿತು. ಮಹಾ ಅಂದರೆ ಇಪ್ಪತ್ತೆಂಟು ವರ್ಷವಾಗಿದ್ದಿರಬೇಕು. ಮೇಲಾಗಿ ಆರು ವರ್ಷದ ಚಿಕ್ಕ ಹೆಣ್ಣು ಮಗು ಬೇರೆ. ಇದನ್ನೆಲ್ಲಾ ನೆನೆದು ಹೊಟ್ಟೆಯಲ್ಲಿ ಏನೋ ತಳಮಳ ಆರಂಭವಾಯಿತು. ನಾನು ಆಕೆಯನ್ನು ನೋಡದೇ, ವಿಚಾರಿಸದೇ ಹಲವು ವರ್ಷಗಳೇ ಸಂದಿದ್ದರೂ ಆ ಕ್ಷಣ ನನ್ನ ಅತೀ ಹತ್ತಿರದ, ಆಪ್ತ ವ್ಯಕ್ತಿಯೊಬ್ಬರ ಅಗಲುವಿಕೆಯಿಂದ ಉಟಾಗುವ ನೋವು, ಸಂಕಟ ನನ್ನಲ್ಲಿ ಉಂಟಾಯಿತು. ನಾನು ಬಾಲ್ಯದಲ್ಲಿ ಆಕೆಯೊಂದಿಗೆ ಕಳೆದ ಹಲವು ಸಿಹಿ ನೆನಪುಗಳು ಸಾಗರದಲೆಗಳಂತೆ ಬಂದಪ್ಪಳಿಸತೊಡಗಿದವು. ಅಂದಿನ ದಿನಗಳಲ್ಲಿ ಇಂಬಕ್ಕ ನನ್ನೊಡನೆ ಮಗುವಾಗಿ ಆಡುತಿದ್ದುದು, ನನಗಾಗಿ ಹಲವು ಬಗೆಯ ತಿಂಡಿಗಳನ್ನು ತರುತ್ತಿದ್ದುದು ನೆನಪಿಗೆ ಬಂದು ಮನ ವ್ಯಾಕುಲಗೊಂಡಿತು.

ಈವರೆಗೆ ನಗು, ಹರಟೆಯಲ್ಲಿ ಎಲ್ಲೋ ಅಡಗಿದ್ದ ಪ್ರಯಾಣದ ಆಯಾಸ ಒಮ್ಮೆಲೇ ಮೈಮನವನ್ನೆಲ್ಲಾ ಆವರಿಸತೊಡಗಿತು. ಊಟಕ್ಕೆಂದು ಬಾಳೆ ಎಲೆ ಸಿದ್ಧವಾಗಿತ್ತು. ಆದರೆ ಇಂಬಕ್ಕನ ಸಾವಿನ ವಾರ್ತೆಯಿಂದ ಏನೊಂದೂ ಬೇಡವೆಂದೆನಿಸಿತು. ಸೀದಾ ಅಮ್ಮನ ಕರೆದೆ "ಅಮ್ಮ ನಂಗೆ ತುಂಬಾ ಸುಸ್ತು ಅನಸ್ತು, ಆನು ಮನಕ್ಯತ್ತಿ, ಉಟಕ್ಕೆಬ್ಸಡ, ಆಸ್ರಿನೇ ಸಾಕಷ್ಟಾತು" ಎಂದು ಆಕೆಯ ಪ್ರತ್ಯುತ್ತರಕ್ಕೂ ಕಾಯದೇ ಉಳಿದವರಿಗೆ ಆಯಾಸದ ಸಬೂಬು ಹೇಳಿ ಜಗುಲಿಗೆ ಬಂದು ಬಿಟ್ಟೆ. ನಾನು ಮಲಗಲು ತಯಾರಿ ನಡೆಸುತ್ತಿರುವುದನ್ನು ಅಲ್ಲೇ ಮಂಚದ ಮೇಲಿದ್ದ ಅಜ್ಜಿ ಗಮನಿಸುತ್ತಿದ್ದಳು. "ಈಗ ಊಟಕ್ಕಾಗಿತ್ತು. ಉಂಡ್ಕಂಡು ಮಲ್ಗಲಾಗ್ದಾ? ಎಂಬ ಆಕೆಯ ಕಳಕಳಿಯೂ ಊಟದ ಕಡೆ ಗಮನ ಸೆಳೆಯಲಿಲ್ಲ. "ಹಸ್ವಿಲ್ಲೆ ಆಯಮ್ಮ ಆಸ್ರಿಗೆ ತಗಂಜ" ಎಂದು ಚುಟುಕಾಗಿ ಉತ್ತರಿಸಿ ಹಾಸಿಗೆಗೊರಗಿದೆ. ದೇಹ, ಮನಸ್ಸು ಎರಡೂ ಬಳಲಿದ್ದರೂ ನಿದ್ದೆಯ ಸುಳಿವೇ ಇರಲಿಲ್ಲ. ಮನಸನ್ನೆಲ್ಲಾ ಇಂಬಕ್ಕನ ಅಸ್ಪಷ್ಟ ಮುಖವೇ ತುಂಬಿತ್ತು. ಆಕೆಯನ್ನು ನೋಡದೇ ಭೇಟಿ ಮಾಡದೇ ಸುಮಾರು ಎಂಟು ವರ್ಷಗಳೇ ಸಂದಿದ್ದವು. ಈ ನಡುವೆಯೇ ಆಕೆಯ ಮದುವೆಯಾಗಿ ಒಂದು ಮಗುವೂ ಆಗಿತ್ತು. ಬಂದಾಗಲೆಲ್ಲಾ ಕೇವಲ ಆಕೆಯ ಕುರಿತು ವಿಷಯಗಳು ಮಾತ್ರ ಸಿಕ್ಕಿದ್ದವೇ ಹೊರತು, ಆಕೆಯನ್ನು ಕಾಣಲಾಗಿರಲಿಲ್ಲ. ಆಕೆಯನ್ನು ಕೊನೆಗೂ ನೋಡಲಾಗಲಿಲ್ಲವಲ್ಲ ಎಂಬ ಕೊರಗೂ ಮೂಡತೊಡಗಿತು. ನಿದ್ದೆಯ ಬದಲು, ಗತಕಾಲದ ನೆನಪುಗಳೇ ಸಿನಿಮಾದ ರೀಲಿನಂತೇ ಬರತೊಡಗಿದವು.

ನಮ್ಮ ಮೂಲ ಮನೆಯ ಪಕ್ಕದಲ್ಲಿಯೇ ಇಂಬಕ್ಕನ ಮನೆ. ನಿಜ ನಾಮ ವಿಮಲ ನಮ್ಮೆಲ್ಲರ ಪಾಲಿಗೆ ಇಂಬಕ್ಕ ಎಂದಿನಿಸಿದ್ದಳು. ತಂದೆ, ತಾಯಿಯರಿಗೆ ಒಬ್ಬಳೇ ಮಗಳ ತಾಯಿ ಪ್ರಾಪಂಚಿಕ ಜ್ಞಾನವಿಲ್ಲದ ಮುಗ್ಧೆ. ತಂದೆ ಏನೊಂದೂ ಅಕಾದವಿಲ್ಲದವ ಒಬ್ಬ ಅಪ್ರಯೋಜಕ ಅಣ್ಣ. ಸದಾ ಜೂಜು, ಹೊಡೆತ, ಬೈಗುಳದಲ್ಲೇ ಆತನ ದಿನ ಆರಂಭ. ತಂದೆ –ತಾಯರೆಂಬ ಭಯವಾಗಲೀ, ತಂಗಿಯೆಂಬ ಪ್ರೇಮವಾಗಲೀ ಇನಿತು ಇಲ್ಲದವ. ಕೊನೆಯವ ತಮ್ಮ. ಆತನೂ ಅಷ್ಟಕಷ್ಟೇ, ಅಣ್ಣನಂತೆ ದುಷ್ಟನಲ್ಲದಿದ್ದರು ಏನೊಂದೂ ಕೆಲಸವನ್ನೂ ಮಾಡದೆ ಸುಮ್ಮನೆ ಕುಳಿತಿರುವವ. ಮನೆಯಲ್ಲೋ ಕಡ ಬಡತನ. ಇಂತಹ ಪರಿಸರದಲ್ಲಿ ಇಂಬಕ್ಕ ಕೆಸರುಗೊಳದಲ್ಲಿರುವ ತಾವರೆಯಂತಿದ್ದಳು ಆಗತಾನೇ ಕನಸುಗಳು ಮೂಡುವ, ಅರಳುವ ವಯಸ್ಸು. ಆದರೆ ಆಕೆಯ ಪರಿಸರ ಮನೆಯವರ ವರ್ತನೆ ಅರಳುವ ಆಕೆಯ ಮನಸ್ಸನ್ನು ಅಲ್ಲೇ ಮುದುಡಿಸತೊಡಗಿದ್ದವ ಆಗ ನನಗೆ ಕೇವಲ ಎಂಟು ವರ್ಷ, ಆಕೆಗೆ ಹದಿನೆಂಟು. ಆದರೆ ವಯಸ್ಸಿಗೂ ಮೀ ನಮ್ಮಿಬ್ಬರ ನಡುವೆ ಒಂದು ಆತ್ಮೀಯ ಸಂಬಂಧ ಮೂಡಿತ್ತು. ಯಾವೊಂದು ಹೆಸರಿಗು ನಿಲುಕದ ಭಾವ ಸಂಬಂಧವಾಗಿತ್ತು.

ಊರಿಗೆ ಬಂದಾಗ ಅಪ್ಪ ನನ್ನನ್ನು ತೋಟಕ್ಕೆ ಒಯ್ದು ಅಲ್ಲೇ ಕೂರಿಸಿಕೊಂಡ ಅಡಿಕೆ ಆರಿಸುವಾಗಲೋ, ಏಲಕ್ಕಿ ಕೊಯ್ಯುವಾಗಲೋ, ಅದೆಲ್ಲಿಂದಲೋ ಇಂಬಕ್ಕ ದರ್ಶನವಾಗುತ್ತಿತ್ತು. ಆಕೆಗೆ ನನ್ನಲ್ಲಿ ಅದೇನು ಆಕರ್ಷಣೆಯೋ, ಮನೆಯಲ್ಲಿ ನನ ಓರಿಗೆಯವರೇ ಆದ ಹಲವು ಮಕ್ಕಳಿದ್ದರೂ ಅಪರೂಪಕ್ಕೆಲ್ಲೋ ಬರುತ್ತಿದ್ದ ನಾನೆಂದ ತುಂಬಾ ಇಷ್ಟ. ನನಗೂ ಅಷ್ಟೆ ಆಕೆಯ ಜೊತೆ ಆಡುವುದೆಂದರೆ ಬಲು ಪ್ರೀತಿ "ಗೋಪಾಲಣ್ಣ ಆನು ತೇಜುನ ಕರ್ಕ ಹೋಗ್ತಿ. ದೂರೇನೂ ಅಲ್ಲ ಇಲ್ಲೇ ಹಿತ್ತಲಿಗ ಅದು ಇಲ್ಲಿದ್ದು ಏನ್ ಮಾಡ್ತು.. ಬೇಜಾರ್ ಬತ್ತು" – ಎಂದು ಹೇಳಿ ಅಪ್ಪನ ಉತ್ತರಕ್ ಕಾಯದೆ ನನ್ನ ಎತ್ತಿಕೊಂಡು ಬಂದಷ್ಟೇ ವೇಗದಲ್ಲಿ ಮಾಯವಾಗುತ್ತಿದ್ದಳು. ನಾನ ಇಂಬಕ್ಕ ಇಬ್ಬರೇ ತಾಸುಗಟ್ಟಲೇ ಆಡುತ್ತಿದ್ದೆವು. ಆಟದ ಜೊತೆ ಆಕೆ ಕೊಡುತ್ತಿರ ಉಪ್ಪು, ಹಸಿ ಮೆಣಸು ಒರಿಸಿದ್ದ ಸವತೆ ಮಿಡಿ, ಮೆಣಸು ಹಾಕಿ ಕಡ್ಡಿ ಸಿಕ್ಕಿಸಿ ಕೊಡುತ್ತಿರ ಹುಣಸೆ ಹಣ್ಣಿನ ಲೋಲಿಪಾಪ್, ಇವಿಷ್ಟೇ ನನ್ನ ಪ್ರಪಂಚವಾಗಿ ಬಿಡುತ್ತಿದ್ದವು. ಸಹಜವಾ ಸುಂದರಿಯಾಗಿದ್ದ ಇಂಬಕ್ಕ ಆಗ ಮತ್ತೂ ಚೆನ್ನಾಗಿ ಕಾಣುತ್ತಿದ್ದಳು. ಆ ಸಮಯದಲ್ಲಿ ಅಪ್ಪನಾಗಲೀ, ಏಲಕ್ಕೀ ತೋಟವಾಗಲೀ, ಕೊನೆಯಲ್ಲಿ ಅಪ್ಪ ನನಗಾಗಿ ಕೊಡುತ್ತಿರ ಹಸಿ ಏಲಕ್ಕಿಯಾಗಲೀ ನೆನಪಿಗೇ ಬರಲೊಲ್ಲದು. ಮನೆಗೆ ಬಂದರೂ ಅಷ್ಟೇ ಯಾರೇನು ಹೇಳಿದರೂ ಕೇಳದೆ, ನಿಮಿಷವೂ ಕುಳಿತುಕೊಳ್ಳದೇ ನನ್ನ ಹಿಡಿದು ತೋಟದ ಕಡೆಗೊ

ಒತ್ತಲ ಕಡೆಗೋ ಓಡುವಳು. ಜನರ ಕಂಡರೆ ಆಕೆಗೆ ಇರುವ ಅಸಮಾಧಾನ, ಅವರು ಹಾಕುವ ಅರ್ಥವಿಲ್ಲದ ಪ್ರಶ್ನೆಗಳು ಬಹುಶಃ ಆಕೆಯನ್ನು ಬೇರೆ ಯಾರೊಡನೆಯೂ ಬೆರೆಯದಂತೆ ಮಾಡಿದ್ದವು. ಮುಗ್ಧಳಾಗಿದ್ದ ನಾನು, ನನ್ನ ಮಾತುಗಳು ಅವಳಿಗೆ ಬಹಳ ಪ್ರಿಯವೆನ್ನಿಸಿದ್ದರೆ ಆಶ್ಚರ್ಯವೇನಲ್ಲ. ನಾನೂ ಅಷ್ಟೇ ಊರಿಗೆ ಬರುವಾಗಲೆಲ್ಲಾ ಇಂಬಕ್ಕನೊಂದಿಗೆ ಆಡುವುದನ್ನು ಎಣಿಸಿ ಸಂತಸಗೊಳ್ಳುತ್ತಿದ್ದೆ. ಆದರೆ ಕ್ರಮೇಣ ಸಮಯಕಳೆದಂತೆ ಕಾರಣಾಂತರಗಳಿಂದ ನಮ್ಮಿಬ್ಬರ ಭೇಟಿ ಕಡಿಮೆಯಾಗತೊಡಗಿತು. ನಾನು ಬೆಳೆದಂತೆಲ್ಲಾ ನನ್ನ ಓರಗೆಯವರ ಸಹವಾಸವೇ ಪ್ರಿಯವೆನಿಸತೊಡಗಿ, ನಾನೂ ಆಕೆಯನ್ನು ಆಡಲು ಕರೆಯುವುದು ನಿಲ್ಲತೊಡಗಿತು.

ಆ ವರ್ಷ ನಾನು ಬಹಳ ಸಮಯದ ನಂತರ ಊರಿಗೆ ಬಂದಿದ್ದೆ. ಸದಾ ನಾನು ಬಂದಿರುವ ಸುದ್ದಿ ಕೇಳಿದ ಕೂಡಲೇ ಓಡಿ ಬರುತ್ತಿದ್ದ ಇಂಬಕ್ಕ ಒಂದು ದಿನ ಕಳೆದರೂ ಬರದಿದ್ದಾಗ ಆಶ್ಚರ್ಯಗೊಂಡೆ. ನಾನು ಊರಿಗೆ ಬರದೇ ವರ್ಷವಾಯಿತು. ಬಹುಶಃ ನನ್ನ ಮರೆತಿರಬಹುದು, ಇಲ್ಲಾ ನಾನು ಬಂದದ್ದೂ ಇನ್ನೂ ತಿಳಿದಿರಲಿಕ್ಕಿಲ್ಲ ಎಂದೆಲ್ಲಾ ಸಮಾಧಾನ ಪಟ್ಟುಕೊಂಡೆ. ಆದರೆ ಆಮೇಲೆ ತಿಳಿಯಿತು, ಇಂಬಕ್ಕನಿಗೆ ಮಾನಸಿಕ ಅಸ್ವಸ್ಥತೆ ಉಂಟಾಗಿ, ಚಿಕಿತ್ಸೆಗಾಗಿ ಹುಬ್ಬಳ್ಳಿಗೆ ಒಯ್ದಿದ್ದಾರೆ ಎಂದು. ಅಷ್ಟೇ ಆನಂತರ ಆಕೆಯನ್ನು ನೋಡಲೇ ಆಗಲಿಲ್ಲ. ಆದರೆ ಊರಿಗೆ ಬಂದಾಗಲೆಲ್ಲಾ ಆಕೆಯ ಕುರಿತು ವಿಚಾರಿಸುತ್ತಿದ್ದೆ. ಆಕೆ ಗುಣಮುಖಳಾಗಿ ಬಂದದ್ದು, ನಂತರ ಓದು ಮುಂದುವರಿಸಿದ್ದು, ನಂತರ ಒಬ್ಬ ಒಳ್ಳೆಯ ಹುಡುಗ ಆಕೆಯ ಕತೆಯನ್ನೆಲ್ಲಾ ತಿಳಿದೂ ಮೆಚ್ಚಿ ಮದುವೆಯಾಗಿ ಬೆಳಗಾಂವಿಯಲ್ಲಿರುವುದು, ಎಲ್ಲಾ ತಿಳಿದು ಸಮಾಧಾನಗೊಂಡು ಆಕೆಯನ್ನು ಭೇಟಿಯಾಗಲು ಆಗಲಿಲ್ಲವಲ್ಲ ಎಂಬ ಕೊರಗೂ ಮರೆಯಾಯಿತು. ಮದುವೆಯಾದ ಮೇಲೂ ಆಕೆ ಪುನಃ ಮನೋವ್ಯಾಧಿಗೆ ಸಿಲುಕಿದಾಗ, ಇನಿತೂ ಬೇಸರಿಸದೆ ಆಕೆಯ ಗಂಡ ಚಿಕಿತ್ಸೆ ನೀಡುತ್ತಿದ್ದಾನೆಂದು ತಿಳಿದು ನೆಮ್ಮದಿಯಾಗಿತ್ತು. ಆತನ ಬಗ್ಗೆ ಅರಿಯದಂತೆಯೇ ಅಪಾರ ಗೌರವ ಮೂಡಿತ್ತು. ಹೀಗೇ ಹಲವು ವರ್ಷಗಳೇ ಕಳೆದವು. ಆಕೆಯೂ ಕ್ರಮೇಣ ನನ್ನ ಮನಃ ಪಟಲದಿಂದ ಮರೆಯಾಗುತ್ತಿರುವಾಗ, ಈಗ ದೀರನೆ ಇಂಬಕ್ಕನ ಸಾವಿನ ಸುದ್ದಿ ಸಿಡಿಲಿನಂತೆ ಬಂದಿತ್ತು.

ಏನಾಗಿತ್ತು? ಹೇಗೆ ತೀರಿಹೋದಳು, ಎಂಬುದನ್ನೂ ತಿಳಿಯದೆ ಬಂದೆನಲ್ಲಾ ಎಂದು ಹಳಿಯತೊಡಗಿದೆ. ಆದರೆ ಈಗ ಪುನಃ ಒಳಗೆ ಹೋಗುವಂತಿಲ್ಲ. ಎಲ್ಲರೂ ಊಟದ ಗಡಿಬಿಡಿಯಲ್ಲಿರುತ್ತಾರೆ. ನನ್ನ ಕಂಡರೆ ಎಲೆಯ ಮುಂದೆ ಕೂರಿಸುವುದು ಗ್ಯಾರಂಟಿ. ಅದೂ ಅಲ್ಲದೇ ಉಳಿದವರಿಗೆ ಈ ವಿಷಯದ ಚರ್ಚೆ ಅಷ್ಟೊಂದು

ಉತ್ಸುಕವೆಸದಿರಬಹುದು, ಎಂದು ಎಣಿಸಿ ಸುಮ್ಮನುಳಿದೆ. ಆದರೂ ಮನಸ್ಸು ಆಕೆಯ ಸಾವಿನ ಹಿನ್ನಲೆ ತಿಳಿಯಲು ಹಪಹಪಿಸುತ್ತಿತ್ತು. ಕೂಡಲೇ ಆಯಮ್ಮನ ನೆನಪಾಯಿತು. ಸ್ವಲ್ಪ ಚೇತರಿಕೆ ಬಂದಂತಾಗಿ ಎದ್ದು ಕುಳಿತೆ. ಅಲ್ಲೇ ಪಕ್ಕದಲ್ಲಿದ್ದ ಆಯಮ್ಮನ ಬಳಿ ಬಂದು ಮಾತಿಗೆ ತೊಡಗಿದೆ. "ಆಯಮ್ಮ ಅನು ಈಗಷ್ಟೇ ಅಂತು ಗಪ್ಪತ್ತೆ ಮಗ್ಳು ಇಂಬಕ್ಕ ತೀರ್ಹ್ಹೋತಡಲಿ, ಎಂತಾಗಿತ್ತು? ಹುಷಾರಿತ್ತಿಲ್ಯ? ಅದರ ಗಂಡಂಗೆ ತುಂಬಾ ಬೇಜಾರಾಗಿರವು ಅಲ್ದ? ಎಂದು ಮಾತಿಗೆ ಎಳೆದೆ.

"ಹೂಂ... ಈಗ ಒಂದು ತಿಂಗ್ಳ ಹಿಂದೆ ಮಧ್ಯಾಹ್ನದ್ಹೊತ್ತಿಗೆ ಅದ್ರ ಗಂಡ ಕಾರ್ನಲ್ಲಿ ಶವ ಹಾಯ್ಕ ತಂದ್ನಪ್ಪ.. ಯಂಗೆ ನೋಡಲ್ಹೋಪ್ಲಾಯಿಲ್ಲೆ. ನಿನ್ನಜ್ಜಂಗೆ ಹುಷಾರಿತ್ತಿಲ್ಲೆ, ಉಳ್ದವೆಲ್ಲ ಹೋಗಿದ್ದ. ಎದ್ನೋವು ಬಂದು ಸತ್ತ್ಹೋತಡ. ಗಂಡ್ನೇ ಅಂದ. ಅಂವ ಹೇಳದ್ದೇ ಬದ್ಧ. ಎಷ್ಟ ಕರೆಯೋ ಎಷ್ಟು ಸುಳ್ಳೋ ಅವಂಗೇ ಗೊತ್ತು, ಬಂಗಾರದಂಥ ಕೂಸಾಗಿತ್ತು.. ಪಾಪ ಅದರ ಮಗ್ಳ ನೋಡಿರೆ ಸಂಕ್ಟ ಆಗ್ತು"..ಎಂದು ಇಂಬಕ್ಕನ ಗಂಡನ ಮೇಲೆ ಸಂಶಯದ ಎಳೆ ಎಳೆದಾಗ ನಾನು ದಿಗ್ಭ್ರಾಂತಳಾದೆ. ಆಕೆಯ ಗಂಡನ ಆದರ್ಶ, ತ್ಯಾಗದ ಕುರಿತು ಮೆಚ್ಚಿ ಎಂದೂ ಕಂಡಿರದ ಆತನ ಬಗ್ಗೆ ಗೌರವಮೂಡಿಸಿಕೊಂಡಿದ್ದ ನನಗೆ ಇದನ್ನು ನಂಬಲೇ ಸಂಶಯಾವಾಯಿತು. ಇಲ್ಲಸಲ್ಲದ ಸುದ್ದಿ ಹರಡಿರಬೇಕೆಂದು ಕಸಿವಿಸಿಗೊಂಡೆ.

"ಹೌದೆ ಆಯಮ್ಮ, ಎದೆ ನೋವೇ ಬಂದು ಸತ್ತಿಕ್ಕು. ಅಂವ ಎಂತಕ್ಕೆ ಸುಳ್ಳು ಹೇಳ್ತ? ಅದ್ರ ವಿಷಯ ಎಲ್ಲಾ ಗೊತ್ತಿದ್ದೂ, ಮದ್ವೆಯಾದ. ಅದ್ಕೆ ಜೋರಾದಾಗ ಡಾಕ್ಟರ್ಹತ್ರ ಕರ್ಕಂಡ್ಹೋಗಿ ಗುಣಮಾಡ್ಸಿದಿದ್ನಡ. ಅಂತವ್ನ ಬಗ್ಗೆ ಸಂಶಯ ಪಡುದು ಸರಿಯಾಗ್ತಿಲ್ಯನ" ಎಂದು ಸಣ್ಣದಾಗಿ ಅಸಮಾಧಾನ ಪ್ರಕಟಿಸಿದೆ. ಆಗಲೇ ಊಟ ಮುಗಿಸಿ ಜಗುಲಿ ಪ್ರವೇಶಿಸಿದ ಅತ್ತಿಗೆಗೆ ನಾನು ಆಯಮ್ಮನ ಜೊತೆ ಮಾತಿಗೆ ತೊಡಗಿರುವುದು ಕಂಡು ಆಶ್ಚರ್ಯವಾಯಿತು. "ತೇಜು ಇನ್ನೂ ಮಲ್ಗಿದ್ದಿಲ್ಯನೇ? ನಂಗ್ಳನ್ನೆಲ್ಲಾ ಬಿಟ್ಟಕ್ಕಿ ಆಯಮ್ಮನ್ಹತ್ರ ಯಂತ ಕತಿಗೆ ಹಣಕಿದ್ದೆ? ಎಂದು ಅಣಕಿಸಿದಳು. ಆಕೆಯ ಮಾತಿನಿಂದ ಸಿಕ್ಕಿಬಿದ್ದ ಅನುಭವವಾಗಿ ನನ್ನಲ್ಲೂ ಚಿಕ್ಕ ಅಪರಾಧೀ ಭಾವ ಮೂಡಿತು. "ಹಾಂಗೆನಿಲ್ಯೇ, ಇಂಬಕ್ಕನ ಸುದ್ದಿ ಕೇಳಿ ರಾಶಿ ಬೇಜಾರಾತು. ಆ ಕ್ಷಣ ಎಂತದೂ ಬೇಡ ಅನಶ್ಚು. ಜಗ್ಲಿಗೆ ಬಂದಮೇಲೆ ಎಂತ ಆಗಿತ್ತು ಹೇಳಿ ತಿಳ್ಕಂಬ್ಲೆ ಆಯಮ್ಮನ ಹತ್ರ ಕುಂತಿ" ಎಂದು ಸಮಜಾಯಿಸಿ ನುಡಿದೆ. ಪ್ರತಿಯಾಗಿ ಆಕೆ ಏನೂ ನುಡಿಯದೇ ಮೌನವಹಿಸಿದಾಗ.. ಈ ವಿಷಯದಲ್ಲಿ ಆಕೆಗೆ ತುಂಬಾ ತಿಳಿದಿರಬೇಕೆಂದೆನಿಸಿತು. ಒಳಗಿನಿಂದ "ಆಯಮ್ಮ ಆಸ್ರಿಗಾತೇ.. ಬರ್ಲಕ್ಕು" ಎಂಬ ಕರೆಯೊಡನೆ ಅಜ್ಜಿ ಫಲಾರಕ್ಕೆಂದು ಒಳಹೋಗಲು ಮೇಧಾಳ ಬಳಿ ಸರಿದೆ. "ಅಲ್ದೇ

ಮೇಧಾ ಆಯಮ್ಮಂಗೆಂತಕ್ಕೆ ಅದರ ಗಂಡ್ನಮೇಲೆ ಸಂಶಯ? ಅಷ್ಟೊಳ್ಳೆಂವ ಹೇಳಿ ಅದ್ರ ಮದ್ವೆಯಾದಾಗ ಗಪ್ಪತ್ತೆನೇ ಹೊಗಳಿತ್ತು? ಎಂದು ಮೆಲ್ಲನೆ ಮಾತಿಗೆ ತೊಡಗಿದೆ. "ತೇಜು ಮದ್ವೆಯಾಗಿ ಎರ್ಡವರ್ಷ ಎಲ್ರೂ ಹಾಂಗೇ ಹೇಳ್ತಿದ್ದ. ಅದ್ರ ವಿಷ್ಯ ಎಲ್ಲಾ ತಿಳ್ದೂ, ಅಂಥ ದೊಡ್ಡ ಹುದ್ದೆಯಲ್ಲಿದ್ದಂವ ಅದ್ರನ್ನ ಮದ್ವೆಯಾದ ಹೇಳಿ ಕೊಂಡಾಡ್ತಿದ್ದ. ಆಮೇಲೆ ಕಂಡ್ಚು ಅವ್ನ ನಿಜ ಬಣ್ಣ. ಆಯಮ್ಮನ ಬಿಡು, ಸ್ವತಃ ಗಪ್ಪಕ್ಕನೇ ಹೇಳ್ತು.. ಬೇಕಾರೆ ಕೇಳು, ತನ್ನ ಮಗ್ಳ ಸಾವಿಗೆ ಅಳಿಯನೇ ಕಾರಣ ಹೇಳಿ..ಅಪರೂಪಕ್ಕೆಲ್ಲಾದ್ರೂ ಊರಿಗೆ ಬಂದಾಗ ಇಂಬಕ್ಕ ಕಣ್ಣೀರಿಡ್ತಿತ್ತಡ. ಯನ್ನ ಅಲ್ಲಿ ಹೊಡಿತ, ಹಿಂಸೆ ಕೊಡ್ತ ಹೇಳಿ.. ಆತು ಅಂವ ಹೇಳ್ದಾಂಗೆಯಾ ಎದೆ ನೋವೇ ಬಂದು ಹೋದಿಕ್ಕು ಹೇಳಿ ತಿಳ್ಕಂಬ.. ಆದ್ರೆ ಎದೆ ನೋವ ತರ್ಸಲೂ ಬತ್ತು!!" ಎಂದಾಗ ಆ ಮಾತಲ್ಲಿದ್ದ ಕಟು ಸತ್ಯ, ಕ್ರೂರತೆಗೆ ನಡುಗಿದೆ.

ಅವಳು ಅಷ್ಟಕ್ಕೂ ಬಿಡದೆ - "ಹೋಗ್ಲಿ, ಅಂವ ಅಷ್ಟೊಂದು ಅದ್ರನ್ನ ಹಚ್ಕಂಡಿದಿದ್ರೆ ಹೆಣ ತರ್ಬೇಕಿರೆ ಒಳ್ಳೇ ಸೂಟ ಹಾಯ್ಕ ಬತ್ತಿದ್ನ? ಹೋಗ್ಲಿ, ಗಡಿಬಿಡಿಲಿ ಯಂತದೂ ಸಿಕ್ದೇ ಹಾಯ್ಕ ಬಂದ ಹೇಳಿ ತಿಳ್ಕಂಬ, ಆದ್ರೆ ಹೆಣ ಸುಟ್ಟ ಮರ್ದಿನನೆಂಯಾ ಉಳ್ದಕಾರ್ಯನೆಲ್ಲಾ ತಾನು ಗೋಕರ್ಣದಲ್ಲೇ ಮಾಡ್ತಿ ಅಲ್ಲಿಂದಲೇಯಾ ಬೆಳಗಾಂವಿಗೆ ಹೋಗ್ತಿ ಹೇಳಿ, ಮಗ್ಳನ್ನೂ ಬಿಟ್ಟಕ್ಕಿ ಹೋದಂವ, ಇಲ್ಲೀವರೆಗೂ ತಲೆಹಾಕಿದ್ನಿಲ್ಲೆ ಎಂತಕ್ಕೆ ಹೇಳು? ಅದೂ ಸಾಯ್ಲಿ, ಸತ್ತ ತಿಂಗ್ಳಾತೋ ಇಲ್ಯೋ ಇನ್ನೊಂದು ಮದ್ವೆಗೆ ಅವಸರದಲ್ಲಿ ತಯಾರಿ ನಡ್ಸತಿದ್ನ?" ಎಂದು ಒಂದೊಂದೇ ಕಹಿ ಸತ್ಯಗಳನ್ನು ಪ್ರೆಶ್ನಾರೂಪದಲ್ಲೆಸೆದಳು. ಆಕೆಯ ಪ್ರತಿಯೊಂದು ಮಾತುಗಳೂ ನಾನು ಅವನ ಮೇಲೆ ಇರಿಸಿದ್ದ ಗೌರವ, ಮೆಚ್ಚುಗೆಯನ್ನು, ನನ್ನನ್ನೂ ಅಣಕಿಸಿ ಇರಿಯತೊಡಗಿದವು. ಆತನ ಮೇಲೆ ಅಪಾರ ಕ್ರೋಧ, ತಿರಸ್ಕಾ ಮೂಡಿತು. ಆತನೇ ನಿಜವಾದ ಮನೋರೋಗಿ ಎಂದೆನಿಸಿತು. ಇದ್ದೊಬ್ಬ ಮಗಳ ಅಕಾಲ ಮರಣದಿಂದ ಸೋತಿರುವ ಅಸಹಾಯಕ ಗಪ್ಪ ತ್ತೆಯ ಮನಃಸ್ಥಿತಿಯನ್ನು ನೆನೆದು ಬಹಳ ಸಂಕಟವೆನಿಸಿತು.

ಮತ್ತೇನೂ ಕೇಳುವುದು ಬೇಡವೆನಿಸಿತು. ಪುನಃ ಹಾಸಿಗೆಗೆ ತೆರಳಿ ಕಣ್ಣುಮುಚ್ಚಿ ಮಲಗಲು ವ್ಯರ್ಥ ಪ್ರಯತ್ನ ಪಟ್ಟೆ. ಆ ರಾತ್ರಿಯ ನೀರವತೆ ನನ್ನೆದೆಯನ್ನೂ ಆವರಿಸಿ, ಕಣ್ಣಂಚನ್ನು ಒದ್ದೆಯಾಗಿಸಿತು.

ಯಾವುದೋ ಒಂದು ಅಪರಾಧಿ ಪ್ರಜ್ಞೆ ಕಾಡತೊಡಗಿತು. ಬೆಳಿಗ್ಗೆ ಎದ್ದು ಆಕೆಯ ಮಗಳನ್ನು ಕರೆದು ಮಾತಾಡಿಸಬೇಕೆಂದು ನಿರ್ಧರಿಸಿದೆ. ಇರುವಷ್ಟು ದಿನವಾದರೂ ಏನೊಂದೂ ಅರಿವಿರದ ಆ ಮಗುವನ್ನು ನನ್ನೊಂದಿಗೇ ಇರಿಸಿಕೊಂಡು ಕೆಲವು ದಿನವಾದರೂ ಆಕೆಯನ್ನು ಸಂತೈಸಿ ಮನಸ್ಸಿಗೆ ಸಮಾಧಾನ ತಂದುಕೊಳ್ಳಬೇಕೆಂದೆನಿಸಿತು. ಇಂಬಕ್ಕನ ನಿಸ್ವಾರ್ಥ ಪ್ರೀತಿಯ ಋಣವನ್ನಂತೂ ತೀರಿಸಲು ಸಾಧ್ಯವಿಲ್ಲ. ಈ ರೀತಿಯಲ್ಲಾದರೂ ಆಕೆಗೆ ನನ್ನ ಕಿರು ಶ್ರದ್ಧಾಂಜಲಿ ಸಲ್ಲಿಸಬೇಕೆಂದೆನಿಸಿತು. ಆಗ ನನ್ನ ಮನಸ್ಸಿಗೆ ತುಸು ಸಮಾಧಾನವಾದಂತೆನಿಸಿತು. ಮನದಲ್ಲೇ ಇಂಬಕ್ಕನ ಮುಖದ ಬದಲು ಇನ್ನೂ ನೋಡಿರದ ಇಂಬಕ್ಕನ ಮಗುವಿನ ಮುಖವನ್ನರಸುತ್ತಾ ನಿದ್ರೆಗೆ ವಶವಾದೆ.

* * *

ಕಾಣ್ಕೆ

ಮುಂಜಾವಿನ ಇಬ್ಬನಿಗಳು ಸುತ್ತಲಿನ ಮರಗಿಡಗಳ ಅಂಚಿನಲ್ಲಿ, ಹಸುರೆಲೆಗಳ ಮೇಲೆ ಬಿದ್ದು ಮುತ್ತುಗಳಂತೆ ಹೊಳೆಯುತ್ತಿದ್ದವು. ಆಗ ತಾನೆ ಅರಳಿ ನಿಂತಿದ್ದ ಮಲ್ಲಿಗೆ, ದಾಸವಾಳ, ಗೊಂಡೆ, ಜೀನಿಯಾ ಮುಂತಾದ ಹೂವುಗಳು ಸೂರ್ಯೋದಯಕ್ಕೆ ನಗುವಿನ ಸ್ವಾಗತ ಕೋರುತ್ತಿದ್ದವು. ಹಕ್ಕಿಗಳ ಕಲರವ, ಕೋಗಿಲೆಯ ಇಂಚರ, ಕೊಟ್ಟಿಗೆಯೊಳಗಿನ ಕರುವಿನ 'ಅಂಬಾ' ಎಂಬ ಕೂಗು, ಮೆಲ್ಲನೆ ಸುಯ್ಯೆಂದು ಬೀಸುತ್ತಿರುವ ಶೀತಲ ತಂಗಾಳಿ - ಇಂತಹ ಒಂದು ಸುಂದರ ಬೆಳಗಿನ ಪ್ರಕೃತಿಯ ಮಡಿಲಿನಲ್ಲಿ 'ಭಾವನಾ' ತನ್ನನ್ನೇ ತಾನು ಮರೆತು, ಆನಂದಾನುಭೂತಿಯನ್ನು ಹೊಂದುತ್ತಿದ್ದಳು. ಅಂತಹ ಸುಂದರ ಸನ್ನಿವೇಶದಲ್ಲಿ ವಿಹರಿಸುತ್ತಿದ್ದ ಆಕೆಯನ್ನು ಅವಳ ಬಾಲ್ಯ ಸ್ನೇಹಿತೆ 'ಸುಮ'ಳ ಕೂಗು ಬಡಿದೆಚ್ಚರಿಸಿತು. "ಲೇ ಭಾವನಾ ಎಲ್ಲಿದ್ಯೇ? ಬೆಳಗ್ಗೆನೇ ಆ ತೋಟದಲ್ಲಿ ಹೊಕ್ಕಂಡು ಅದೆಂಥ ಮಾಡ್ತ್ಯ ಏನೋಪ?! ಎಂದು ಬಡಬಡಿಸುತ್ತಾ ಅವಳ ಸನಿಹ ಬಂದಳು. ಸುಮಳ ಮನೆ ಭಾವನಾಳ ಮನೆಯಿಂದ ಕೇವಲ 5 ನಿಮಿಷದ ಹಾದಿ. ಚಿಕ್ಕಂದಿನಿಂದಲೇ ಒಟ್ಟಿಗೇ ಬೆಳೆದವರು ಅವರು. ಆದರೆ ಈರ್ವರ ಸ್ವಬಾವದಲ್ಲೂ ಅಜಗಜಾಂತರ ವ್ಯತ್ಯಾಸ. ಭಾವನಾ ಹೆಸರಿನಂತೆ ಭಾವನಾಜೀವಿ, ಕಲ್ಪನಾ ವಿಲಾಸಿ. ಹಾಗಾಗಿಯೇ ಪ್ರತಿದಿನ ಬೆಳಗ್ಗಿನ ಸೌಂದರ್ಯವನ್ನು ಸವಿಯಲು, ಅದರೊಳಗಿ ಒಂದಾಗಿ ಬೆರೆಯಲು ತಪ್ಪದೇ ಮನೆಯಂಗಳದ ಕೆಳಗಿನ ತೋಟಕ್ಕೆ ಬರುತ್ತಿದ್ದಳು. ಆದರೆ ಸುಮ ಇವಳ ತದ್ವಿರುದ್ಧ ಸ್ವಬಾವದವಳು. ಜೀವನದ ಸೂಕ್ಷ್ಮತೆಯಾಗಲೀ, ರಸಿಕತೆಯಾಗಲೀ ಆಕೆಗೆ ತಿಳಿಯದು. ಬಿಚ್ಚುಮನಸ್ಸಿನ, ತುಸು ಒರಟು ಸ್ವಭಾವದ ಹುಡುಗಿ. ಆದರೂ ಯಾವುದೋ ಒಂದು ನಂಟು, ಅನ್ಯೋನ್ಯತೆ ಇಬ್ಬರನ್ನೂ ಬೆಸೆದಿತ್ತು.

"ಅಲ್ದೇ ಭಾವನಾ ಯಾವಾಗ್ ನೋಡಿದ್ರೂ ತೋಟ, ಗದ್ದೆ, ನದಿ, ಹೇಳಿ ಭೂತ್ಪದಾಂಗೆಯಾ ತಿರಗತ್ತಾ ಇರ್ತ್ಯಲೇ! ಅದೆಂಥ ಖುಶಿ ಸಿಗ್ತೋ ಏನೋ? ಅದೇ ಗಿಡ, ಅದೇ ಹೂವು... ನೋಡಿದ್ದನ್ನೇ ನೋಡದು..ಇಶೀ.. ಬರೀ ಬೇಜಾರಪ್ಪ. ಏನಾದ್ರೂ ತಪ್ಪಸ್ಸು ಮಾಡ್ತಿದ್ಯ ಹೇಂಗೇ?" ಎಂದು ಅಸಮಾಧಾನದ ಧ್ವನಿಯಲ್ಲಿ ಛೇಡಿಸಿದಳು ಸುಮ. ಗೆಳತಿಯ ಸ್ವಭಾವವನ್ನು ಅರಿತಿದ್ದ ಭಾವನಾಳಿಗೆ ಅವಳ ಮಾತಿನಿಂದ ಜೋರಾಗಿ ನಗುಬಂತು. "ನಾ ಏನೂ ತಪಸ್ಸು ಮಾಡ್ತಾ ಇಲ್ಯೇ ಮಹಾರಾಯ್ತಿ... ನಿಂಗ್ ಇದೆಲ್ಲ ಎಲ್ಲಿ ಅರ್ಥ ಆಗ್ತು

ಹೇಳು?! ಆದಿರ್ಲಿ, ನೀ ಹೇಳು ಎಂತಕ್ಕೆ ಇಷ್ಟ ಬೆಳಗ್ಗೆನೇ ಬಂದೆ? ನಿನ್ನ ಪಾಲಿನ ಸೂರ್ಯ ಏಳಲೆ ಇನ್ನೂ ಎರಡು ತಾಸು ಇದ್ದು ಅಲ್ದ? ಈಗಿನ್ನೂವಾ ಆರುವರೆ ಮಾತ್ರ'' ಎಂದು ಬಿಡದೆ ತಾನೂ ಹಾಸ್ಯ ಮಾಡಿದಳು. ''ಹೂಂ.. ಹೇಳು ಹೇಳು ನೀ ಒಂದೇ ಹೇಳುದು ಬಾಕಿ ಇತ್ತು. ಸರಿ ಸರಿ.. ಆನು ಈಗ ನಿಮ್ಮನೆಯಿಂದ್ಲೇಯಾ ಬತ್ತಾ ಇಪ್ಪು, ಶಾಂತತ್ತೆ ಅಂತು, ನಿಂಗವು ಇವತ್ತು ನೀಲಕುಂದಕ್ಕೆ ಹೋಗ್ತ್ರಾಡ; ಸಾತಜ್ಜ ಮನೆಗೆ ಹೌದಾ? ಮತ್ತೆ ನಂಗ್ಳ ಪಿಚ್ಚರಿನ ಪ್ರೋಗ್ರಾಂ ಏನ್ ಮಾಡದು!?'' ಎಂದು ನಿರಾಶೆಯ ಧ್ವನಿಯಲ್ಲಿ ಪ್ರಶ್ನಿಸಿದಳು. ಸುಮಳ ಮಾತಿನಿಂದ ಭಾವನಾಳ ಮುಖ ಒಮ್ಮೆಲೇ ಮೊರದಗಲವಾಯಿತು. ತಾನು ಹಿಂದಿನ ದಿನ ಅಮ್ಮನ ಬಳಿ ನೀಲಕುಂದಕ್ಕೆ ಹೋಗುವ ಪ್ರಸ್ತಾಪವೇನೋ ಮಾಡಿದ್ದಳು, ಆದರೆ ಅದು ಇಷ್ಟು ಬೇಗ ಖಾತ್ರಿಯಾಗುತ್ತದೆ ಎಂದು ತಿಳಿದಿರಲಿಲ್ಲ. ಭಾವನಾ ತನ್ನ ಪ್ರೀತಿಯ ಸಾತಜ್ಜಿಯ ನೋಡದೇ ಸುಮಾರು ಆರು ತಿಂಗಳುಗಳೇ ಕಳೆದು ಹೋಗಿದ್ದವು. 'ನೀಲಕುಂದ ' ಭಾವನಾಳ ಮನೆಯಾದ 'ಕಡತೋಕ ' ದಿಂದ ಬರಿಯ ಎರಡು ತಾಸುಗಳ ಪ್ರಯಾಣವಾದರೂ, ಕಾಲೇಜು, ಓದು, ಪರೀಕ್ಷೆ ಎಂಬೆಲ್ಲಾ ಗಲಾಟೆಯಲ್ಲಿ ಅವಳಿಗೆ ಆಕಡೆ ಹೋಗಲೇ ಆಗಿರಲಿಲ್ಲ. ಈಗ ಭಾವನಾಳಿಗೆ ಪರೀಕ್ಷೆಗಳೆಲ್ಲಾ ಮುಗಿದಿದ್ದು, ಒಂದು ತಿಂಗಳ ರಜೆ ಘೋಷಿಸಲಾಗಿತ್ತು. ಹಾಗಾಗಿ ಹಾಯಾಗಿ ಅಜ್ಜಿಯೊಡನೆ ನಾಲ್ಕು ದಿವಸ ಇದ್ದು ಬರಬಹುದೆಂದು ಎಣಿಸಿ ಉತ್ಸಾಹಗೊಂಡಳು.

''ಮತ್ತ ನೋಡು, ಯೋಚ್ನೆ ಮಾಡಲೆ ಶುರುಮಾಡ್ದೆ... ನಾ ಇಲ್ಲಿ ಆವಾಗಿಂದ ಕಾಯ್ತಾನೇ ಇದ್ದಿ. ನೀ ನಿಕ್ಕಿ ಹೇಳು ಎಂತ ಮಾಡ್ತೆ ಹೇಳಿ...'' ಎಂದು ಗಟ್ಟಿಯಾಗಿ ಕೇಳಿದಳು. ಸುಮಳಿಗೆ ಗೊತ್ತು ಆಕೆ ಹೋಗುವುದು ನೀಲುಕುಂದಕ್ಕೇ ಅಂತ, ಆದರೂ ಮನದಲ್ಲಿ ಸಣ್ಣ ಆಸೆ ತನ್ನೊಂದಿಗೆ ಪಿಚ್ಚರಿಗೆ ಬಂದರೂ ಬರಬಹುದು ಎಂದು. ''ಸ್ಸಾರಿ ಸುಮಾ ನಂಗ್ಳ ಪ್ರೋಗ್ರಾಂನ ನಾವು ಮುಂದಿನವಾರ ಇಟ್ಕಂಬನಾ, ಆನು ಆದಷ್ಟು ಬೇಗ ಅಲ್ಲಿಂದ ಬತ್ತಿ, ನಿಂಗೇ ಗೊತ್ತಿದ್ದಲೆ, ಆನು ಸಾತಜ್ಜ ಮನೆಗೆ ಹೋಗ್ದೆಯಾ ಸುಮಾರು ದಿನ ಆಗೋಜು ಅಲ್ದೆಯಾ ಮೊನ್ನೆ ಅದೇ ಫೋನ್ ಮಾಡಿತ್ತು. ಇವತ್ತು ಬಪ್ಪಲೆ ಆದ್ರೆ ಬಾ ಹೇಳಿ ಕರದ್ದು.. ನೀ ಬೇಜಾರಾಗಡ ಮಹಾರಾಯ್ತಿ'' ಎಂದು ಸಮಾಧಾನಿಸಿದಳು ಭಾವನಾ.

ಅವಳ ನಿರಾಕರಣೆಯಿಂದ ಸುಮಳಿಗೆ ಅಷ್ಟೊಂದು ಬೇಜಾರಾಗಲಿಲ್ಲ. ಇದನ್ನು ಆಕೆ ಮೊದಲೇ ನಿರೀಕ್ಷಿಸಿದ್ದಳು. ಹೆಚ್ಚು ಒತ್ತಾಯಿಸದೇ ಅಲ್ಲಿಂದ ಹೊರಟಳು. ಇತ್ತ ಭಾವನಾ ಪ್ರಯಾಣದ ತಯಾರಿ ನಡೆಸಲು ಉತ್ಸಾಹದಿಂದ ಮನೆಯ ಕಡೆ ಲಗುಬಗನೆ ಹೆಜ್ಜೆ ಹಾಕಿದಳು.

ಒಳಬಂದ ಮಗಳ ಅರಳಿದ ಮುಖ ನೋಡಿಯೇ ಶಾಂತಾಳಿಗೆ ಗೊತ್ತಾಯಿತು, ಸುಮಳಿಂದ ಸುದ್ದಿ ಮುಟ್ಟಿದೆ ಎಂದು. "ನಂಗೊತ್ತಿತ್ತು ನೀನು ಸುಮನಿಂದ ಸುದ್ದಿ ಕೇಳ್ದ ಕೂಡಲೆಯಾ ಹಾರಿಬತ್ತೆ ಹೇಳಿ. ನಂಗೆ ಕರೆಯುದಾದ್ರೂ ತಪ್ಪು ಬಿಡು. ಬೇಗ ತಯಾರಾಗು, ಕುಮಟೆ ಬಸ್ಸು ಇವತ್ತು ಬತ್ತಿಲ್ಯಡ, ಹಾಂಗಾಗಿ ಹೊನ್ನಾವರಕ್ಕೆ ಹೋಗ್ಯೇಯಾ ಶಿರಸಿ ಬಸ್ಸ ಹಿಡಯುವು" ಎಂದು ಅವಸರಿಸಿದಳು. ಆದರೆ ಅಮ್ಮನ ಮಾತುಮುಗಿಯುವ ಮೊದಲೇ ಭಾವನಾ ತನ್ನ ಕೋಣೆಯನ್ನು ಸೇರಿ ಹೊರಡಲನುವಾಗಿದ್ದಳು.

ಸೂರ್ಯನು ಮೆಲ್ಲನೆ ಮೇಲೇರಿ ಬರುತ್ತಿದ್ದ. ಬೆಳಗ್ಗಿನ ತಂಪು ಗಾಳಿಗೆ ಕ್ರಮೇಣ ಶಾಖವೇರುತ್ತಿತ್ತು. ಹಿತವಾದ ಬೆಚ್ಚಗಿನ ಗಾಳಿ ಬಸ್ಸಿನ ಕಿಟಕಿಯಿಂದ ಭಾವನಾಳ ಮುಖವನ್ನು ಸೋಕುತಿತ್ತು. ಊರು ಸೇರಲು ಇನ್ನೂ ಸಾಕಷ್ಟು ಸಮಯವಿತ್ತು. ಆಕೆ ಮತ್ತೆ ತನ್ನ ಕಲ್ಪನಾ ಲೋಕದ ಚಿಪ್ಪಿನೊಳಗೆ ಸೇರಿದಳು. ಸಾತಜ್ಜಿಯೊಡನೆ ಕಳೆದ ಬಾಲ್ಯದ ದಿನಗಳು, ಅವರ ಮಾತು, ನಗು, ಒಡನಾಟ ಎಲ್ಲವೂ ಮನಸ್ಸನ್ನು ಮುತ್ತಿ ಭಾವನಾಳನ್ನು ಬೇರೆಯೇ ಲೋಕದೊಳಗೆ ಕೊಂಡೊಯ್ದುವು.

ಸಾತಜ್ಜಿಯ ಮೂಲ ಹೆಸರು ಸಾವಿತ್ರಿ. ಮನೆ, ಕುಮಟಾದಿಂದ ದೇವಿಮನೆ ಘಟ್ಟದ ರಸ್ತೆಯಲ್ಲಿ ಹೋದರೆ ಶಿರಸಿಗಿಂತ ಹಿಂದೆ ಬರುವ ಅಮ್ಮೇನಳ್ಳಿಯಿಂದ ಸುಮಾರು 11 ಕಿ.ಮೀ. ದೂರವಿರುವ ನೀಲಕುಂದ. ಸಾತಜ್ಜಿ ಭಾವನಾಳ ಖಾಸಾ ಅಜ್ಜಿ ಅಲ್ಲ. ಅವಳ ಅಮ್ಮನ ಚಿಕ್ಕಮ್ಮ. ಆದರೆ ಬಾಲ್ಯದಲ್ಲೇ ಆಕೆ ತನ್ನ ಖಾಸಾ ಅಜ್ಜಿಯನ್ನು ಕಳೆದುಕೊಂಡಿದ್ದ ಕಾರಣ ಅವರೇ ಆಕೆಗೆ ಪ್ರೀತಿಯ ಅಜ್ಜಿಯೆನಿಸಿದ್ದರು. ಸಾತಜ್ಜಿಗೂ ಈ ಮೊಮ್ಮಗಳೆಂದರೆ ಬಲು ಅಚ್ಚು-ಮೆಚ್ಚು. ಸಣ್ಣದಿರುವಾಗಿನಿಂದಲೂ ರಜೆ ಬಿದ್ದರೆ ಸಾಕು, ಭಾವನಾ ನೀಲಕುಂದಕ್ಕೆ ಹಾರಿ ಬರುತ್ತಿದ್ದಳು. ಒಂದು ರೀತಿಯಲ್ಲಿ ಸಾತಜ್ಜಿ ಅವಳ ಪಾಲಿಗೆ ಎರಡನೆಯ ತಾಯಿಯೇ ಆಗಿದ್ದರು ಎಂದರೂ ಹೆಚ್ಚಲ್ಲ.

ಸಾತಜ್ಜಿಯ ಮಾತು, ನಗು, ತಯಾರಿಸುತ್ತಿದ್ದ ತಿಂಡಿ ತಿನಸುಗಳು ಎಲ್ಲವೂ ಭಾವನಾಳಿಗೆ ಬಲು ಪ್ರಿಯವಾಗಿದ್ದವು. ಅವರು ತಯಾರಿಸುತ್ತಿದ್ದ ಅಮಟೆಯ ಕಾಯಿರಸಕ್ಕಾಗಿಯೇ ತೋಟದಿಂದ ಕಾಯಿಗಳನ್ನು ಆರಿಸಿ ತರುತ್ತಿದ್ದಳು. ಸಾತಜ್ಜಿ ಸಣ್ಣ ವಯಸ್ಸಿನಲ್ಲೇ ವಿಧವೆಯಾದರೂ ಕುಗ್ಗಲಿಲ್ಲ. ಧೈರ್ಯಗೆಡದೆ ಛಲದಿಂದ ತಮ್ಮ ಮೂವರು ಮಕ್ಕಳನ್ನೂ ಓದಿಸಿದರು. ಎರಡು ಗಂಡುಮಕ್ಕಳಾದ ಗೋಪಲ ಮತ್ತು ಸತೀಶರು ಬೆಂಗಳೂರಿನಲ್ಲಿ ಉನ್ನತ ಹುದ್ದೆಯಲ್ಲಿದ್ದರೆ, ಒಬ್ಬಳೇ ಮಗಳಾದ ಉಮಾಳನ್ನು ನಾಲ್ಕು ವರುಷದ ಹಿಂದೆ ಮದುವೆಮಾಡಿದ್ದರು. ಈಗ ಸಾತಜ್ಜಿಗೆ ಅರವತ್ತಾರರ ವೃದ್ಧಾಪ್ಯ

ಆವರಿಸಿದೆ. ಆದರೂ ಅದೇ ಹಿಂದಿನ ಸ್ಥೈರ್ಯ, ಧೈರ್ಯ, ಸಹನೆ, ಪ್ರಶಾಂತತೆ ಹಾಗೇ ಅವರಲ್ಲಿ ಉಳಿದುಕೊಂಡಿದೆ. ಮಕ್ಕಳು ಎಷ್ಟು ಒತ್ತಾಯಿಸಿದ್ದರೂ ತನ್ನ ಮೂಲ ನೆಲೆಯನ್ನು ಬಿಟ್ಟು ಹೋಗಿರಲಿಲ್ಲ. ಭಾವನಾಳಿಗೆ ಅವರ ಪ್ರತಿಯೊಂದು ರೀತಿ, ನೀತಿಯೂ ಪ್ರಿಯವಾಗಿದ್ದವು. ಹಾಗಾಗಿಯೇ ಈ ಅಜ್ಜಿಯೆಂದರೆ ಆಕೆಗೆ ತುಂಬಾ ಅಭಿಮಾನ ಕೂಡಾ. ಚಿಕ್ಕಂದಿನಿಂದಲೇ ಸಾತಜ್ಜಿಯ ವ್ಯಕ್ತಿತ್ವ ಅವಳ ಮೇಲೆ ಗಾಢವಾದ ಪರಿಣಾಮಗಳನ್ನು ಬೀರಿದ್ದವು. ಅವರೇ ಆಕೆಗೆ ಆದರ್ಶಪ್ರಾಯವೆನಿಸಿದ್ದರು. ಎಲ್ಲಕ್ಕಿಂತಲೂ ಹೆಚ್ಚಾಗಿ ಅವರ ಮೊಗದ ಕಾಂತಿಗೆ ಕಾರಣೀಭೂತವಾಗಿದ್ದ ಅವರ 'ಮೂಗುತಿ' ಎಂದರೆ ಅವಳಿಗೆ ಎಂಥದೋ ಆಕರ್ಷಣೆ, ಸೆಳೆತ. ಆ ಮೂಗುತಿಗೂ ಸಾತಜ್ಜಿಗೂ ನಡುವೆ ಬಿಡಿಸಲಾಗದ ನಂಟಿತ್ತು. ಅದರ ಮೇಲೆ ಅವರಿಗೆ ತುಂಬಾ ಅಭಿಮಾನ ಅಕ್ಕರೆಯಿತ್ತು. ಬಡತನದಲ್ಲಿದ್ದ ಸಾತಜ್ಜಿಯ ತವರು ಮನೆಯವರು ಧಾರೆಯೆರೆದು ಕೊಡುವಾಗ ಕೊಟ್ಟ ಏಕೈಕ ಆಭರಣ ಎಂದರೇ ಈ ಮೂಗುತಿಯೊಂದೇ. ಅವರ ತಾಯಿಯಿಂದ ಬಂದ ಅಪೂರ್ವ ಬಳುವಳಿಯಾಗಿತ್ತು ಅದು. ಹಾಗಾಗಿಯೇ ಅವರು ಅದನ್ನೆಂದೂ ತನ್ನಿಂದ ಬೇರ್ಪಡಿಸಿರಲಿಲ್ಲ. ಇದೆಲ್ಲಾ ಭಾವನಳಿಗೂ ತಿಳಿದಿತ್ತು. ಹಾಗಾಗಿಯೇ ಅವಳು ಆ ಮೂಗುತಿಯನ್ನು ಕೇವಲ ಒಂದು ಒಡವೆಯನ್ನಾಗಿ ಕಂಡಿರಲಿಲ್ಲ. ತನ್ನಜ್ಜಿಯ ಆತ್ಮಬಲ, ವಿಶ್ವಾಸ, ಛಲ - ಎಲ್ಲವೂ ಅದರಲ್ಲಿ ಅಡಕವಾಗಿರುವಂತೆ ಅವಳಿಗೆ ಬಾಸವಾಗುತ್ತಿತ್ತು. ಸಾತಜ್ಜಿಯ ಪತಿ ಸುಬ್ಬರಾಯರೂ ಪತ್ನಿಯ ಭಾವನೆಗಳನ್ನು ಗೌರವಸುತ್ತಿದ್ದರು. ಹಾಗಾಗಿಯೇ ತಮ್ಮ ಅಂತಿಮ ಕಾಲದಲ್ಲಿ ತವರುಮನೆಯ ಉಡುಗೊರೆಯಾದ ಮೂಗುತಿಯನ್ನು ಕೊನೆಯವರೆಗೂ ಧರಿಸಿರುವಂತೆ ಸಾತಜ್ಜಿಯ ಬಳಿ ಕೇಳಿಕೊಂಡಿದ್ದರು. ಹಾಗಾಗಿಯೇ ಇಂದೂ ಅದು ಅವರ ದೇಹದ ಒಂದು ಅವಿಭಾಜ್ಯ ಅಂಗವೆನಿಸಿತ್ತು.

ಮೂಗುತಿಯ ನೆನಪಾದೊಡನೆಯೇ ಭಾವನಾಳ ಮುಖದಲ್ಲಿ ಅಪ್ರಯತ್ನವಾಗಿ ನಗು ಮೂಡಿತು. ಅದು ತುಂಬಾ ಸುಂದರವಾಗಿತ್ತು. ಹಳೆಯ ಕಾಲದ ಮಾಟದಲ್ಲಿ ಕೆತ್ತಲ್ಪಟ್ಟಿತ್ತು. ಕುಂಕುಮ ಬಣ್ಣದ ಅಂಡಾಕಾರದ ಹರಳಿನ ಸುತ್ತಲೂ ಚಿನ್ನದ ಚೌಕಟ್ಟು ಹಾಕಲ್ಪಟ್ಟಿತ್ತು. ಅದರ ಮೇಲ್ಗಡೆ ಹೊಳೆಯುವ ಪುಟ್ಟ ಬಿಳಿ ಹರಳಿನ ಚುಕ್ಕಿಯಿದ್ದರೆ, ಹರಳಿನ ಕೆಳಗೆ ಓಲಾಡುವ ಪುಟ್ಟ ಮುತ್ತು, ಅವರು ನಗುವಾಗ, ಮಾತಾಡುವಾಗ ಆ ಮುತ್ತೂ ಅತ್ತಿತ್ತ ಹೊರಳಿ ತಾನೂ ನಗುತ್ತಿತ್ತು. ಸಣ್ಣವಳಿದ್ದಾಗ ಭಾವನಾ ಅವರ ಮಡಿಲಿನಲ್ಲಿ ಕುಳಿತು ಆ ಮೂಗುತಿಯೊಂದಿ ಆಟವಾಡಿತ್ತಿದ್ದಳು. ನೀಳಮೂಗಿನ ಮೇಲೆ ಎಸೆಯುವ ಅದರ ಸೌಂದರ್ಯ ಸಾತಜ್ಜಿಯ ಆಂತರಿಕ ಸೌಂದರ್ಯಕ್ಕೂ ಹಿಡಿವ ಕನ್ನಡಿಯಾಗಿತ್ತು.

ಒಮ್ಮೆ ಭಾವನಾ ತಮಾಷೆಗೆ ಸಾತಜ್ಜಿಯ ಬಳಿ ಆ ಮೂಗುತಿಯನ್ನು ಕೇಳಿದ್ದಳು "ಸಾತಜ್ಜಿ ಆನು ಮೊದ್ಲೇ ಹೇಳಿಡ್ತಿದ್ದಿ, ಈ ಮೂಗ್ತಿ ನಂಗೇಯಾ ಮತ್ತೇ!" ಎಂದು ಲಘುವಾಗಿ ಎಚ್ಚರಿಸಿದ್ದಳು. ಆದರೆ ಅವರು ಮಾತ್ರ ಗಂಭೀರವಾಗಿ "ತಂಗಿ ನೀ ಕೇಳದು ಹೆಚ್ಚೋ ಆನು ಕೊಡದು ಹೆಚ್ಚೋ?! ಆದ್ರೆ ಇದು ರಾಶಿ ಹಳೇಕಾಲದ್ದು. ಯನ್ನ ಆಯಿದು. ನಿಂಗವು ಈಗಿನ ಕಾಲ್ದವು, ಹಳೆಕಾಲ್ದ ಮಾಟದ ಚಿನ್ನನೆಲ್ಲವ ಹಾಕ್ಯತ್ರ?!! ಬೇಕಾದ್ರೆ ನಿಂಗೆ ಬೇರೆನೇ ಮಾಡ್ಸಿ ಕೊಡ್ತಿ ಬಿಡು" ಎಂದುಬಿಟ್ಟರು. ಅವರ ಮಾತಿನಲ್ಲಡಗಿದ್ದ ಆಳ ಭಾವನಾಳನ್ನು ತಾಗಿತು. "ಅಯ್ಯೋ ಅಜ್ಜಿ ನಂಗೇನೂ ಬೇಡ ಮಾಹರಾಯ್ತಿ ಆನು ಕುಶಾಲಿಗೆ ಕೇಳಿದ್ದು. ಆದ್ರೂವಾ ನಾ ಒಂದು ಕೇಳ್ತಿ; ಚಿನ್ನ ಇಪ್ದು ಮೈಮೇಲೆ ಹಾಕ್ಯಂಡು ಬರೀ ಮೆರೆಸಲಾ? ಒಬ್ರ ಮೈಮೇಲಿದ್ದ ಒಡವೆ ಆ ವ್ಯಕ್ತಿಯ ಎಷ್ಟೆಲ್ಲಾ ನೆನಪನ್ನ, ಸುಖ-ದುಃಖಗಳನ್ನ ತಾನೂ ಕಂಡಿರ್ತು, ತಮಗೆ ಪ್ರಿಯವಾದ ವ್ಯಕ್ತಿಯ ನೆನಪಿಗೂ ನಾವು ಬಂಗಾರಾವಾ ಹತ್ರ ಇಟ್ಕಂಡಿರ್ಲಕ್ಕು ಅಲ್ದಾ? ಸುಮ್ನೆ ಅದ್ರನ ಅಳ್ಸಿ ಬೇರೆದ ಮಾಡ್ಸದು ಅಂದ್ರೆ ಹಳೆ ನೆನಪುಗಳನ್ನೆಲ್ಲಾ ಮರೆತ್ಹಾಂಗೇಯಾ. ಬೇಜಾರಾಗಡ, ಹಾಂಗ ಸುಮ್ನೇ ಕೇಳಿದ್ದು ಮತ್ತೆ." ಎಂದು ಮಾತು ಮರೆಸಿದ್ದಳು.

ಹಿಂದಿನ ಸವಿನೆನಪುಗಳಲ್ಲಿ ತೇಲಾಡುತ್ತಿದ್ದ ಭಾವನಾಳಿಗೆ ಬಸ್ಸು ಊರನ್ನು ಸಮೀಪಿಸಿದ್ದು ತಿಳಿಯಲೇ ಇಲ್ಲ. "ಏ ಭಾವನಾ ಎಳೇ.. ಈಗೆಂಥನಿದ್ದ್ಯೇ?! ಮನೆಬಂತು ನಡಿ" ಎಂದು ಶಾಂತಾ ಎಬ್ಬಿಸಿದಳು. ಆಗ ಕನಸಿನೂದ ತಟ್ಟನೇ ವಾಸ್ತವಕ್ಕೆ ಬಂದಳು ಭಾವನಾ. ಲಗುಬಗನೆ ಬಸ್ಸನಿಂದಿಳಿದು ತಾಯಿಯನ್ನು ಸ್ವಲ್ಪ ಹಿಂದಿಕ್ಕಿಯೇ ಮುನ್ನೆಡಯತೊಡಗಿದಳು. ನಿಲ್ದಾಣದಿಂದ ಕಾಲುದಾರಿಯಲ್ಲಿ ನಡೆದರೆ ಸಾತಜ್ಜಿಯ ಮನೆ ಕೇವಲ 11 ನಿಮಿಷದ ಹಾದಿ ಅಷ್ಟೇ. ತನ್ನಜ್ಜಿಯ ಮೊಗವನ್ನು ಕಾಣುವ ಆತುರ, ಕಾತರ, ಉತ್ಸಾಹ ಮುಂತಾದ ಭಾವನೆಗಳ ಮೂಟೆ ಹೊತ್ತು ಆಕೆ ಮನೆಯ ದಣಪೆಯಬಳಿ ಬಂದಳು. ಆದರೆ ಅಲ್ಲಿ ಕಂಡು ಬಂದ ದೃಶ್ಯದಿಂದ ಅವಳ ಕಾಲ್ಗಳು ನಿಂತಲ್ಲೇ ಸ್ತಂಭಿತವಾದವು. ಮನೆಯಂಗಳವೆಲ್ಲಾ ನೆರೆಹೊರೆಯವರಿಂದ, ನೆಂಟರಿಷ್ಟರಿಂದ ಊರವರಿಂದ ತುಂಬಿ ಹೋಗಿತ್ತು. ಎಲ್ಲರ ಮುಖದಲ್ಲೂ ವಿಷಾದದ ಛಾಯೆ. ಕೆಲವರ ಕಣ್ಣಂಚು ಒದ್ದೆಯಾಗಿದ್ದರೆ, ಇನ್ನು ಕೆಲವರ ಕಣ್ಣುಗಳು ಕೆಂಪಡರಿ ಊದಿಕೊಂಡಿದ್ದವು. ಭಾವನಾಳ ಹೃದಯ ಜೋರಾಗಿ ಹೊಡೆದು ಕೊಳ್ಳತೊಡಗಿತು. ಮನಸ್ಸು ಅಪಶಕುನದ ಭಯದಿಂದ ತತ್ತರಿಸಿತು. ಅಷ್ಟರಲ್ಲೇ ಒಳಗಿನಿಂದ ಸಾತಜ್ಜಿಯ ಮೂವರು ಮಕ್ಕಳೂ ಹೊರಬಂದರು. ಗಂಡು ಮಕ್ಕಳು ತಲೆ ತಗ್ಗಿಸಿ ಸ್ನಾನಕ್ಕೆ ಹೋದರೆ, ಮಗಳು ಊಮಾ ಭಾವನಾಳ ತಾಯಿಯನ್ನು ಕಂಡು ಓಡಿ ಬಂದಳು. ಶಾಂತಾಳ ತೆಕ್ಕೆಗೆ ಬಿದ್ದು

ಗೋಳಾಡತೊಡಗಿದಳು. "ನೋಡೇ ಶಾಂತಕ್ಕ ಎಂಥ ಕೆಲ್ಸ ಆಗ್ಹೋತು?!! ದೇವ್ರು ಒಮ್ಮೆಲೇ ಸಹಿಸ್ಕಳಲೇ ಆಗದಂಥ ದುಃಖ ಕೊಟ್ಬುಟ! ಆಯಿ ಮೊನ್ನೆ ಫೋನ್ ಮಾಡಿ ನಂಗಕೆಲ್ಲವಾ ನಿನ್ನೆನೇ ಬಪ್ಲಕ್ಕೆ ಹೇಳಿತ್ತು. ಈಗೊಂದು ಮೂರುತಾಸಿನ ಹಿಂದೆ ಪೂಜೆಗೆ ಹೇಳಿ ದೇವರ ಮುಂದೆ ಕೂತಿದ್ದಾಗ ಒಮ್ಮೆಲೇ ಎದೆ ನೋವು ಹೇಳಿ ಒದ್ದಾಡಲೆ ಹಣ್ಕಚು. ನಂಗವು ಮೆಲ್ಲನೆ ಎತ್ತಿ ಹಸೆಮೇಲೆ ಮಲಗ್ಸಿ ಎರಡು ಗುಟುಕು ನೀರ ಹಾಕಿದ್ವೋ ಇಲ್ಯೋ ನಮ್ಮನ್ನೆಲ್ಲಾ ಬಿಟ್ಟಕ್ಕೇ ಹೋತು ಆಯಿ. ಹೇಂಗ್ ಈ ದುಃಖ ಸಹಿಸ್ಕಳವೇ ಹೇಳು?" ಎಂದು ಮುಂದೆ ಮಾತನಾಡಲಾಗದೇ ಉಮಾ ಅಲ್ಲೇ ಕುಸಿದು ಬಿಕ್ಕತೊಡಗಿದಳು. ಅಮ್ಮ ಅವಳಿಗೆ ಹೇಳುತ್ತಿದ್ದ ಸಮಾಧಾನವಾಗಲೀ ಜನರ ಸಾಂತ್ವನದ ನುಡಿಗಳಾಗಲೀ ಭಾವನಾಳ ಕಿವಿಗಳನ್ನು ತಲುಪಲಿಲ್ಲ. ತನ್ನ ಪ್ರೀತಿಯ ಅಜ್ಜಿ, ಒಲವಿನ ಸಾತಜ್ಜಿ ಇನ್ನು ನನ್ನೊಂದಿಗಿಲ್ಲ, ಅವರ ಪ್ರೇಮದ ಕೂಗು ಇನ್ನು ತಾನು ಕೇಳಲಾಗುವುದಿಲ್ಲ, ಎಂಬ ಘೋರ ಸತ್ಯವನ್ನು ಆಕೆಗೆ ಅರಗಿಸಿಕೊಳ್ಳಲಾಗಲಿಲ್ಲ. ಮೆಲ್ಲನೆ ಕಾಲೆಳೆಯುತ್ತಾ ಸೋತ ಹೆಜ್ಜೆಗಳೊಡನೆ ಜಗುಲಿಯ ಒಳ ಬಂದಳು. ದರ್ಭಾಸನದ ಮೇಲೆ ಮಲಗಿಸಿದ್ದ ಸಾತಜ್ಜಿಯ ದೇಹವನ್ನು ಕಂಡು ಉಳಿದ ಅಲ್ಪ ಸ್ವಲ್ಪ ಶಕ್ತಿಯೂ ಸೋರಿದಂತಾಗಿ ಅಲ್ಲೇ ಕುಸಿದಳು.

ಕೆಲವೇ ತಾಸುಗಳ ಹಿಂದಿನವರೆಗೂ ಉಸಿರಾಡುತ್ತಿದ್ದ ದೇಹ ಈಗ ನಿರ್ವಿಕಾರವಾಗಿ ಚಿರನಿದ್ರೆಯೊಳಗೆ ಲೀನವಾಗಿತ್ತು. ಅವರ ಮೊಗದಲ್ಲಿ ನೋವಿನ ಲವಲೇಶವೂ ಇರಲಿಲ್ಲ. ಅದೇ ಶುಭ್ರವಾಗಿ ಬೆಳಗುವ ಕಾಂತಿಯುತ ಮುಖ, ತುಂಟಿಯಂಚಿನಲ್ಲಿ ಮಿನುಗುತ್ತಿರುವ ಮಾಸದ ಮಂದಹಾಸವನ್ನು ಕಂಡು ಭಾವನಾಳಿಗೆ ಸಾತಜ್ಜಿ ಇನ್ನೂ ಬದುಕಿರುವರೇನೋ ಎಂಬಂತೆ ಭಾಸವಾಯಿತು. ಆದರೆ ಜೀವನದಲ್ಲಿ ಸಾಕಷ್ಟು ಕಹಿ-ಸಿಹಿಗಳನ್ನುಂಡು ನಿರಮ್ಮಳವಾಗಿ ಪರಮಾತ್ಮನೆಡೆಗೆ ಯಾನ ಬೆಳೆಸಿತ್ತು ಆ ಪವಿತ್ರ ಆತ್ಮ.

ಸಮಯಮೀರುತ್ತಿರಲು ಭಟ್ಟರು ಮುಂದಿನ ಕಾರ್ಯಗಳಿಗೆ ಅವಸರಿಸಿದರು. ಸಾತಜ್ಜಿಯ ಒಂದೊಂದೇ ಆಬರಣಗಳನ್ನು ಕಳಚತೊಡಗಿದರು. ಕೊನೇಗೆ ಅವರ ಹಿರಿಯ ಮಗ ಮೂಗುತಿಯನ್ನು ಕಳಚತೊಡಗಿದ. ಆಗ ಮಾತ್ರ ಭಾವನಾಳ ದುಃಖದ ಎಲ್ಲೆ ಮೇರೆಮೀರಿತು. ತುಂಬಿದ ಅಣೆಕಟ್ಟು ಒಡೆದಾಗ ನೀರು ಭೋರ್ಗರೆಯುತ್ತ ಮುನ್ನುಗ್ಗುವಂತೆ ಕಣ್ಣೀರು ಎದೆಯಾಳದಿಂದ ನುಗ್ಗಿ ಪ್ರವಾಹದಂತೆ ಹರಿಯತೊಡಗಿತು. ಪಕ್ಕದಲ್ಲೇ ಕುಳಿತಿದ್ದ ಅಮ್ಮನ ಮಡಿಲೊಳಗೆ ಮುಖ ಹುದುಗಿಸಿ ಗೋಳಾಡಿದಳು ಭಾವನಾ. ಮಗಳ ಮತ್ತು ಚಿಕ್ಕಮ್ಮನ ಅನ್ಯೋನ್ಯತೆಯನ್ನು ಚೆನ್ನಾಗಿ ಅರಿತಿದ್ದ ಶಾಂತಾ ಏನೊಂದೂ ಮಾತಾಡದೆ ಮೆಲ್ಲನೆ ತಲೆನೇವರಿಸತೊಡಗಿದಳು. ಅಲ್ಲಿ ಮೌನಗಳೇ ಮಾತುಗಳಾಗಿದ್ದವು.

ಹನ್ನೆರಡನೆಯದಿನದವರೆಗೂ ಭಾವನಾ ಮನೆಬಿಟ್ಟು ಕದಲಲೇ ಇಲ್ಲ. ಆವರೆಗಿ
ಸಾತಜ್ಜಿಯ ಕಾರ್ಯಗಳಲ್ಲೆಲ್ಲಾ ಯಾಂತ್ರಿಕವಾಗಿ ಭಾಗವಹಿಸಿದ್ದಳು. ಅವಳ ಅವ
ಮಾತ್ರ ಈ ನಡುವೆ ಒಮ್ಮೆ ಕಡತೋಕಕ್ಕೆ ಹೋಗಿಬಂದಳು. ಹದಿಮೂರನೆಯದಿನ
ಕಾರ್ಯವೂ ಸಾಂಗವಾಗಿ ನೆರವೇರಿತು. ಮರುದಿನ ಶಾಂತಾ ಮಗಳನ್ನು ಮನೆ
ಹೊರಡಿಸಿದಳು. ಭಾರವಾದ ಮನದೊಡನೆ, ಅಮ್ಮನ ಹಿಂದೆ ಹೆಜ್ಜೆಹಾಕಿದಳು. ಮನೆ
ಮೂಲೆ ಮೂಲೆಯೂ ಅವಳಿಗೆ ಸಾತಜ್ಜಿಯ ನೆನಪುಗಳನ್ನೇ ತರುತ್ತಿದ್ದವು. ನೋವಿನಿಂ
ಹೃದಯ ನರಳಿತು. ಅಷ್ಟರಲ್ಲಿ ಸಾತಜ್ಜಿಯ ಮಗಳಾದ ಉಮಾ ಭಾವನಾಳ ಬ
ಬಂದು - "ಭಾವನಾ ಸ್ವಲ್ಪ ದೇವ್ರ ಕೋಣೆಗೆ ಬಾ" ಎಂದು ಅವಳನ್ನು ಒಳ ಕರೆತಂದಳ
ದೇವರ ಪೀಠದ ಪಕ್ಕದಲ್ಲೇ ಇಟ್ಟಿದ್ದ ಸಾತಜ್ಜಿಯ ದೊಡ್ಡ ಫೋಟೋ ಕಂಡು ಅವ
ಕಣ್ಣುಗಳು ಮತ್ತೆ ತುಂಬಿದ್ದೆವು. ಮಣೆಹಾಕಿ ಕುಳ್ಳಿರಿಸಿದ ಉಮಾ ಭಾವನಾಳ ಕೈಯೊಳ
ಒಂದು ಪುಟ್ಟ ಕರಡಿಗೆಯನ್ನು ಇಟ್ಟಳು. ಚಕಿತಳಾದ ಆಕೆ ತಲೆಯಿತ್ತಿ ಉಮಕ್ಕಳನ
ನೋಡಿದರೆ, ಅಲ್ಲೂ ಕಣ್ಣೀರು ಹರಿಯುತ್ತಿತ್ತು. "ಭಾವನಾ ಆಯಿ ಯನ್ಹತ್ರ ಆಗಾ
ಹೇಳ್ತಿತ್ತು... 'ಉಮಾ ಭಾವನಾ ಅಂದ್ರೆ ಯಂಗೆ ಒಂಥರಾ ಹುಚ್ಚು ಪ್ರೀತಿ ನೋಡ
ನಂಗೊತ್ತಿದ್ದು ಅದೂ ನನ್ನ ಮೇಲೆ ಬೆಟ್ಟದಷ್ಟು ಅಭಿಮಾನ ಇಟ್ಕಂಜು ಹೇಳಿ. ಹಾಂಗಾ
ಯನ್ನ ಮೂಗ್ತಿ ನಮ್ಮನೆ ಭಾವನಂಗೆಯಾ, ಅದು ನನ್ನ ನೆನಪಿಗೆ ಇಟ್ಕತ್ತಡ, ಅನ
ಮರತ್ರೂ ನೀ ಮರ್‍ಯಡಾ ಮತ್ತೆ!, ಜೀವ ನಮ್ಮ ಕೇಳಿ ಬತ್ತೂ ಇಲ್ಲೆ, ಹೇಳಿ ಹೋಗು
ಇಲ್ಲೆ ನೋಡು. ಅದ್ಕೆಯಾ ಮೊದ್ಲೇ ಹೇಳಿಟ್ಟೆ.' ಇದೇ ಮಾತನ್ನ ಆಯಿ ಅದು ಹೋ
ಹಿಂದಿನ ದಿನವೂ ಹೇಳಿತ್ತು. ಅದ್ಕೆ ಬಹುಶಃ ತಾ ಹೋಗ್ತಿ ಹೇಳಿ ಮೊದ್ಲೇ ಗೊತ್ತಾಗಿತ
ಹೇಳಿ ಕಾಣ್ತು. ಭಾವನಾ ನಂಗೂ ವಿಶ್ವಾಸವಿದ್ದು ಇದು ನಿನ್ಹತ್ರನೇ ಸರಿಯಾಗಿ ಇರ
ಹೇಳಿ. ನಿನ್ನ ಸಾತಜ್ಜಿ ಪ್ರೀತಿಯ ಕಾಣ್ಕೆಯ ನಿಂಗೇ ಒಪ್ಸಿದ್ಯ. ಯನ್ನ ಕರ್ತವ್ಯ ಇಲ್ಲಿ
ಮುಗತ್ತು." ಎಂದು ಹೇಳಿ ಮೆಲ್ಲನೆ ಆಕೆಯ ಕೈಗಳನ್ನು ಒತ್ತಿ ಹೊರನಡೆದಳು ಉಮಾ
ನಡುಗುವ ಕೈಗಳಿಂದ, ಧಾರಾಕಾರವಾಗಿ ಹರಿಯುತ್ತಿರುವ ಕಣ್ಣೀರಿನೊಂದಿಗೆ, ನೂರಾ
ಭಾವನೆಗಳಿಂದ ಕೂಡಿದ 'ಭಾವನಾ' ಮೆಲ್ಲನೆ ಆ ಪುಟ್ಟ ಪೆಟ್ಟಿಗೆಯನ್ನು ತೆರೆದಳ
ಅಜ್ಜಿ –ಮೊಮ್ಮಗಳ ಪರಸ್ಪರ ಅಭಿಮಾನದ ಪ್ರತೀಕವೆಂಬಂತೆ ಮೆತ್ತನೆಯ ಹತ್ತಿಯೊಳ
ಹೊಸ ಹೊಳಪನ್ನು ಪಡೆದಂತೆ ಮಿನುಗುತ್ತಿತ್ತು ಆ ಮೂಗುತಿ ! ದೂರಹೋದ ಸಾತಜ್ಜಿಯ
ತನ್ನಬಳಿ ಮರಳಿಬಂದ ಅನುಭವವಾಯಿತು ಅವಳಿಗೆ. ಭಾವನಾಳ ಕಣ್ಣಿಂದ ಬಿ
ಹನಿಮುತ್ತೊಂದು ಮೂಗುತಿಯ ಮುತ್ತಿನೊಂದಿಗೆ ಬೆರೆಯಿತು. ಅವಳಮುಖದಲ್
ಅಪೂರ್ವ ತೇಜಸ್ಸು ಮೂಡಿ, ಮಂದಹಾಸ ಮಿನುಗಿತು. ಆ ನಗು ಫೋಟೋದೊಳಗಿ
ಸಾತಜ್ಜಿಯವರೆಗೂ ಹಬ್ಬಿ ಅಲ್ಲೇ ಸ್ಥಿರಗೊಂಡಿತು.

_____***_____

ಕೊಲೆಯ ಸುತ್ತ......

ಬೆಳಗ್ಗಿನಿಂದ ಒತ್ತಿ ಬರುತ್ತಿದ್ದ ತಲೆನೋವಿನಿಂದ ತುಂಬಾ ಆಯಾಸಗೊಂಡಿದ್ದಳು ಮೀರಾ. ಮಧ್ಯಾಹ್ನದ ಊಟದ ಕೆಲಸವನ್ನು ಮುಗಿಸಿ, ಪಾತ್ರೆಯನ್ನೂ ತೊಳೆಯದೇ ಹಾಗೆಯೇ ಕೊಂಚ ಮಲಗಲು ತಯಾರಿ ನಡೆಸಿದಳು. ಅಷ್ಟರಲ್ಲಿಯೇ ಕೇಳಿ ಬಂತು ಕರೆಗಂಟೆಯ ಸದ್ದು. ಈ ಹೊತ್ತಿನಲ್ಲಿ ಯಾರಿರಬಹುದೆಂದು ಸೋಜಿಗಗೊಂಡಳು. ಪತಿ ರಾಜೀವ ಬರಲು ಇನ್ನೂ ಬಹಳ ಸಮಯವಿತ್ತು. ಮಧ್ಯಾಹ್ನದ ಸವಿನಿದ್ದೆಗೆ ಭಂಗ ಬಂತೆಂದು ತುಸು ಅಸಮಾಧಾನವೂ ಮೂಡಿತು. ಮುಖ ಗಂಟಿಕ್ಕಿಯೇ ಬಾಗಿಲು ತೆರೆದಳು. ಬಂದಿದ್ದು ಪಕ್ಕದ ಮನೆಯ ವಾಚಾಳಿ ಪಂಕಜಮ್ಮ. ಅವಳ ಮುಖವನ್ನು ನೋಡಿದ ಮೇಲಂತೂ ಮೀರಾಳ ಬೇಸರ ಇಮ್ಮಡಿಯಾಯಿತು. ಅವರಿವರ ಸುದ್ದಿಯನ್ನೆಲ್ಲಾ ಹೇಳಿ ತನ್ನ ತಲೆ ಕೊರೆಯುವಳಿನ್ನು ಎಂದು ಬೈದುಕೊಂಡಳು. ಆದರೂ ಶಿಷ್ಟಾಚಾರಕ್ಕೆ ಬಾರದ ನಗು ತಂದುಕೊಂಡು ಪಂಕಜಳನ್ನು ಸ್ವಾಗತಿಸಿ ಕೂರಿಸಿದಳು.

ಮೀರಾಳ ಮುಖ ಭಾವದ ಕಡೆ ಲಕ್ಷ್ಯ ಕೊಡದ ಪಂಕಜ ದೊಡ್ಡದಾಗಿ ನಗುತ್ತಾ ಮಾತಿಗೆ ತೊಡಗಿದಳು. "ಮೀರಾ ನಿನ್ನ ಮನೆಯಕೆಲಸಗಳೆಲ್ಲವೂ ಮುಗಿಯಿತೆಂದು ಕಾಣಿಸುತ್ತದೆ... ಈಗ ನಿನಗೆ ಪುರುಸೊತ್ತು ಇರುತ್ತದೆಯೆಂದೆಣಿಸಿ ಬಂದೆ. ಅದೂ ಅಲ್ಲದೆ ಹೇಗೂ ನಿನ್ನವರು ಬರಲು ಇನ್ನೂ ಸಮಯ ಉಂಟಲ್ಲ?" ಎಂದು ಪಟಪಟನೆ ಮಾತನಾಡಿದಳು. ಪಂಕಜಳ ದಕ್ಷಿಣ ಕನ್ನಡ ಬಾಷೆಯನ್ನು ಕೇಳಿ ಮೀರಾಳಿಗೆ ನಗು ಬಂತು. ಅವಳಿಗೆ ಈಕೆಯ ಮಾತುಗಳನ್ನು ಕೇಳುವುದೇ ಒಂದು ಮೋಜು. ಆದರೂ ಮಧ್ಯಾಹ್ನದ ನಿದ್ದೆ ಹಾಳಾದ ಬೇಸರ ಮಾತ್ರ ಸಂಪೂರ್ಣವಾಗಿ ಹೋಗಲಿಲ್ಲ. ಹಾಗಾಗಿಯೇ ತುಸು ಬಿಗುವಿನಿಂದಲೇ ಉತ್ತರಿಸಿದಳು – "ಮನೆಕೆಲಸವೆಲ್ಲಾ ಇದ್ದಿದ್ದೇ ಬಿಡಿ. ಬೆಳಗ್ಗಿನಿಂದ ತಲೆನೋಯುತ್ತಿತ್ತು, ಹಾಗಾಗಿ ಎಲ್ಲವನ್ನೂ ಬಿಟ್ಟು ಮಲಗಲು ಹೊರಟಿದ್ದೆ. ಹೇಳಿ ಏನು ವಿಷಯ?!" ಎಂದು ನೇರವಾಗಿ ಪ್ರಶ್ನಿಸಿದಳು.

ಮೀರಾಳ ಮಾತಿನೊಳಗಿದ್ದ ಬೇಸರವಾಗಲೀ, ಆಕೆಯ ಗಂಭೀರ ಮುಖವಾಗಲೀ ಪಂಕಜ ಗಮನಿಸಹೋಗಲಿಲ್ಲ. ತನ್ನಲಿದ್ದ ವಿಷಯವನ್ನು ಆದಷ್ಟು ಬೇಗ ಮೀರಾಳ ತಲೆಯಲ್ಲಿ ಹಾಕುವ ಕಾತುರತೆ ಮಾತ್ರ ಆಕೆಯಲ್ಲಿ ಕಂಡು ಬರುತ್ತಿತ್ತು. "ಅಯ್ಯೋ ಏನು ಹೇಳುವುದು ಮಹರಾಯ್ತಿ?! ವಿಷಯವೇ ಹಾಗಿದೆ. ಹಾಗಾಗಿಯೇ ನಾನು ನನಗೆ

ವಿಷಯ ತಿಳಿದ ಕೂಡಲೇ ಓಡಿ ಬಂದಿದ್ದು. ನನಗಂತೂ ಕೇಳಿ ಮಂಡೆಯೆಲ್ಲಾ
ಬೆಚ್ಚಗಾಯಿತು". ಎಂದು ಪೀಠಿಕೆ ಹಾಕಿದಳು.

ಈಗ ಮೀರಾ ತುಸು ಕುತೂಹಲಗೊಡಳು. ಇದನ್ನು ಗಮನಿಸಿದ ಪಂಕಜ
ಉತ್ಸಾಹದಿಂದ ಮಾತನ್ನು ಮುಂದುವರಿಸಿದಳು. "ಮೀರಾ ನೀನು ಪೇಪರಿನಲ್ಲಿ ಬಂದ
ಸುದ್ದಿಯನ್ನು ಓದಿರಬೇಕಲ್ಲಾ?.. ಅದೇ ಹಾಸನದಲ್ಲಿ ಆದ ಸರಣಿ ಕೊಲೆಗಳ
ವಿಷಯು...ನಿನಗೆ ಗೊತ್ತುಂಟಾ? ಆ ಕೊಲೆಗಳನ್ನು ಮಾಡಿದ 'ಮಾಚಪ್ಪ' ಈಗ
ತಲೆಮರೆಸಿಕೊಂಡು ಮಂಗಳೂರಿನ ಕಡೆಯೇ ಓಡಿ ಬಂದಿದ್ದಾನಂತೆ ಮಹಾರಾಯ್ತಿ
ಆತ ಕೊಲ್ಲುವುದು ಕತ್ತಿಯಿಂದಲಂತೆ! ಪಾಪ ಹಾಸನದಲ್ಲಿ ಒಂದೇ ಕುಟುಂಬದ ಆರು
ಮಂದಿಯನ್ನು ಕೊಚ್ಚಿ ಕೊಂದಿದ್ದಾನಂತೆ! ಎಂದು ಕಣ್ಣರಳಿಸಿ ನುಡಿದಳು.

ಮೀರಾಳಿಗೂ ಇದೆಲ್ಲಾ ಮೊದಲೇ ತಿಳಿದಿತ್ತು. ಬೆಳಗ್ಗಿನ ಪೇಪರಿನಲ್ಲಿ ಓದಿದ್ದಳು
ಹಾಗಾಗಿಯೇ ಅವಳಿಗೆ ಈ ವಿಷಯದಲ್ಲಿ ಯಾವೊಂದು ವಿಶೇಶತೆಯೂ ಕಾಣಲಿಲ್ಲ
ಅದೂ ಅಲ್ಲದೆ ಈ ಮೊದಲು ಬೆಂಗಳೂರಿನ ನಿವಾಸಿಯಾಗಿದ್ದ ಆಕೆಗೆ ಇಂತಹ ಕೊಲೆಗಳ
ಸುದ್ದಿಯನ್ನು ಕೇಳುವುದು ಅಭ್ಯಾಸವಾಗಿತ್ತು. ಬ್ಯಾಂಕ್ ಒಂದರಲ್ಲಿ ಉದ್ಯೋಗಿಯಾಗಿದ್ದ
ರಾಜೀವ ಕಳೆದವರ್ಷವಷ್ಟೇ ಮಂಗಳೂರಿಗೆ ವರ್ಗವಾಗಿಬಂದಿದ್ದ. ಮಂಗಳೂರಿನ
ಪ್ರಶಾಂತತೆ ಈ ದಂಪತಿಗಳಿಗೆ ತುಂಬಾ ಹಿಡಿಸಿತ್ತು. ಅವರ ಮನೆಯಿದ್ದುದು
ಮಣ್ಣಾಗುಡ್ಡೆಯಲ್ಲಿ. ಪಕ್ಕದ ಮನೆಯೆಂದು ಹೇಳಲು ಇದ್ದುದು ಪಂಕಜಳದ್ದು ಮಾತ್ರ
ಆದರೂ ಕೂಗಳತೆಯ ದೂರದಲ್ಲಿಯೇ 2-3 ಮನೆಗಳಿದ್ದವು.

'ಈ ವಿಷಯುವನ್ನೇ ಹೇಳಲು ಈಕೆ ಇಷ್ಟು ಹೊತಿನಲ್ಲಿ ಬಂದಳೇ' ಎಂದು
ಮನದಲ್ಲೇ ಶಪಿಸಿದಳು ಮೀರಾ. "ಅಯ್ಯೋ ಬಿಡಿ ಪಂಕಜಮ್ಮ ಇಂತಹ ಕೊಲೆಗಡುಕರು
ಏನ್ ಬೇಕಾದ್ರೂ ಮಾಡ್ತಾರೆ... ಎಲ್ ಬೇಕಾದ್ರೂ ಹೋಗ್ತಾರೆ. ಮುಖ್ಯವಾಗಿ ನಾವು
ನಮ್ಮ ಪೋಲೀಸ್ ಇಲಾಖೆಯವರನ್ನ ಬೈಕೋಬೇಕು... ಇನ್ನೂ ಇಂಥವರನ್ನು ಹೊರ
ಬಿಟ್ಟಿರೋದಿಕ್ಕೆ. ನೀವ್ಯಾಕೆ ಇಷ್ಟೊಂದು ಯೋಚ್ನೆ ಮಾಡ್ತೀರಾ? ಆತ ಈ ಕಡೆ
ಬಂದಿದ್ದಾನೆಂದು ಹೇಳಲು ಸಾಕ್ಷಿಯೇನಿಲ್ವಲ್ಲ. ಬರೀ ಗಾಳಿ ಸುದ್ದಿಯೂ ಆಗಿರಬಹುದಲ್ವಾ?
ಅದೂ ಅಲ್ದೆ ನಾವಿರೋದು ಸಿಟಿಯೊಳಗೆ ತಾನೇ?" ಎಂದು ತುಸು ಬೇಸರ ಮಿಶ್ರಿತ
ಧ್ವನಿಯಲ್ಲೇ ಉತ್ತರಿಸಿದಳು ಮೀರಾ.

ಮೀರಾಳ ನಿರಾಸಕ್ತಿಯ ಮಾತುಗಳನ್ನು ಕೇಳಿ ಆಕೆಗೆ ತುಸು
ಅವಮಾನವಾದಂತಾಯಿತು. ಹಾಗಾಗಿಯೇ ಪಟ್ಟು ಬಿಡದೇ ಮತ್ತೆ ವಿಷಯಕ್ಕೆ ಬಂದಳು

"ಎಂತದು ಹೇಳುವುದು ನೀನು ಮಾರಾಯ್ತಿ? ಓಹೋ.... ಹಾಗಾದರೆ ನಿನಗೆ ನಿನ್ನೆ ರಾತ್ರಿ ನಡೆದ ವಿಷಯದ ಪತ್ತೆಯೇ ಇಲ್ಲವೆಂದಾಯಿತು. ನಿನ್ನೆ ರಾತ್ರೆ ಏನಾಯಿತು ಗೊತ್ತುಂಟೋ?! ಬಿಜೈ ಚರ್ಚಿನ ಬಳಿಯ ಗುಡ್ಡೆಯ ಮೇಲಿದ್ದ ಒಂಟಿ ಮನೆಯಿಲ್ಲಿ ಜೋಡಿ ಕೊಲೆಯಾಗಿದೆಯಂತೆ. ಪಾಪ.. ಗಂಡ ಹೆಂಡತಿ ಇಬ್ಬರೇ ಇರುತ್ತಿದ್ದರಂತೆ. ಸ್ವಲ್ಪ ವಯಸ್ಸೂ ಆಗಿತ್ತೆಂದು ಕಾಣುತ್ತದೆ. ಹೆಚ್ಚು ರಾತ್ರಿಯೇನೂ ಆಗಿರಲಿಲ್ಲವಂತೆ. ಇಬ್ಬರನ್ನೂ ಕಡಿದು ಕೊಂದು ಹಾಕಲಾಗಿದೆಯಂತೆ. ಯಾವುದರಲ್ಲಿ ಗೊತ್ತುಂಟೋ? ಕತ್ತಿಯಲ್ಲಿ!!! ನನ್ನ ಮಗ ಮಧ್ಯಾಹ್ನ ಶಾಲೆಯಿಂದ ಊಟಕ್ಕೆ ಬಂದವ ಹೇಳಿದ. ಅವನ ಗೆಳೆಯನ ಮನೆಯಿಂದ ಸ್ವಲ್ಪವೇ ದೂರವಂತೆ ಆ ಒಂಟಿ ಮನೆ. ಅಷ್ಟೇ ಅಲ್ಲ ಪಕ್ಕದ ಬೀದಿಯ ಕಾಮತರೂ ಹೀಗೇ ಹೇಳಿದ್ದಾರೆ. ಪೋಲೀಸರಿಗೂ ಸಂಶಯವುಂಟಂತೆ.. ಇದು ಆ ಮಾಚಪ್ಪನದೇ ಕೆಲಸವಾಗಿರಬಹುದೆಂದು. ನೀನೇ ಹೇಳು ಮೀರಾ ಮಣ್ಣಗುಡ್ಡೆ ಬಿಜೈನಿಂದ ಮಹಾ ಎಷ್ಟು ದೂರವಿರುವುದು?! ಅಬ್ಬಬ್ಬಾ ಎಂದರೆ 2 ಕಿ.ಮೀ. ಇರಬಹುದು. ಅಲ್ಲಿಗೇ ಬಂದಿರುವ ಆ ಕೊಲೆಗಡುಕನಿಗೆ ಇಲ್ಲಿಗೆ ಬರಲು ಕಷ್ಟವಾಗುತ್ತದೆಯೋ?" ಎಂದು ಒಂದೇ ಉಸುರಿನಲ್ಲಿ ಎಲ್ಲವನ್ನೂ ಹೇಳಿ ಕುರ್ಚಿಗೆ ಒರಗಿ ಸುಧಾರಿಸಿಕೊಂಡು, ಓರೆಗಣ್ಣಿನಿಂದಲೇ ಮೀರಾಳ ಮುಖದಲ್ಲಿ ಉಂಟಾಗತೊಡಗಿದ್ದ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸತೊಡಗಿದಳು.

ಅವರೆಗೆ ನಿರಾಳವಾಗಿದ್ದ ಆಕೆಯ ಮುಖವೀಗ ಗಂಭೀರವಾಯಿತು. ಕಣ್ಣಿನಲ್ಲಿ ಆಂತಕಮೂಡಿತು. ಮನಸ್ಸು ಚಿಂತೆಯ ಗೂಡಾಯಿತು. ಹಣೆಯಲ್ಲಿ ನೆರಿಗೆಗಳು ಮೂಡಿದವು. ಇದನ್ನೆಲ್ಲಾ ಗಮನಿಸಿದ ಪಂಕಜಮ್ಮನಿಗೆ ತುಂಬಾ ಸಂತಸವಾಯಿತು. ತಾನು ಹೇಳಿದ ವಿಷಯ ಸರಿಯಾಗಿಯೇ ಕೆಲಸಮಾಡಿತ್ತಿದೆ ಎಂದು ನೆಮ್ಮದಿಯಾಯಿತು. 'ಅಬ್ಬಾ! ಹೊಟ್ಟೆಯೊಳಗಿದ್ದ ಬೆಂಕಿಯೆಲ್ಲಾ ಹೊರ ಕಾರಿದ ತೃಪ್ತಿ. ಇನ್ನು ತಾನೊಬ್ಬಳೇ ಈ ವಿಷಯದ ಕುರಿತು ತಲೆಕೆಡಿಸಿಕೊಳ್ಳಬೇಕಾಗಿಲ್ಲವೆಂದು' ಸಮಾಧಾನಗೊಂಡಳು.

"ನೋಡು ಮೀರಾ ನನಗೇನೂ ನಿನ್ನನ್ನು ಹೆದರಿಸಬೇಕಿಂದಿಲ್ಲ ಗೊತ್ತಾಯ್ತಾ? ಎಷ್ಟೆಂದರೂ ನೀವು ನಮ್ಮ ಪಕ್ಕದ ಮನೆಯವರು ನೋಡು, ಹಾಗಾಗಿ ನಿಮ್ಮನ್ನು ಎಚ್ಚರಿಸುವುದು ನನ್ನ ಧರ್ಮ ಎಂದು ಹೇಳಿದ್ದು ಅಷ್ಟೇ. ನನಗೆಂತದೂ ಹೆದರಿಕೆ ಇಲ್ಲಪ್ಪ. ನಾವೆಲ್ಲಾ ಇಂದು ಸಂಜೆಯೇ ನನ್ನ ತಾಯಿಮನೆಯಾದ ಕಾಸರಗೋಡಿಗೆ ಹೋಗುತ್ತಿದ್ದೇವೆ. ಮಕ್ಕಳಿಗೂ ರಜೆಯಿದೆ. ಒಂದುವಾರವಾದರೂ ಅಲ್ಲಿಯೇ ಇರುವುದೆಂದು ಯೋಚನೆ ಮಾಡಿದ್ದೇನೆ. ಈ ಎಲ್ಲಾ ಗಲಾಟೆ ಅಷ್ಟರಲ್ಲಿ ಮುಗಿಯಲೂ ಬಹುದು ನೋಡು...ಆದರೆ ನೀವು ಮಾತ್ರ ಹುಶಾರಾಗಿರಿ. ಅದರಲ್ಲೂ ನೀನು

ಸಂಜೆಯವರೆಗೂ ಒಬ್ಬಳೇ ಇರುವುದು!... ಹಾಗೆ ಏನಾದರೂ ತೋಂದರೆ ಆದರೆ ಗಟ್ಟಿಯಾಗಿ ಕೂಗಿ ಬಿಡು. ಪಕ್ಕದ ಓಣಿಯ ಕಾಮತರು ಬೊಬ್ಬೆ ಕೇಳಿ ಬರುವರು. ಪ್ಚ... ಅಂತೂ ತುಂಬಾ ಕಷ್ಟವೇ ಆಯಿತು ನೋಡು.. ಜನ ನಮ್ಮನ್ನು ನಮ್ಮಷ್ಟಕ್ಕೇ ಬದುಕಲೂ ಬಿಡುವುದಿಲ್ಲ. ಹಂ...ಕಾಲ ಕೆಟ್ಟುಹೋಯಿತು. ಹೆಚ್ಚು ತಲೆ ಬಿಸಿ ಮಾಡಬೇಡ. ಎಲ್ಲ ಸರಿಯಾಗುತ್ತದೆ. ಧೈರ್ಯವಾಗಿರಿ. ನಾನಿನ್ನು ಬರುತ್ತೇನೆ ಮಹಾರಾಯ್ತಿ.. ತುಂಬಾ ಹೊತ್ತಾಯಿತು. ಹೊಡುವ ತಯಾರಿ ನಡೆಸಬೇಕು ಇನ್ನು'' ಎಂದೆನ್ನುತ್ತಾ ಹೊರಬಿದ್ದಳು. ಮೀರಾಳ ಎದೆಯೊಳಗೆ ಭಯದ ಜ್ವಾಲೆಯನ್ನು ಹೊತ್ತಿಸಿ ಸಾಕಷ್ಟು ತುಪ್ಪವನ್ನೂ ಸುರಿದೇ ಹೊಗಿದ್ದಳು ಆಕೆ. ಏನೋ ಮಹತ್ ಸಾಧನೆ ಮಾಡಿ ಬಂದಂತಹ ವಿಚಿತ್ರ ಹೊಳಪು ಪಂಕಜಮ್ಮನ ಮುಖದಲ್ಲಿ ಮೂಡಿತ್ತು.

ಇತ್ತ ಮೀರಾಳ ಮನದಲ್ಲಿ ಬಿರುಗಾಳಿಯೇ ಎದ್ದಿತು. ಆಕೆಯ ಯೋಚನೆಗಳೆಲ್ಲಾ ಮಾಚಪ್ಪನ ಸುತ್ತಲೇ ಗಿರಕಿಹೊಡೆಯತೊಡಗಿದವು. ಪಂಕಜಳ ಎಚ್ಚರಿಕೆಯೇ ಕಿವಿಯೊಳಗೆ ಮೊಳಗುತ್ತಿತ್ತು. ''ಹೌದಲ್ಲಾ? ಬಿಜೈನಲ್ಲಿ ನಡೆದ ಕೊಲೆಯಲ್ಲಿ ಆತನ ಪಾತ್ರವಿದ್ದಿರಬಾರದೇಕೇ? ಹಾಗೇನಾದರೂ ಆಗಿದ್ದರೆ... ನಾವಿರುವ ಸ್ಥಳ ದೂರವೇನೂ ಇಲ್ಲ. ಛೇ..ಈ ಪಂಕಜಮ್ಮ ಯಾಕಾದರೂ ಇದನ್ನೆಲ್ಲಾ ಹೇಳಿದಳೋ.... ನಿದ್ದೆಯ ಜೊತೆಗೆ ನೆಮ್ಮದಿಯೂ ಹಾಳಾಯಿತು. ಅದರ ಮೇಲೆ ಈ ತಲೆನೋವು ಬೇರೆ'' ಎಂದು ಪೇಚಾಡಿದಳು ಮೀರಾ. ತನ್ನ ದುಗುಡವನ್ನೆಲ್ಲಾ ಹೊರಗೆಡಹಲು ಪತಿಯ ಬರುವನ್ನೇ ತವಕದಿಂದ ಕಾಯತೊಡಗಿದಳು

ಸಂಜೆ ಮನೆಗೆ ಬಂದ ರಾಜೀವನನ್ನು ಸ್ವಾಗತಿಸಿದ್ದು ನಗುವಿಲ್ಲದ, ಆತಂಕದಿಂದ ಬಿಳಿಚಿಕೊಂಡ ಪತ್ನಿಯ ಮುಖ. ಆತನಿಗೆ ಸುಧಾರಿಸಿಕೊಳ್ಳಲೂ ಸಮಯ ನೀಡದೆ ತನ್ನೊಳಗಿನ ಭಯ, ಬೇಗುದಿಯನ್ನೆಲ್ಲಾ ಆತನ ಮುಂದೆ ಹೊರಹಾಕಿದಳು. ಶಾಂತಭಾವದಲ್ಲೇ ಆಕೆಯ ಮಾತುಗಳನ್ನೆಲ್ಲಾ ಕೇಳಿದ ರಾಜೀವ ಗಟ್ಟಿಯಾಗಿ ನಕ್ಕು ಬಿಟ್ಟ. ''ನಿನ್ಗೆ ಬೇರೆ ಕೆಲ್ಸವಿಲ್ಲ. ಇಂಥ ಪೊಳ್ಳು ವಿಷಯಕ್ಕೆಲ್ಲ ತಲೆಕೆಡ್ಸಿಕೊಳ್ತೀಯಲ್ಲೆ? ಆ ಪಂಕಜಮ್ಮನ್ನ ಒಂದ್ ವರ್ಷದಿಂದ ನೋಡ್ತಿದ್ದೀವೆ.. ಆಕೆಯ ಕೆಲ್ಸವೇ ಇದು. ಬಿಜೈನಲ್ಲಿ ಕೊಲೆ ಮಾಡಿದ್ದು ಮಾಚಪ್ಪನೇ ಎಂದು ಇನ್ನೂ ಸಾಬೀತಾಗಿಲ್ಲ. ದಾಯವಾದಿ ದ್ವೇಷನೂ ಇರ್ಬೋದು ಎಂಬ ಗುಮಾನಿನೂ ಇದೆ. ಇವತ್ತು ನಮ್ಮ ಬ್ಯಾಂಕಿನಲ್ಲಿ ಹೇಳುತ್ತಿದ್ದರು. ಹಾಗಾಗಿ ಸುಮ್ಮನೆ ಗಾಳಿ ಸುದ್ದಿಗೆ ತಲೆಕೊಡ್ಬೇಡ. ಹಂ...ಇನ್ನಾದ್ರೂ ನಂಗೆ ಕಾಫಿ ಸಿಗುತ್ತಾ ಇಲ್ವಾ?" ಎನ್ನಲು ಮೀರಾ ಅಡುಗೆ ಮನೆಯತ್ತ ನಡೆದಳು. ಪತಿಯ ಮಾತನಿಂದ ಕೊಂಚ ಸಮಾಧಾನವಾದರೂ ಒಳಗಿನ ಭೀತಿ ಇನ್ನೂ ಹಾಗೆಯೇ ಉಳಿದಿತ್ತು. ಸ್ವಬಾವತಃ ಪುಕ್ಕಲು ಸ್ವಬಾವದ ಮೀರಾ

ಈ ಪ್ರಕರಣದಿಂದಾಗಿ ಕೆಂಗೆಟ್ಟಿದ್ದಳು. ಗಂಡನಿಗೆ ಕಾಫಿ, ತಿಂಡಿಯನ್ನಿತ್ತು ಕೋಣೆಗೆ ಹೋಗಿ ಮಲಗಿದಳು. ಮನದೊಳಗಿನ ಆತಂಕದ ಭಾರದಿಂದಲೋ, ತಲೆನೋವಿನಿಂದಲೋ ಅವಳಿಗೆ ಅಲ್ಲೇ ಗಾಢ ನಿದ್ರೆ ಆವರಿಸಿತು.

ಮೀರಾ ಕಣ್ಣು ಬಿಟ್ಟಾಗ ಎಲ್ಲೆಡೆಯೂ ಅಂಧಕಾರ ಆವರಿಸಿತ್ತು. ಹೊರಗೂ ಬೆಳಕಿರಲಿಲ್ಲ. ಪಕ್ಕದಲ್ಲಿದ್ದ ಸ್ವಿಚ್ ಒತ್ತಿದಾಗ ತಿಳಿಯಿತು ಕರೆಂಟ್ ಹೋಗಿದೆಯೆಂದು. ಹೊರಗೆ ತಿಂಗಳ ಬೆಳಕೂ ಇರಲಿಲ್ಲ. ನಿದ್ದೆಯ ಮಂಪರು ಸಂಪೂರ್ಣ ಇಳಿಯಲು, ಅಡಗಿದ್ದ ಮಾಚಪ್ಪನ ಭಯದ ಭೂತ ಧುತ್ತನೆ ಮೂಡಿತು. ಎರಡು ಬಾರಿ ಪತಿಯನ್ನು ಕರೆದರೂ ಯಾವ ಉತ್ತರವೂ ಬರದಿರಲು ಧಿಗ್ಗನೆ ಎದ್ದಳು. ಸ್ವರವೇ ಏಳದಂತಾಯಿತು. ಬೆವರು ಧಾರಾಕರಾವಾಗಿ ಸುರಿಯತೊಡಗಿತು. ಅಷ್ಟರಲ್ಲಿ ಆಕೆಯ ಕಣ್ಣು ಕತ್ತೆಲೆಗೆ ಹೊಂದಿಕೊಳ್ಳತೊಡಗಿತ್ತು. 'ಅಯ್ಯೋ ಈಗೇನು ಮಾಡಲಿ?! ಆ ಕೊಲೆಗಡುಕ ಇಲ್ಲಿಗೆ ಬಂದರೆ ಹೇಗೆ ಓಡಲಿ? ಈ ಹೊತ್ತಿನಲ್ಲಿ ಇವರೆಲ್ಲಿ ಹೋದರು? ಒಂದೊಮ್ಮೆ ಆತ ಇಲ್ಲಿಗೇ ಬಂದಿರಬಹುದೇ? ಅವರಿಗೆ ಏನಾದರೂ ಕೆಡುಕು ಮಾಡಿರಬಹುದೇ?ಛೇ... ಕರೆಂಟೂ ಸರಿ ಸಮಯದಲ್ಲಿ ಕೈ ಕೊಟ್ಟಿದೆ. ಗಂಟೆಯೂ ಎಷ್ಟಾಗಿದೆಯೆಂದು ತಿಳಿಯುತ್ತಿಲ್ಲ. ದೇವರೇ ನೀನೇ ಗತಿ.'' ಎಂದೆಲ್ಲಾ ತನ್ನೊಳಗೇ ಬಡಬಡಿಸುತ್ತಾ ಮೆಲ್ಲನಡಿಯಿಟ್ಟಳು. ತಟ್ಟನೆ ಅವಳಿಗೆ ಮಂಚದ ಮೂಲೆಯಲ್ಲಿ ಆನಿಸಿಟ್ಟಿದ್ದ ಬಿದಿರಿನ ದೊಣ್ಣೆಯ ನೆನಪಾಯಿತು. ಅದರ ನೆನಪಾಗುತ್ತಲೇ ಅರ್ಧ ಧೈರ್ಯ ಬಂದಂತಾಯಿತು. ಇದ್ದಬಿದ್ದ ಧೈರ್ಯವನ್ನೆಲ್ಲಾ ಒಟ್ಟುಗೂಡಿಸಿ ನಡುಗುವ ಕೈ ಕಾಲುಗಳನ್ನು ತಹಬಂದಿಗೆ ತಂದುಕೊಳ್ಳತೊಡಗಿದಳು. ದೇವರ ನಾಮಗಳನ್ನು ಪಠಿಸುತ್ತಾ ಕೈಯಲ್ಲಿ ಆ ದೊಣ್ಣೆಯನ್ನು ಹಿಡಿದುಕೊಂಡು ಹಾಲಿಗೆ ಬಂದಳು ಮೀರಾ.

ಹೊರ ಬಂದು ನೋಡಿದರೆ ಮುಂಬಾಗಿಲು ತೆರೆದಿತ್ತು. ಇದನ್ನು ನೋಡಿ ಮೀರಾಳಿಗೆ ಎದೆ ಬಡಿತವೇ ಒಂದು ಕ್ಷಣ ನಿಂತಂತಾಯಿತು. ಅಷ್ಟರಲ್ಲಿಯೇ ಒಂದು ಮನುಷ್ಯಾಕೃತಿ ಕೈಯಲ್ಲಿ ಒಂದು ಹಿಡಿಕೆಯ ಹಿಡಿದು ಮನೆಯೊಳಗೆ ಬರುತ್ತಿರುವುದು ಕಂಡುಬಂತು. ತಲೆಯೊಳಗಿದ್ದ ಭೀತಿಯಿಂದಲೋ, ಕತ್ತಲೆಯ ಪ್ರಭಾವದಿಂದಲೋ ಅವಳಿಗೆ ಆತ ಮಾಚಪ್ಪನೇ ಆಗಿರಬೇಕೆಂದು ಬಲವಾದ ಅನುಮಾನವುಂಟಾಯಿತು. ಆ ಹಿಡಿಕೆ ಕತ್ತಿಯೇ ಆಗಿರಬೇಕೆಂದು ಬಗೆದಳು. ಒಳಗಿನ ಆತಂಕ ನೂರ್ಮಡಿ ಹೆಚ್ಚಿತು. ಪ್ರಾಣಭಯ ಎಲ್ಲವನ್ನೂ ಹಿಂದಿಕ್ಕಿ, ವಿಚಿತ್ರ ಹುಚ್ಚು ಧೈರ್ಯವನ್ನು ತುಂಬಿತು. ಆ ವ್ಯಕ್ತಿ ತನ್ನತ್ತಲೇ ಬರುತ್ತಿರುವುದ ಕಂಡು ಕೈಯೊಳಗಿದ್ದ ದೊಣ್ಣೆಯಲ್ಲಿ ಆತನ ತಲೆಗೆ

ಹೊಡೆಯಲು ಎತ್ತಿದಳು. ಅವಳಿಗೆ ಚೆನ್ನಾಗಿ ತಿಳಿದಿತ್ತು. ಆ ದೊಣ್ಣೆಯೇನಾದರೂ ಸರಿಯಾದ ಜಾಗಕ್ಕೆ ಬಿದ್ದರೆ ಅತನ ತಲೆ ಒಡೆಯುವುದು ಗ್ಯಾರಂಟಿಯೆಂದು. ಆ ಕ್ಷಣ ಅವಳಿಗೆ ತನ್ನ ಪ್ರಾಣದ ರಕ್ಷಣೆಯೊಂದೇ ಮುಖ್ಯವೆನಿಸಿತು. ಇನ್ನೇನು ಆಕೆ ಹೊಡೆಯಲೇಬೇಕೆನ್ನುವಷ್ಟರಲ್ಲಿ- "ಮೀರಾ... ಇನ್ನೂ ಎದ್ದಿಲ್ವಾ? ಕರೆಂಟ್ ಬೇರೆ ಹೋಗಿದೆ. ಎದ್ದು ಮೇಣದ ಬತ್ತಿನಾದ್ರೂ ಹಚ್ಬಾರ್ದಾ?" ಎನ್ನುವ ಮಾತುಗಳು ಆ ವ್ಯಕ್ತಿಯ ಕಡೆಯಿಂದ ಬರಲು, ಅವಳ ಕೈಗಳು ಅಲ್ಲೇ ಸ್ತಬ್ಧವಾದವು. ಅದು ಅವಳಿಗೆ ಚಿರಪರಿಚಿತ ಧ್ವನಿಯಾಗಿತ್ತು. ಅದೇ ಸಮಯದಲ್ಲಿ ಹೋಗಿದ್ದ ಕರೆಂಟ್ ಬರಲು ಹಾಲಿನ ತುಂಬೆಲ್ಲಾ ಬೆಳಕು ಚೆಲ್ಲಿತು. ಎದುರಿಗಿದ್ದ ವ್ಯಕ್ತಿ ರಾಜೀವನಾಗಿದ್ದು, ಆತನಕೈಯೊಳಗೆ ಪೊರಕೆಯಿತ್ತು. ಬಿಟ್ಟಕಣ್ಣುಗಳಿಂದ ಹುಚ್ಚಿಯಂತೆ ತನ್ನತ್ತಲೇ ನೋಡುತ್ತಿದ್ದ ಮೀರಾಳ ಅವತಾರವನ್ನು ಕಂಡು ರಾಜೀವ ಆಶ್ಚರ್ಯಗೊಂಡ. ಕೆದರಿದ ಕೂದಲು, ಕೆಂಪಡರಿದ ಕಣ್ಣುಗಳು, ಬೆವರಿನಿಂದ ತೊಪ್ಪೆಯಾಗಿದ್ದ ಮುಖ, ಕೈಯೊಳಗಿದ್ದ ದೊಣ್ಣೆ- ಇವನ್ನೆಲ್ಲಾ ನೋಡಿ ದಂಗಾದ. ಕ್ರಮೇಣ ಮೀರಾಳಿಗೆ ವಾಸ್ತವಿಕತೆಯ ಅರಿವುಂಟಾಯಿತು. ದೈಹದ ಶಕ್ತಿಯೆಲ್ಲಾ ಒಮ್ಮೇಲೇ ಸೋರಿದಂತಾಗಿ ಅಲ್ಲೇ ಕುಸಿದು ಕುಳಿತಳು.

"ಅಲ್ರೀ ಎಲ್ ಹೋಗಿದ್ರೀ ನೀವು? ಅದೂ ಇಷ್ಟು ಹೊತ್ನಲ್ಲಿ, ದೀಪಾನೂ ಹಾಕ್ದೇ?!! ಹೋಗೋದೇನೂ ಹೋದ್ರಿ ಹೊರಗಿನ ಬಾಗಿಲನ್ನಾದ್ರೂ ಹಾಕ್ಬಾರ್ದಾಗಿತ್ತಾ? ನನ್ನ ಎಬ್ಸಾದ್ರೂ ಹೋಕ್ಬೇಕಿತ್ತು. ನನ್ನ ಪಾಡು ಯಾರಿಗೂ ಬೇಡಾ ಇಲ್ಲಿ. ಅರ್ಧ ಸತ್ತೇ ಹೋಗಿದ್ದೆ. ಕತ್ತಲಲ್ಲಿ ನಿಮ್ಮನ್ನೇ ಆ ಮಾಚಪ್ಪ ಎಂದೆಣಿಸಿ ಹೊಡೆಯಲು ದೊಣ್ಣೆ ಎತ್ತಿದ್ದೆ! ದೇವ್ರೇ..ನೀವೇನಾದ್ರೂ ಮಾತಾಡ್ದೇ ಹೋಗಿದ್ರೆ...!!! ಅಯ್ಯಮ್ಮಾ.. ನನ್ನಿಂದ ಎಣಿಸಲೂ ಸಾಧ್ಯವಿಲ್ಲ. ಎಂಥ ಅನಾಹುತ ನನ್ನ ಕೈಯಿಂದಲೇ ಆಗ್ಹೋಗ್ತಿತ್ತು! ಎಂದು ಗಂಡನನ್ನು ತರಾಟೆಗೆ ತೆಗೆದುಕೊಂಡಳು ಮೀರಾ.

ಈಗ ರಾಜೀವನಿಗೆ ವಿಷಯವೆಲ್ಲಾ ಸ್ಪಷ್ಟವಾಯಿತು. ತನ್ನ ತಪ್ಪಿನ ಅರಿವುಂಟಾಗಲು ತಾನೂ ಅವಳ ಬಳಿಯೇ ಕುಳಿತು ಸಮಾಧಾನಿಸತೊಡಗಿದ. "ಕ್ಷಮಿಸು ಮೀರಾ.. ತಪ್ಪಾಯ್ತು. ಅದು ಒಂದ್ ಇಲಿ ಓಡಾಡ್ತಿತ್ತಾ... ಪೊರಕೆಯಿಂದ ಅದನ್ನ ಹೊಡ್ದು ಕೊಂದು ಹೊರಗೆ ಎಸೆಯಲು ಹೋಗಿದ್ದೆ. ಆಗ ಕರೆಂಟ್ ಇತ್ತು. ಇಲ್ಲೇ ಅಂಗ್ಳಕ್ಕೆ ಹೋಗೋದೆಂದು ನಿನ್ನ ಎಬ್ಸಿಲ್ಲ. ಹೇಗಿದ್ರೂ ನಾನು ಇಲ್ಲೇ ಹೊರಗೆ ಇದ್ದೇನೆಂದು ಬಾಗ್ಲು ಹಾಕಿರ್ಲಿಲ. ನೀನೂ ಸರಿ, ಆ ಪಂಕಜಮ್ಮನ ಮಾತಿಗೆ ಬೆಲೆಕೊಟ್ಟು ಇಲ್ಲದ ಹುಚ್ಚು ಭ್ರಮೆಯೊಳಗೆ ಸಿಕ್ಕಿ ನನ್ನನ್ನೇ ಆ ಕೊಲೆಗಡುಕ ಎಂದ್ಕೊಂಡೆ. ನೀನೆಲ್ಲಿ ನನ್ನ ಮಾತ್ನ ಕೇಳ್ತಿ? ಈಗ ನೋಡು ಏನಾಗ್ಹೋಗ್ತಿತ್ತು ಅಂತ!! ಇವೊತ್ತುಂದು ಗತಿ ಕಾಣಿಸಿಯೇ ಬಿಡ್ತಿದ್ದೆ ನನ್ಗೆ . ಅಬ್ಬಾ! ಆ

ದೇವ್ರೇ ನನ್ನ ಕಾಪಾಡ್ದ. ಸರಿ ಏಳು, ಇನ್ನಾದ್ರೂ ಈ ಹಾಳ್ ಯೋಚ್ನೆಯೆಲ್ಲಾ ಬಿಡು. ಯಾವನೋ ಎಲ್ಲೋ ಕೊಲೆ ಮಾಡಿ ಓಡಿ ಬಂದ ಅಂತ ನಾವು ನಿದ್ದೆ ಗೆಟ್ಟರೆ ಹೇಗೆ? ಕೊಲ್ಲುವವನಿಗಿಂತ ಕಾಯುವವನೇ ಮೇಲು. ಸಾವು ಹೇಗಿದ್ರೂ ನಿಶ್ಚಿತ. ಅದ್ಕೆ ಈಗಲೇ ಅಳೂದು ಮೂರ್ಖತನ. ಸರಿ.. ನಡಿ ಗಂಟೆ ಒಂಭತ್ತಾಯ್ತು, ಊಟದ ಕಡೆ ಗಮನ ಕೊಡು''ಎಂದು ಸಂತೈಸಿದ ರಾಜೀವ.

ಈಗ ಮೀರಾಳ ಮನಃಸ್ಥಿತಿ ಸಾಕಷ್ಟು ತಿಳಿಯಾಯಿತು. ಪತಿಯ ಬುದ್ಧಿವಾದ ಆಕೆಯ ಮೇಲೆ ತುಂಬಾ ಪರಿಣಾಮ ಬೀರಿದವು. ಆದರೆ ರಾತ್ರಿ ಮಲಗುವಾಗ ಎರಡು ಬೀಗಗಳಿಂದ ಮುಂಬಾಗಿಲನ್ನು ಭದ್ರ ಪಡಿಸಲು ಮಾತ್ರ ಮರೆಯಲಿಲ್ಲ.

ಬೆಳಿಗ್ಗೆ ಎಂದಿನಂತೆ ಕೆಲಸದಲ್ಲಿ ತೊಡಗಿದ್ದ ಮೀರಾಳಿಗೆ ಪೇಪರ್ ಬಂದ ಶಬ್ದವಾಗಲು, ಹೊರಬಂದಳು. ಕುತೂಹಲದಿಂದ ಅಲ್ಲೇ ಓದತೊಡಗಿದಳು. ಹಾಗೇ ಸುಮ್ಮನೇ ಮೇಲಿನಿಂದ ಕಣ್ಣು ಹಾಯಿಸಲು, ಮೊದಲ ಪುಟದ ಕೊನೆಯಲ್ಲಿ ಮುದ್ರಿತವಾಗಿದ್ದ ಸುದ್ದಿಯನ್ನೋದಿ ಅವಳ ಮುಖ ಸಂತಸದಿಂದ ಮೊರದಗಲವಾಯಿತು. ಬೆಟ್ಟದಂತಹ ಭಾರ ಸರ್ರನೆ ಇಳಿದ ಅನುಭವವಾಯಿತು ಆಕೆಗೆ.

'ಕತ್ತಿ ಮಾಚಪ್ಪ ಹಾಸನದಲ್ಲಿ ನಿನ್ನೆ ನಡೆದ ಪೋಲಿಸ್ ಎನ್ಕೌಂಟರ್‌ನಲ್ಲಿ ಬಲಿಯಾದ '-ಎಂಬ ಸುದ್ದಿ ದಪ್ಪಕ್ಷರದಲ್ಲಿ ಅಚ್ಚುಹಾಕಲ್ಪಟ್ಟಿತ್ತು. ನಿನ್ನೆ ನೆಡೆದ ಘಟನೆಗಳೆಲ್ಲಾ ನೆನಪಿಗೆ ಬಂದು, ನಗು ಬಂತು ಮೀರಾಳಿಗೆ. ತಾನು ಇಲ್ಲದ ಗಾಳಿ ಸುದ್ದಿಗೆ ಬೆಲೆಕೊಟ್ಟು ತನ್ನ ಮನಃಸ್ಥಿತಿಯನ್ನೇ ಹಾಳುಮಾಡಿಕೊಂಡಿದ್ದೆನಲ್ಲಾ, ಎಂದು ಮನದಲ್ಲೇ ತನ್ನನ್ನು ಬೈದುಕೊಂಡಳು. ತನ್ನಿಂದ ಘಟಿಸಿಬಹುದಾಗಿದ್ದ ಅನಾಹುತವನ್ನೆಣಿಸಿ ಅವಳೆದೆ ಝಲ್ಲೆಂದಿತು. ತಕ್ಷಣ ಎದ್ದು ದೇವರಿಗೆ ತುಪ್ಪದ ದೀಪ ಹಚ್ಚಿ ಕೈಮುಗಿದಳು.

***

ನಿರ್ಧಾರ

"ಹೋಯ್ ಶ್ಯಾಂ ಭಟ್ರು! ದಯಮಾಡ್ಸವು ಈ ಬಡವ್ನ ಹೋಟೇಲಿಗೆ, ಬ್ಹಾಳ್ ಅಪರೂಪಾಗೋದ್ರಿ! ಶಿರ್ಸಿ ಜಾತ್ರೆ ನಂತ್ರ ನಿಮ್ಮ ಮುಖ ಕಾಣಸ್ತಾ ಇಪ್ದೇ ಈಗಪಾ... ಸುಮಾರು ತಿಂಗ್ಳಹತ್ರಾತು ಅಲ್ದಾ?" ಎಂದು ದೇಶಾವರಿ ನಗು ಬೀರುತ್ತಾ ಸ್ವಾಗತಿಸಿದ ಸುಬ್ಬಣ್ಣ ಹೆಗಡೆ. "ಹೂಂ.. ಎಂತಮಾಡದು ಸುಬ್ಬಣ್ಣ ಈ ಮನೆ ತಾಪತ್ರಯಾ ಹೇಳದು ಪೇಟೆ ಕಡೆ ತಲೆಹಾಕಲೇ ಕೊಟ್ಟಿದ್ದಿಲ್ಲೆ ...ಅಡಿಕೆ ಕೊಯ್ಲು ಆತುನೋಡು.. ಮನಿಕಡೆನೂ ಯಾರೂ ಇಲ್ಲೆ ಎಲ್ಲಾ ನಾನೇ ನೋಡವು..ಹಾಂಗಾಗಿ ಅದ್ರ ತಲೆಬಿಸಿಲೇ ಇದ್ದಿದ್ದಿ. ಎಲ್ಲಾ ಇದ್ದಿದ್ದೇಯಾ ನೀ ಹೇಳು ಎಂಥ ವಿಷೇಶ? ಅಲ್ದಾ ಈ ಸಲಾನಾದ್ರೂವಾ ಅಡಿಕೆ ರೇಟು ಏರೋಹಾಂಗೆ ಕಾಣಸ್ತನಾ?" ಎಂದು ಅಲ್ಲೇ ಖಾಲಿ ಇದ್ದ ಟೇಬಲಿನ ಬಳಿ ಕುಳಿತು ತಣ್ಣನೆಯ ನೀರನ್ನು ಕುಡಿದರು. "ಲೇ ಮಾಣಿ ಭಟ್ರಿಗೊಂದು ಫೆಶಲ್ ಕಾಫಿ ತಗಂಬಾ ನೋಡವಾ.."ಎಂದು ಕೂಗಿ ತಾವೂ ಒಂದು ಕುರ್ಚಿಯನ್ನೆಳೆದು ಕೊಂಡು ಅವರ ಬಳಿ ಕುಳಿತರು. "ಅಡಿಕೆ ರೇಟು ಬಿಡಿ ಭಟ್ರೆ.. ಆರಕ್ಕೇರ್ತಿಲ್ಲೆ ಮೂರಕ್ಕಿಳಿತಿಲ್ಲೆ..ಅದ್ರ ತಾಪತ್ರಯಾ ಇದ್ದಿದ್ದೇಯಾ..ಅಲ್ಲಾ ಮಾರಾಯ್ರೆ ನಿಮ್ಮ ತಂಗಿ ಮಗ್ನ ಮದ್ವೆ ನಿಶ್ಚಯ ಆದ್ಹಾಂಗಡ!? ಒಂದೂ ಸುದ್ದಿನೇ ಮಾಡಿದ್ರಿಲ್ಯಪ.. ಆನೂ ನಿಮ್ಮ ಕುಟುಂಬದವ್ನೇ ಆಗಿದ್ರೂ ನೀವೂ ಒಂದ ಮಾತೂ ಹೇಳಿದ್ರಿಲ್ಲೆ ...ಹಂ.. ಆದ್ರೆ ನೀವೆಂತ ಬೇಕಾದ್ರೂ ಹೆಳಿ, ಚಿನ್ನದಂಥ ಹುಡ್ಗಗಂಗೆ ಅಂಥ ಹುಡ್ಗಿ ಹೇಳ್ಸಿದ್ದಲ್ಲ ನೋಡಿ..ಮೊದಲ್ಲೇ ದತ್ತು ತಗಂಡ ಹುಡ್ಗಿ ಅದ್ರಮೇಲೆ ಸ್ವಲ್ಪ ಕುಂಟಡಪ, ಎಂತ ನೋಡಿ ಮೆಚ್ಗಂಡ್ನೋ ಎಂತೋ!! ಹಾಂಗ ನೋಡಿರೆ ನಿಮ್ಮ ಮಗ್ನು ಯಾವುದ್ರಲ್ಲಿ ತೆಗ್ದ ಹಾಕ್ವಾಂಗಿತ್ತು ಅಲ್ದಾ? ಎಲ್ಲಾ ಹಣೆಬರಹ " ಬಾರದ ನಿಟ್ಟುಸಿರು ಬಿಟ್ಟು ಭಟ್ಟರ ಕಡೆಗೆ ಅನುಕಂಪದ ನೋಟ ಹರಿಸಿದ ಸುಬ್ಬಣ್ಣ .

ಶ್ಯಾಂ ಭಟ್ಟನಿಗೆ ಅವನ ಮಾತುಗಳನ್ನು ಕೇಳಿ ಕಾದ ಸೀಸವನ್ನು ಹೊಯ್ದಂತಾಯೆತು. ಕ್ಷಣ ಎದೆಹೊಡೆದು ಹೋದಂತೆನಿಸಿತು. ಅಳಿಯ ರಾಜೀವ ಹುಡುಗಿಯೊಂದನ್ನು ಮೆಚ್ಚಿದ್ದಾನೆಂಬ ದೂರದ ಸುದ್ದಿ ಕಿವಿಗೆ ಬಿದ್ದಿತ್ತಾದರೂ ಅವರದನ್ನು ನಂಬಿರಲಿಲ್ಲ. ಈಗ ಈ ವಿಷಯ ಹೀಗೆ ಧುತ್ತೆಂದು ಪ್ರತ್ಯಕ್ಷವಾಗಲು ಅವರಿಗೆ ಏನೊಂದೂ ತಿಳಿಯದಂತಾಯಿತು. ಮನಸ್ಸು ಈ ವಿಷಯ ಸುಳ್ಳಾಗಿರಲೆಂದು ಬಯಸಿತು. ಇತ್ತ ಭಟ್ಟರ ಮೌನ ಕಂಡು ಸುಬ್ಬಣ್ಣನಿಗೆ ಅಚ್ಚರಿಯಾಯಿತು. ಇವರ ಸೊಕ್ಕಿಗೆ ತಕ್ಕ ಶಾಸ್ತಿಯಾಯೆತೆಂದು ಮನದಲ್ಲೆ ಖುಶಿ ಪಟ್ಟ. "ಹೋಗೋ ಮಳ್ಳ.. ಹುಚ್ಚುಚ್ಚಾಡಡ.. ಎಲ್ಲೋ ಸುಳ್ಳು ಸುದ್ದಿಯಾದಿಕ್ಕು...

5376

ಇಲ್ಲಾ ನೀ ಕೇಳ್ಸಕಂಬಲೇ ಎಲ್ಲೋ ತಪ್ಪಾದಿಕ್ಕು ಬಿಡು" ಎಂದು ತಮ್ಮನ್ನು ತಾವೇ ಸಮಾಧಾನಪಡಿಸಿಕೊಳ್ಳುವ ಪ್ರಯತ್ನ ಮಾಡಿದರು. ಸುಬ್ಬಣ್ಣನಿಗೆ ಈಗ ಖಾತ್ರಿಯಾಯಿತು ವಿಷಯ ಇವರ ಕಿವಿಗೆ ಬಿದ್ದಿಲ್ಲ ಎಂದು. ಮತ್ತೂ ಉತ್ಸಾಹದಿಂದ ಆತ "ನೀವು ಸದ್ಯ ನೀಲಕುಂದಕ್ಕೆ ಹೋಜ್ರಿಲ್ಯ ಎಂತದು? ಅಲ್ಲಿಂದನೂ ಎಂತ ಸುದ್ದಿ ಬಂಜಿಲ್ಯ? ಅಲ್ಲಾ .. ನಂಗೂ ವಿಷ್ಯ ಗೊತ್ತಿತ್ತಿಲ್ಲೆ, ಮೊನ್ನೆ ಆ ನೀಲೇಕಣಿ ನಿರಂಜನ ಭಟ್ರ ಪಕ್ಕದಮನೆ ವೆಂಕಟ ಜೋಯಿಸ ಬಂದಿದ್ದ. ಅಂವ ಹೇಳ್ದ ನೋಡು. ಹಾಂಗಾಗಿ ಖರೇನೇ ಆಗಿಕ್ಕು. ಮುಂದಿನ ತಿಂಗ್ಳು ಲಗ್ನ ಇಡ್ಸಲೆ ನೀಲಕುಂದಕ್ಕೆ ಹೋಗ್ತ್ವಡಪ, ಒಂದ್ ಸುತ್ತಿನ ಮಾತುಕತೆ ಎಲ್ಲಾ ನೀ ನಡೆದ್ದಡ, ನಿಮ್ಮ ಭಾವ ರಾಮ ಶಾಸ್ತ್ರಿಗಳೂ ಒಂದ್ ಮನ್ಸು ಮಾಡಿದ್ರಡ ಹೇಳಿ ಅಂದ. ಯಂಗೂ ಮೊದಲು ನಂಬಲಾಯಿಲ್ಲೆ, ಅದ್ರೂ ಆದಿಕ್ಕು ಹೇಳಿ ಮಾಡ್ಕಂಡಿ, ಅದ್ಕೇಯಾ ನಿಮ್ಮನ್ನೇ ಕೇಳ್ದಿ ಈಗ " ಎಂದು ಪುನಃ ಕೆದಕಿದರು.

ಸುಬ್ಬಣ್ಣನ ನಿಖರವಾದ ಸ್ಪಷ್ಟಣೆಯಿಂದ ಭಟ್ಟರಿಗೆ ಖಾತ್ರಿಯಾಯಿತು.. ವಿಷಯ ಸತ್ಯವೆಂದು. ಹೊಟ್ಟೆಯಲ್ಲಿ ಜ್ವಾಲೆ ಭುಗಿಲ್ಲೆಂದಿತು, ಒಂದು ಕ್ಷಣ ಕಣ್ಮುಚ್ಚಿಕುಳಿತರು. ಮಾಣಿ ತಂದಿಟ್ಟಿದ್ದ ತಿಂಡಿಯನ್ನು ಕಣ್ಣೆತ್ತಿಯೂ ನೋಡದೆ ಮತ್ತೊಂದು ಲೋಟ ನೀರನ್ನು ಗಟಗಟನೆ ಕುಡಿದರು. "ಸುಬ್ಬಣ್ಣ ಇದೆಲ್ಲಾ ಬರಿ ಅಡಾ ಪಡಾ ಸುದ್ದಿ, ಜನಕ್ಕೇನು ಇಲಿ ಹೋತು ಅಂದ್ರೆ ಹುಲಿ ಹೋತಡಾ ಹೇಳ್ತ, ನೀಲೇಕಣಿಯಿಂದ ಜಾತ್ಕ ಬಂದಿದ್ದು ಹೌದು.. ಅದು ನಂಗೂ ಗೊತ್ತಿದ್ದು, ಅದ್ನೇ ಹೀಂಗೆಲ್ಲಾ ಸುದ್ದಿ ಮಾಡಿದ್ದ ಅಷ್ಟೇಯಾ ಬಿಡು" ಎಂದು ನುಡಿದು ಬಿರಬಿರನೆ ಬಸ್ಸು ನಿಲ್ದಾಣದ ಕಡೆಗೆ ಹೊರಟರು.

ತಮ್ಮ ಊರಾದ ಮಂಚೀಕೆರೆಗೆ ಬಸ್ಸು ಸಿದ್ಧವಾಗಿದ್ದರೂ, ತಂಗಿಯ ಮನೆಯಾದ ನೀಲಕುಂದದ ಬಸ್ಸು ಹತ್ತಿದರು. ಹೊರಗೆ ಬೀಸುತ್ತಿದ್ದ ಮಧ್ಯಾಹ್ನದ ಬಿಸಿ ಗಾಳಿ ಭಟ್ಟರ ಮನದೊಳಗಿನ ಬಿರುಗಾಳಿಯ ಜತೆ ಸ್ಪಂದಿಸುವಂತಿತ್ತು. 'ಅಲ್ಲಾ .. ಯನ್ನ ಕಣ್ಮುಂದೆ ಬೆಳ್ದ ಹುಡ್ಗ. ಆನು ಸೋದ್ರಮಾವ ಯನ್ನೂ ಕೇಳ್ದೆ ತಾನೇ ನಿಶ್ಚಯ ಮಾಡ್ಕಂಡು ಬಡಪಾಯಿ ಅಪ್ಪ ಆಯಿನೂ ಒಪ್ಸಿಕ್ಕು. ಅಂವ ಓದ್ಬೇಕಿದ್ರೆ ಸಾಲಕ್ಕೆ ರುಜು ಹಾಕ್ದಂವ ಹೇಳೂ ಉಪಕಾರಕ್ಕಾದ್ರೂ ನನ್ನ ಮಗ್ಳ ಬಗ್ಗೆ ಯೋಚ್ನೆ ಮಾಡ್ಲಾಗಿತ್ತು. ನಮ್ಮ ರಾಧಾಂಗೆ ಏನು ಕಡ್ಮಿ ಆಜಪ್ಪಾ? ಸ್ವಲ್ಪ ಕಡಿಮೆ ಓದಿಕ್ಕು, ಆದ್ರೆ ಮನೆ ಹುಡ್ಗಿನೇಯಾ...ಎಲ್ಲಾ ಹೋಗಿ ಆ ಕೂಸನ್ನ ಕಟ್ಕಂಬಲೆ ಹೊರ್ಟಿದ್ದ, ಶತಃ ಮುಠ್ಠಾಳನೇ ಸರಿ. ಇರ್ಲಿ, ಯಾನು ಸುಮ್ನೆ ಕೂರ್ತನಿಲ್ಲೆ, ಇದ್ಕೊಂದು ಉಪಾಯ ಮಾಡೇ ತೀರ್ತೆ, ಸುಮ್ನೆ ಜನ ಯನ್ನ ಶುಂಠಿ ಭಟ್ಟ ಹೇಳ್ತ್‌ವಿಲ್ಲೆ...ಈಗ್ಲೇ ಸರಿ ಸಮಯ.. ಒಂದ್ ಕೈ ನೋಡೇಬುಡ್ತ್ವಾ' ಎಂದೆಲ್ಲಾ ಮನದಲ್ಲೇ ಮಂಡಿಗೆ ತಿನ್ನುತ್ತಾ ತಂಗಿಯ ಮನೆಕಡೆ ಹೆಜ್ಜೆ ಹಾಕಿದರು.

ನೀಲಕುಂದದ ರಾಮಶಾಸ್ತ್ರಿ – ಜಾನಕಮ್ಮನವರಿಗೆ ಇಬ್ಬರು ಮಕ್ಕಳು. ಮೊದಲನೆಯವ ಮಗ ರಾಜೀವ, ಎರಡನೆಯವಳು ಮಗಳು ರೂಪ. ಮನೆಯಲ್ಲಿ ಹೇಳಿಕೊಳ್ಳುವಂಥ ಆಸ್ತಿಯೇನೂ ಇರಲಿಲ್ಲ. ಮೂಲ ಮನೆ ಪಾಲಾದ ಮೇಲಂತೂ ಕಷ್ಟದ ಹೊರೆ ಮತ್ತಷ್ಟು ಹೆಚ್ಚಿತ್ತು. ಇದ್ದ ಒಂದು ತುಂಡು ತೋಟದಲ್ಲೇ ಜೀವನ ಸಾಗಬೇಕಿತ್ತು. ಹೀಗಿರುವಾಗ ಮಗಳ ಮದುವೆ, ಮಗನ ಇಂಜಿನೀಯರಿಂಗ್ ಓದು ಎಲ್ಲವನ್ನೂ ತೂಗಿಸಿಕೊಂಡು ಹೋಗುವುದು ಅಸಾಧ್ಯವಾಗಿತ್ತು. ಮಗಳ ಮದುವೆಯನ್ನಂತೂ ಹೇಗೋ ಸಾಲ–ಸೋಲ ಮಾಡಿ ತಕ್ಕುದಾದ ಕಡೆಗೆ ಸಾಗಿಸಿದ್ದರು. ಆದರೆ ಮಗನ ಓದಿಗೆ ಮಾತ್ರ ಕೈ ಸಂಪೂರ್ಣ ಬರಿದಾಗಿತ್ತು. ಸ್ವಭಾವತಃ ಶಾಸ್ತ್ರಿಗಳು ಒಳ್ಳೆಯವರಾಗಿದ್ದರೂ..ಸ್ವಲ್ಪ ಸ್ವಂತಿಕೆ ಕಡಿಮೆ. ಬಹಳ ಬೇಗ ಮತ್ತೊಬ್ಬರ ಮಾತಿಗೆ ಕಿವಿಕೊಡುತ್ತಿದ್ದರು. ಪತ್ನಿ ಜಾನಕಮ್ಮನೂ ಅಷ್ಟೇ ಅಷ್ಟೊಂದು ವ್ಯವಹಾರಸ್ಥಳಲ್ಲ. ತಾನಾಯಿತು, ತನ್ನ ಮನೆಕೆಲಸಗಳಾಯಿತು. ಹಾಗಾಗಿ ರಾಜೀವನೇ ತನ್ನ ಓದಿಗಾಗಿ ಪರದಾಡಬೇಕಾಯಿತು. ಸಹಾಯ ಕೇಳಲು ಯಾವ ಬಂಧುವೂ ಬಳಿ ಬರಲಿಲ್ಲ. ಮನೆಯ ದೊಡ್ಡಪ್ಪ , ಚಿಕ್ಕಪ್ಪಂದಿರೆಲ್ಲ ತಮ್ಮ ತಾಪತ್ರಯ ತೋರಿ ಕೈಜಾರಿದರೆ, ಸೋದರ ಮಾವನಾದ ಶ್ಯಾಂ ಭಟ್ಟ ನೆಟ್ಟಗೆ ಕೈ ಆಡಿಸಿಬಿಟ್ಟ.

ಜಾನಕಮ್ಮನವರ ಏಕಮಾತ್ರ ಸಹೋದರನಾದ ಶ್ಯಾಂ ಭಟ್ಟರು ಅವರ ಊರಾದ ಮಂಚಿಕೆರೆಗೇ ಏನು, ಸುತ್ತಲಿನ ನಾಲ್ಕು ಊರುಗಳಲ್ಲಿ ಭಾರೀ ಕುಳವೆಂದೆನಿಸಿದ್ದರು. ಅಪ್ಪ ಬಿಟ್ಟು ಹೋದ ಆಸ್ತಿಗೆ ತಮ್ಮ ಕುತಂತ್ರ ಬುದ್ಧಿ ಸೇರಿಸಿ ಬಡ್ಡಿ ವ್ಯಾಪಾರದ ಮೂಲಕ ಮತ್ತಷ್ಟು ಬೆಳೆಸಿದ್ದರು. ಮನೆಯಲ್ಲಿ ಸಾಕಷ್ಟಿದ್ದರೂ ದುಡ್ಡೊಂದನ್ನು ಬಿಟ್ಟು ಅವರ ಬಳಿ ಏನೂ ಇರಲಿಲ್ಲವೆನ್ನಬಹುದು. ಅವರ ಹುಳುಕು ಬುದ್ಧಿ, ದರ್ಪಕ್ಕೆ ಜನ ದೂರವಾಗಿದ್ದರು. ಇತರರ ಏಳಿಗೆಯನ್ನು ಬಯಸದ ಅವರ ಮನಸ್ಸು ಊರ ಸಜ್ಜನರಿಂದ ಅವರನ್ನು ದೂರವಾಗಿಸಿತ್ತು. ಇನ್ನು ಹೆಂಡತಿ ಸಾವಿತ್ರಿ ಗಂಡನ ಸ್ವಭಾನಕ್ಕನುಗುಣವಾಗಿ ಗೈಯ್ಯಾಳಿ, ಯಾರ ಜೊತೆಗೂ ಸುಲಭವಾಗಿ ಸೇರಿಬರದು. ಇನ್ನು ಓರ್ವ ಮಗ ಶ್ರೀಪತಿ, ಶುದ್ಧ ಪೋಲಿ. ಹತ್ತನೇ ತರಗತಿಯನ್ನೂ ನೆಟ್ಟಗೆ ಓದದೇ ಉಡಾಳನಾಗಿ,ಹೆತ್ತವರ ದುರ್ಗುಣಗಳನ್ನೆಲ್ಲಾ ಮೈಗೂಡಿಸಿಕೊಂಡು ಬೆಳೆದವ. ಎರಡನೆಯವಳೇ ಮಗಳು ರಾಧಾ. ಅಣ್ಣನಷ್ಟು ದುರ್ಗುಣ ಬೆಳೆಸಿಕೊಂಡಿರದಿದ್ದರೂ, ಅಮ್ಮನ ಸದ್ಗುಣಗಳಲ್ಲಿ ಹಲವು ಅವಳನ್ನೂ ಸೇರಿದ್ದವು. ಹೀಗಿರುವಾಗ ಒಮ್ಮೆ ಅಳಿಯ ರಾಜೀವ ಕಷ್ಟದಿಂದ ಮಾವನ ಬಳಿ ಸಹಾಯಕ್ಕೆ ಬಂದಾಗ ತುಂಬಾ ಒರಟಾಗಿ ನಡೆದುಕೊಂಡರು. ತಮ್ಮ ಮಗನಿಗೇ ಓದಲು ಬಾರದ ವಿದ್ಯೆ ಈತನೇನು ಓದುವ ಎಂಬ ಉಡಾಫೆಯ ಭಾವ ಅವರದಾಗಿತ್ತು.

ಆದರೂ ಕೊನೆಗೆ ತಂಗಿಯ ಅಂಗಲಾಚುವಿಕೆಗೆ ತುಸು ಬಾಗಿ ರಾಜೀವನ ಓದಿನ ಸಾಲಪತ್ರಕ್ಕೆ ಮಾತ್ರ ತಮ್ಮ ರುಜುಹಾಕಿ ಪುಣ್ಯ ಕಟ್ಟಿಕೊಂಡೆನೆಂದು ಬೀಗಿದರು.

'ಅಳಿಯ ರಾಜೀವ ಈಗ ಸ್ವಂತಿಕೆಯ ಮೇಲೆ ಓದಿ, ಒಳ್ಳೆಯ ಹುದ್ದೆಯನ್ನಲಂಕರಿಸಿರುವ. ಮನೆಯ ಪರಿಸ್ಥಿತಿಯೂ ಸುಧಾರಿಸಿದೆ. ಹಾಗಾಗಿಯೇ ಭಟ್ಟರ ಬುದ್ಧಿ ಅತ್ತ ಓಡಿತ್ತು. ತಮ್ಮ ಮಗಳನ್ನು ಹೇಗಾದರೂ ಅವನಿಗೆ ಧಾರೆ ಎರೆದು ಕೊಟ್ಟರೆ ಗೆದ್ದಂತೆ, ಹೇಗೂ ಗೊತ್ತಿರುವ ಹುಡುಗ, ಹೆತ್ತವರಂತೂ ಲೋಕಾನೀತಿ ಅಷ್ಟಾಗಿ ತಿಳಿಯದ ಬೋಳರು, ಹುಡುಗ ಕ್ರಮೇಣ ತಮ್ಮ ಮನೆಗೂ ದಿಕ್ಕಾಗುತ್ತಾನೆ, ಮಗನಂತೂ ಹಾಳಾದ, ಮನೆ-ಮಠ ನೋಡಿಕೊಳ್ಳಲು ಒಬ್ಬ ಉತ್ತಮ ಮನೆ ಅಳಿಯ ಸಿಕ್ಕಂತಾಗುತ್ತದೆ..'- ಎಂಬೆಲ್ಲಾ ದೂ(ದು)ರಾಲೋಚನೆ ಮಾಡಿ, ಒಳ್ಳೆಯ ದಿನದಂದು ಪ್ರಸ್ತಾಪ ಮಾಡಬೇಕೆಂದಿರುವಾಗಲೇ ಈ ಸುದ್ದಿ ಬರಸಿಡಿಲಿನಂತೆ ಅವರ ಪಾಲಿಗೆ ಎರಗಿತ್ತು. ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗುತ್ತದಲ್ಲಾ ಎಂದು ಅವರ ಜೀವ ಕುದಿಯಿತು. ಮತ್ಸರದ ಜ್ವಾಲೆ ಭುಗಿಲ್ಲೆನ್ನಲು ಬುದ್ಧಿ ಹೊಸ ಬಲೆಯೊಂದನ್ನು ಹೆಣೆಯತೊಡಗಿತು.

"ಹೌದನೇ.. ಆನು ಇಲ್ಲೇ ತೋಟದ ಕಡೆಗೆ ಹೋಗಬತ್ತಿ ಮನಿಕಡೆ ಹುಶಾರು..." ಎಂದು ಹೆಂಡತಿಗೆ ಕೂಗಿದ ಶಾಸ್ತ್ರಿಗಳು ಅಂಗಳ ಇಳಿಯುವುದಕ್ಕೂ ಭಾವ ಶ್ಯಾಂ ಭಟ್ಟ ದಣಪೆ ದಾಟಿ ಬರುವುದಕ್ಕೂ ಸಮವಾಯಿತು. "ಓಹೋ..ಶ್ಯಾಂ ಭಾವ ದಯಮಾಡ್ಸವು.. ಬ್ಹಾಳ್ ಅಪರೂಪ ಆಗೋದ್ಯಲ್ಲೋ ಮಾರಾಯಾ! ಇದ್ದೊಬ್ಬ ತಂಗಿ ಮನೆನೇನೂ ಮರ್‍ತೋತ ಎಂತದು ಮತ್ತೆ? ಈಗಾದ್ರೂ ಬಂದ್ಯಲ್ಲ..ಬಾ ಒಳ್ಗೆ.. ಹೌದನೇ ಯಾರು ಬಂಜ ನೋಡು" ಎಂದು ಅಪರೂಪದ ಭಾವನನ್ನು ಸಂಭ್ರಮದಿಂದ ಸ್ವಾಗತಿಸಿದರು. ಅಲ್ಲೆ ಕಲ್ಲಿನ ತೊಟ್ಟಿಯಲ್ಲಿ ತುಂಬಿದ್ದ ನೀರಿನಿಂದ ಕಾಲೊತೊಳೆದ ಭಟ್ಟರು ಒಳಜಗಿಲಿಗೆ ಬಂದು ಹಾಸಿದ್ದ ಕಂಬಳಿಯಮೇಲೆ ಕುಳಿತು ವಿಶ್ರಮಿಸಲು ತಂಗಿಯ ಆಗಮನವಾಯಿತು. "ಹೋ..ಅಣ್ಣಯ್ಯ! ಆರಾಮನೋ? ಮನೇಲೆಲ್ಲಾ ಹುಶಾರಿದ್ವಾ? ತಿಂಗ್ಳ ಮೇಲಾತು ನೋಡು ಬಂದು...ಅಷ್ಟೊಂದು ಕೆಲ್ಸನಾ ನೋಡಾವಾ?" ಎಂದು ಅನುನಯದಿಂದ ಅಣ್ಣನ ವಿಚಾರಿಸಿದಳು ಜಾನಕಮ್ಮ. ತಂಗಿ ಭಾವರ ಕುಕ್ಕಲತೆ ಕಂಡು ಭಟ್ಟರಿಗೆ ತುಸು ಸಮಾಧಾನವಾಯಿತು, ಅಂತೂ ನನ್ನ ಮರೆತಿಲ್ಲ ಎಂದು. ಇದೇ ತಕ್ಕ ಸಮಯವೆಂದು ಬಗೆದು ಮಾತಿಗೆ ಹಣಿಸಿದರು. "ಹಂ.. ಎಲ್ಲಾ ಆರಾಮೇಯಾ.. ನಾಯೇನೂ ಮರ್‍ತಿದ್ನಿಲ್ಲೆ. ಆದ್ರೆ ನಿಂಗವೇ ಈ ಬಡ ಭಟ್ಟನ ಮರ್‍ತಾಂಗಿದ್ದು... ಹೇಂಗೆ ನೆನ್ಪು ಬರ್‍ತು ಹೇಳು? ಈಗೆಷ್ಟಂದ್ರು ನಿಂಗವು ಮೇಲೋಜ್ರೆ..ಕೈತುಂಬಾ ದುಡ್ಡು ಎಣ್ಸು ಮಗ ಕೈಗೆ ಬಂಜ! ನಾವೆಲ್ಲಾ ಎಲ್ಲಿ ಕಾಣ್ಸತ್ತೋ?" ಎಂದು ಒಮ್ಮೆಲೇ ಒಳಗಿನ ನಂಜನ್ನು ಕಾರಿದರು.

ಅಣ್ಣನ ಸ್ವಭಾವದ ಅರಿವಿದ್ದರೂ ಜಾನಕಮ್ಮನಿಗೆ ಅವನ ಮಾತುಗಳಿಂದ ತುಸು ಬೇಸರವಾಯಿತು. "ಎಂಥ ಹೇಳ್ತೆ ಅಣ್ಣಯ್ಯ!!.. ನಂಗ್ಳ ಬಗ್ಗೆ ನಿಂಗೊತ್ತಿಲ್ಯ?..ಕಷ್ಟ ಬಂದಾಗ್ಲೂ ಯಾರಲ್ಲೋ ಹೇಳ್ಕಂಬ್ಲೆ ಹೋಜ್ವಿಲ್ಲೆ ..ಈಗ ದುಡ್ಡು ಬತ್ತಾ ಇದ್ದು ಹೇಳೂ ಬೀಗ್ತಾ ಇಲ್ಲೆ. ಅಂವ ದುಡಿತ, ಅಪ್ಪ ಆಯಿ ಹೇಳಿ ಸಾಕ್ತ; ಈ ವಯಸ್ಸಲ್ಲಿ ನೆಂಟರಿಷ್ಟರ ದೂರಮಾಡಲಾಗ್ತಾ?.. ಅದೆಲ್ಲ ಬಿಡು, ನಿಂಗೆ ಆಸರಿಗೆ ಎಂತ ಅಕ್ಕು ಹೇಳು?" ಎಂದು ತುಸು ಖಾರವಾಗಿಯೇ ಪ್ರತಿಕ್ರಿಯಿಸಲು ಭಟ್ಟರು ಮೆತ್ತಗಾದರು. "ಆಸರಿಗೆಲ್ಲಾ ಅಮೇಲಾತು..ನಂಗೆ ನಿಂಗ್ಳ ಹತ್ರ ಸ್ವಲ್ಪ ತುರ್ತು ಮತಾಡಾದಿದ್ದು.. ನೀನೂ ಇಲ್ಲೆ ಕುಂತ್ಗ ಬಾ.." ಎಂದು ಅವಸರಿಸಲು ಶಾಸ್ತ್ರಿ ದಂಪತಿಗಳಿಗೆ ಆಶ್ಚರ್ಯವೇವಾಯಿತು. ಅವರಿಗೆ ಎದುರಾಗಿ ಕುಳಿತು ಮುಂದಿನ ಮಾತಿಗಾಗಿ ಕಾಯತೊಡಗಿದರು.

ತಮ್ಮ ಎಡಗಾಲನ್ನೆತ್ತಿ ಬಲಗಾಲಮೇಲಿಟ್ಟುಕೊಂಡು ಸೊಂಟಕ್ಕೆ ಸಿಕ್ಕಿಸಿದ್ದ ನಶ್ಯದ ಡಬ್ಬಿಯನ್ನು ತೆಗೆದು, ತುಸು ನಶ್ಯವನ್ನು ಬಲ ಮೂಗಿಗೆ ಏರಿಸಿ ಮಾತಿಗೆ ತೊಡಗಿದರು ಭಟ್ಟರು. "ನೋಡು ಭಾವ ಆನು ನೇರ ಮನುಷ್ಯ.. ಇದ್ದದ್ದನ್ನ ಇದ್ದಾಂಗೇ ಹೇಳ್‌ಬುಡ್ತಿ..ಯಂಗೆ ಯಾರಿಗೂ ಕೆಟ್ಟದ್ ಮಾಡಿ ಗೊತ್ತಿಲ್ಲೆ ..ಆದ್ರೂವಾ ಕೆಲವು ಜನ ಯನ್ನ ಬಗ್ಗೆ ಸುಮ್ನೆ ಅಪಪ್ರಚಾರ ಮಾಡಿದ್ದ.. ನಿಂಗಳ ಒಳ್ಳೇದಕ್ಕೆ ಹೇಳ್ತಾ ಇದ್ದಿ ಹಾಂಗಾಗಿ ಗಮನ ಇಟ್ಟು ಕೇಳ್ಕಳಿ ಗೊತ್ತಾತಾ?" ಎಂದು ಹೇಳಿ ದೀರ್ಘವಾದ ಉಸಿರೊಂದು ಬಿಟ್ಟು..ಮತ್ತೊಮ್ಮೆ ನಶ್ಯವನ್ನು ಎಡಮೂಗಿಗೆ ಏರಿಸಿದರು. "ಅಲ್ಲ ..ಯನ್ನ ಮಗ್ಳು ರಾಧಾಂಗೆ ಎನ್ ಕಡ್ಮೆ ಆಜು ಹೇಳಿ? ಕುರಡಿನೇ? ಕುಂಟೀನಾ? ನೋಡಲೆ ಭೋಲೋನೇ ಇದ್ದು. ತಕ್ಕಮಟ್ಟಿಗೆ ಓದ್ಕಂಜು.. ಮುಂದೆ ಓದವು ಹೇಳಿ ಮಾಡ್ಕಂಡಿತ್ತು ಪಾಪ ಆದ್ರೆ ಮನೆಕಡೆ ಸಾವಿತ್ರಿ ಒಬ್ಬೇ ಆಗ್ತು ಹೇಳಿ ಹೋಜಿಲ್ಲೆ. ಹೇಳ್ಕೊಟ್ರೆ ಎಂಥ ಕೆಲ್ಸನೂ ಕಲ್ತ್ಕತ್ತಪ ! ಅದೆಂಥದೋ ಕಂಪ್ಯೂಟರ್ ಅದ್ನೂ ಬೇಕಾರೆ ಕಲೀತು.. ಗುಣ ಅಂತೂ ನಿಂಗವೇ ನೋಡಿದ್ರಿ.. ಅಮ್ಮ ಹೇಳ್ದಾಂಗೆ ಕೇಳ್ಕ ಇರ್ತು. ಸುಮ್ನೆ ಯನ್ನ ಕೂಸು ಹೇಳಿ ಹೊಗ್ಳಕಂಬದಲ್ಲ..ನಿಂಗವೇನೂ ಬೇರೆ ಅಲ್ಲ.. ಹೀಂಗಿರಕರೆ ಅದ್ರನ್ನ ಬಿಟ್ಟು ಬೇರೇ ಯಾವ್ದೋ ಕಂಡರಿಯ್ದ ಹುಡ್ಗೀನ ಸೊಸೆ ಮಾಡ್ಕಳಲೆ ಹೊರ್ಟಿದ್ದು ಎಷ್ಟ ಸರಿ ಹೇಳಿ? ಯಂಗೆ ಹೇಂಗಾಗಿರಡ? ಹ.... ಇದ್ದೊಬ್ಬ ಅಣ್ಣನ್ನೂ ಒಂದ್ ಮಾತು ಕೇಳವು ಅನ್ನಿಸ್ದಿಲ್ಯ ನಿಂಗೆ ಜಾನಕಿ? ಎಂದು ಮುಖವನ್ನೆಲ್ಲಾ ಕೆಂಪಾಗಿಸಿ ಮತ್ತೊಮ್ಮೆ ನಶ್ಯವನ್ನೇರಿಸಿದರು. ಭಾವನ ವಾಕ್ ಧಾಳಿಗೆ ಹೆದರಿದ ಶಾಸ್ತ್ರಿಗಳು ಮೌನವೇ ಲೇಸೆಂದು ಕುಳಿತರು. ಇವರ ಮೌನದಿಂದ ತನ್ನ ಮಾತುಗಳು ಸರಿ ದಾರಿಯತ್ತ ಸಾಗುತ್ತಿದೆ ಎಂದೆಣಿಸಿ ತುಸು ತಣ್ಣಗಾದರು ಭಟ್ಟರು. ಪಕ್ಕದಲ್ಲೇ ಇಟ್ಟಿದ್ದ ತಂಬಿಗೆಯ ನೀರಿನ್ನು ಗಟಗಟಿಸಿ.. ಗಂಟಲನ್ನೊಮ್ಮೆ ಕೆಮ್ಮಿ ಸರಿಮಾಡಿಕೊಂಡರು. ಅವರ ಪ್ರವರ ಮತ್ತೆ ಶುರುವಾಯಿತು.

“ಬೇಜಾರಾಗಾಡಿ.. ಎನೋ ಹೆಣ್ಣ ಹೆತ್ತ ಸಂಕಟ, ಅಳಿಯ ಹೇಳೂ ಅಭಿಮಾನ ಸೇರಿ ಸ್ವಲ್ಪ ಗಟ್ಟಿ ಮಾತಾಡ್ತುಟೆ. ಈಗ ನಿಂಗವೇ ಯೋಚ್ನೆ ಮಾಡಿ. ಕಣ್ಮುಂದೆ ಬೆಣ್ಣೆ ಇಟ್ಕಂಡು ಊರೆಲ್ಲಾ ತುಪ್ಪಕ್ಕೆ ಹುಡ್ಕದು ಬುದ್ಧಿವಂತರ ಲಕ್ಷಣನಾ? ಹ್ಞ..ಆ ನಿರಂಜನ ಭಟ್ಟ ೧೫ ವರ್ಷ ಮಕ್ಳೇ ಆಗ್ದೇಯಾ ದತ್ತು ತಗಂಡ ಕೂಸು ಅದು. ಅದ್ರಲ್ಲೂ ಪೋಲಿಯೋ ಆಗಿ ಒಂದ್ ಕಾಲು ರಾಶಿನೇ ಕುಂಟಡ. ನಮ್ಮ ರಾಧಾನೇ ಒಂದ್ಸಲ ಶಿರಸಿ ಪೇಟೇಲಿ ನೋಡಿತ್ತಡಪ.. ರಾಶಿ ಸೊಕ್ಕ್ಯೂವಡ. ಅಂಥ ಕುಲಗೋತ್ರ ಇಲ್ದ ಹುಡ್ಗೀನಾ ಆ ಮುಠ್ಠಾಳ ರಾಜೀವ ಮದ್ವೆ ಆಗ್ತಿ ಹೇಳ್ತ, ಅದ್ಕೆ ನಿಂಗವೂ ಕೋಲೇ ಬಸ್ವನ್ ಹಾಂಗೆ ಹೂಂ ಹೇಳ್ತ್ರಿ. ಜಾನಕಿ ನೀ ಆದ್ರೂ ಬುದ್ಧಿ ಹೇಳದಲ್ದಾ? ನಿನ್ನ ರಾಶಿನೇ ಹಚ್ಕಂಜ ಅಂವ. ಭಾವ ನೀನೂ ರಾಶಿ ಮೆದೂಕಾದೆ ನೋಡು. ಮುಂದಿನ ತಿಂಗ್ಳೇ ಲಗ್ನ ಬೇರೆ ಇಡ್ಸಲೆ ಒಪ್ಪಿದೆ. ಆ ನಿರಂಜನ ಭಟ್ಟ ಸಾಮಾನ್ಯನಲ್ಲ. ಭಾರೀ ಕುಳ. ಗಂಡು ದಿಕ್ಕಿಲ್ದಂವ. ನಾಳೆ ರಾಜೀವ್ನ ತಲೆ ತಿರಗ್ಸಿ ತನ್ನ ಕಡೆ ಎಳ್ಕಂಡು ಮನೆ ಅಳಿಯನ್ನಾಗಿ ಮಾಡ್ಕಂಡ್ರೆ ನಿಂಗ್ಳ ಕೈಗೆ ಚಿಪ್ಪೇ ಸರಿ!!ಆ ಮಳ್ಳ್‌ಕೂಸ್ನ ಯೋಚ್ನೆ ಬಿಟ್ಟಿ, ಈ ಕಡೆನೂ ನೋಡಿ ಮತ್ತೆ!” ಎಂದು ಹೇಳಿ ಹೆಗಲಿನ ಶಾಲನ್ನು ತೆಗೆದು ಜೋರಾಗಿ ಒಮ್ಮೆ ಕುಡುಗಿದ ಶ್ಯಾಂ ಭಟ್ಟ.

ಭಾವನ ಮಾತುಗಳಿಂದ ತುಂಬಾ ಪ್ರಭಾವಿತರಾದ ಶಾಸ್ತ್ರಿಗಳು ಅವರು ಬೀಸಿದ ಬಲೆಗೆ ಬೀಳತೊಡಗಿದರು. ಅವರಂದಂತೆ ಮಗ ಎಲ್ಲಿ ಕೈಮೀರುವನೋ ಎಂದು ಹೆದರಿದರು. ಹಾಗಾಗಿಯೇ ಮೌನ ಮುರಿದು ತಮ್ಮ ಮನದಾಳವನ್ನು ಭಾವನ ಎದುರು ತೆರೆದಿಟ್ಟರು. “ಅಯ್ಯೋ ಶ್ಯಾಂ ಭಾವ ಎಂಥ ಹೇಳದು ನಂಗ್ಳ ಕಷ್ಟನಾ? ಯಂಗಕಗೂ ಈ ಮದ್ವೆ ಅಷ್ಟು ಇಷ್ಟ ಇಲ್ಲೆ. ರಾಜೀವಂಗೆ ಹೇಳ್ವಷ್ಟೆಲ್ಲಾ ಹೇಳಾತು..ಆದ್ರೆ ಅಂವದು ಒಂದೇ ಹಠ ಮದ್ವೆ ಆದ್ರೆ ಆ ಸೀಮಾನ್ನ ಇಲ್ದೆ ಹೋದ್ರೆ ಜೀವನಾ ಪೂರ್ತಿ ಮದ್ವೆ ಇಲ್ದೆ ಇರ್ತಿ ಹೇಳಿ..ಇದೇ ಬೇಜಾರಲ್ಲಿ ಯಂಗ್ಳಿಂದ ದೂರಾದ್ರೆ ಈ ಮುದಿ ವಯಸ್ಸಲ್ಲಿ ಎಲ್ಲಿಗೆ ಹೋಗವು ಹೇಳು? ಆ ಕೂಸು ಎಂಥ ಮೋಡಿ ಮಾಡಿದ್ದೋ ಏನೋ!! ಎಲ್ಲಾ ನಮ್ಮ ಪ್ರಾರಾಬ್ಧ ಅಷ್ಟೇಯಾ..” ಎಂದು ಪತ್ನಿಯ ಮುಖದ ಕಡೆ ಅಸಹಾಯಕ ನೋಟ ಬೀರಲು ಜಾನಕಮ್ಮನೂ ತಮ್ಮ ದನಿಗೂಡಿಸಿದರು. “ಅಣ್ಣಯ್ಯ.. ನೀ ಹೇಳದೂವಾ ಒಂದ್ ರೀತಿ ಸರಿ ಇದ್ದು. ಆದ್ರೆ ಮದ್ವೆ ಅಂವ ಆಗ್ತಾ ಇಪ್ಪದು.. ನಾವೇನೂ ಇನ್ನು ಸ್ವಲ್ಪ ವರ್ಷ ಬದ್ಕತ್ಯ. ಅಂವ್ನ ಮನಸಿಗೆ ನೋವಾಗ್ಲಾಗಾ ಹೇಳಿ ಸುಮ್ನಾದಿ. ನಾನೇ ಇವ್ರ ಹತ್ರನೂ ಒಪ್ಗೆ ಕೊಡಲೆ ಹೇಳ್ದಿ. ಎಲ್ಲಾ ದೈವಿಚ್ಛೆ .. ಎಂತ ಮಾಡಾದು?” ಎಂದು ತಮ್ಮ ಬೇಸರವನ್ನೂ ಹೇಳಿಕೊಂಡಳು. ತಂಗಿ, ಭಾವನ ಮಾತುಗಳಿಂದ ಭಟ್ಟರಿಗೆ

ನೂರು ಆನೆಯ ಬಲ ಬಂದಂತಾಯಿತು. ಆವರಿಬ್ಬರಲ್ಲಿಯೂ ಅಡಕವಾಗಿದ್ದ ಅಸಮಾಧಾನವನ್ನೇ ಬಂಡವಾಳವನ್ನಾಗಿಸಿಕೊಂಡು ದೊಡ್ಡದೊಂದು ಬಲೆಯನ್ನೇ ಬೀಸಲು ಮೊದಲಿಟ್ಟರು.

"ಸರಿಯಾತು.. ಬರೀ ಮಾತಲ್ಲೇ ಕಳ್ಸವು ಮಾಡಿದ್ಯ ಹೇಂಗೆ.. ನೀ ಒಳ್ಗೆ ಹೋಗಿ ಇನ್ನು ಆಸರಿ ತಯಾರಿಗೆ ಶುರು ಹಚ್ಕೊ.. ಈಗ ಹಶ್ವು ಆತು ನೋಡು. ಯಾನು ಇನ್ನೂ ಸ್ವಲ್ಪ ಭಾವನ ಹತ್ರ ಮಾತಾಡಿ ಬತ್ತಿ. ಬೆಗ್ನೆ ಊರಿಗೆ ಬೇರೆ ಹೋಗವು. ಆ ಶಂಕರ ಹೆಗಡೆರು ರಾತ್ರಿ ೮ ಗಂಟೆಗೆ ಶಿರಸಿ ಕಡೆ ಹೋಗ್ತಿ ಹೇಳಿದ್ರು,ಆನು ಅವ್ರ ಜೊತಿಗೆ ಹೋಗ್ತಿ, ಹೇಂಗಿದ್ರೂ ಅವ್ರ ಕಾರಿದ್ದು ..." ಎಂದೆಲ್ಲಾ ಹೇಳಿ ಉಪಾಯವಾಗಿ ತಂಗಿಯನ್ನು ಒಳಸಾಗಿಸಿದ ಭಟ್ಟರು ಶಾಸ್ತ್ರಿಗಳ ಸಮೀಪಕ್ಕೆ ಸರಿದರು. " ಅಲ್ದೋ ಭಾವ ನಿಂಗವು ಹೀಂಗೆ ಎಲ್ಲದ್ನೂ ದೇವರಿಗೆ ಬಿಟ್ಟಿದ್ದು ಹೇಳಿ ಕೈಚೆಲ್ಲಿ ಕುಳತ್ಕಂಡ್ರೆ ಎಂಥ ಆಗು ಹೇಳು? ನಮ್ಮ ಪ್ರಯತ್ನ ನಾವು ಮಾಡವಪ..ದೇವ್ರು ಆಗ ಫಲ ಕೊಡ್ತ. ಅಂಥ ಹುಡ್ಗಂಗೆ ಇಂಥ ಹುಡ್ಗಿ ನೆಂಟಸ್ತಿಕೆನಾ ಹೇಳಿ ನಾಳೆ ಊರ ಜನ ಹತ್ತ ಮಾತಾಡ್ತ. ಆವಾಗ ನಿಂಗಕಿಗೆ ಎಂತ ಮಾಡಾಲೂ ಆಗ್ತಿಲ್ಲೆ , ತಿಳ್ಕಳಿ. ಇನ್ನೂ ಕಾರ್ಯ ಮಿಂಚಿದ್ದಿಲ್ಲೆ. ನೀ ಹೂಂ ಹೇಳು ರಾಜೀವ ಆ ಹುಡ್ಗಿ ಕಡೆ ಕಣ್ಣೆತ್ತಿನೂ ನೋಡ್ದೆ ಹೋದಾಂಗೆ ಮಾಡ್ತನಪ..ಮೊದಲು ನೀ ಗಟ್ಟಿಯಾಗಾವು ನೋಡು.. ನನ್ನ ಒತ್ತಾಯಕ್ಕೆ ಒಪ್ಪದು ಬೇಡ ಮತ್ತೆ" ಎಂದು ಬೆಣ್ಣೆಯಿಂದ ಕೂದಲು ತೆಗೆದಂತೆ ತಮ್ಮ ಮಾತನ್ನು ಮುಂದಿಟ್ಟರು. ಈಗಾಗಲೇ ಸಾಕಷ್ಟು ಅವರ ಮಾತಿನ ಮೋಡಿಗೊಳಗಾಗಿದ್ದ ಶಾಸ್ತ್ರಿಗಳು "ಹೂಂ.. ನೀ ಹೇಳದ್ದೂ ಸರೀನೇಯಾ. ಯಂಗು ಅನಸ್ತು ಆ ಕೂಸು ಬೇಡ ಹೇಳಿ. ಆದ್ರೆ ಈಗೆಂತ ಮಾಡವು ನಂಗವು? ನಿರಂಜನ ಭಟ್ಟರಿಗೆ ಬೇರೆ ಮುಂದಿನ ತಿಂಗ್ಳೇ ಬಪ್ಪಲೆ ಹೇಳಿದ್ದಿ..." ಎಂದು ಪೇಚಾಡಲು ಭಟ್ಟರಿಗೆ ಹಾಲು ಕುಡಿದಷ್ಟು ಸಂತಸವಾಯಿತು. ತಾನಂದುಕೊಂಡದ್ದು ಇಷ್ಟು ಸುಲಭವಾಗಿ ಕೈಗೂಡುವುದೆಂದು ಅವರು ಎಣಿಸಿರಲಿಲ್ಲ.

"ಸರಿ ಹಂಗರೆ. ಈಗ ನಾ ಹೇಳೂದ್ನ ಸರಿಯಾಗಿ ಕೇಳಸ್ಕ್ಯ, ಆದ್ರೆ ಜಾನಕಿ ಹತ್ರ ಮಾತ್ರ ಹೇಳಿಕಡ. ಅದ್ಕೆ ಗೊತ್ತಾಗಲಾಗ ಹೇಳೇ ಅದ್ರನ್ನ ಒಳ್ಗೆ ಕಳ್ಸಿದ್ದು. ಹೆಂಗಸ್ರ ಬಾಯಲ್ಲೆಂತೂವಾ ನಿಲ್ತಿಲ್ಲೆ ನೋಡು. ಹ್ಞಂ.. ಈಗ ನೀ ಒಂದ್ ಕೆಲ್ಸ ಮಾಡು. ನಾಳೆ ಬೆಳ್ಗನ ಬಸ್ಸಿಗೇನೇಯಾ ಹುತ್ಗಾರಿಗೆ ಹೋಗು. ಅಲ್ಲಿ ಕುಪ್ಪಣ್ಣ ಜೋಯಿಸರು ಹೇಳಿದ್ರು. ಯಂತ್ರ-ತಂತ್ರ-ಮಂತ್ರದಲ್ಲಿ ಹತ್ತೂರಲ್ಲೇ ಅವ್ರನ್ನ ಮೀರ್ಸವವು ಯಾರೂ ಇಲ್ಲೆ. ನೀನೂ ಅವ್ರ ಹೆಸ್ರು ಕೇಳಿಪ್ಪೆ. ಯನ್ನ ಭಾವಮೈದ್ನ ಜಮೀನಿನ ವಿಷ್ಯದಲ್ಲಿ ಹೋಗಿದ್ನಡ ನೋಡು. ೧೦ ವರ್ಷದ ಅವ್ನ ಸಮಸ್ಯೆ, ೧೦ ದಿನ್ದಲ್ಲಿ ಸರಿಹೋತಡಪ!! ಆನೂ ಬತ್ತಿದ್ದಿ ..ಆದ್ರೆ ನಾಳೆ ಒಂದು ತುರ್ತು ಕೆಲ್ಸ ಇದ್ದು... ಇನ್ನೂ ತಡ ಮಾಡದ್ರಲ್ಲಿ ಅರ್ಥ ಇಲ್ಲೆ, ಹಾಂಗಾಗಿ

ನೀನೇ ಹೋಗವು. ಅವ್ರು ವಶೀಕರಣ ವಿದ್ಯೆಲೂ ಎತ್ತಿದ ಕೈ. ನೀ ಏನೇನೂ ಹೆದ್ರಡ. ಬರೋ ಅಮಾವಾಸ್ಯೆ ಒಳ್ಗೆ ಎಲ್ಲಾ ಮುಗೀತು. ಯಾರಿಗೂ ಏನೂ ಅಪಾಯ ಆಗ್ತಿಲ್ಲೆ. ನೀ ಹೋಗಿ ನಿನ್ನ ಸಮಸ್ಯೆ ಹೇಳ್ಕ. ಮಗ್ನ ತಲೆ ಸಮ ಮಾಡಾಲೆ ಯಂತ್ರ ಕೊಡಲೆ ಹೇಳು. ಅದ್ನ ತಂದು ಉಪಾಯವಾಗಿ ರಾಜೀವನ ಕುತ್ಗೆಗೆ ಕಟ್ಟದೇ ತಡ ನೋಡು. ಅಂವ ಆ ಕೂಸ್ನ ಕಂಡಿದ್ನೇ ಇಲ್ಲೆ ಹೇಳೂ ಹಾಂಗೆ ಮರೀತ..ನಿಂಗ ಹೇಳ್ದ ಹುಡ್ಗೀನೇ ಮದ್ವೆ ಆಗ್ತಿ ಅಂಬ. ಆತು ತಗ. ಯಾ ಅಂತೂ ತಯಾರಿದ್ದಿ. ಮುಂದಿನ ತಿಂಗ್ಳೇ ಲಗ್ನ ಮಾಡಣ. ಹೇಂಗೆ?'' ಎಂದು ತಮ್ಮ ಮೀಸೆಯಾನ್ನು ತೀಡಿದರು. ಆದರೆ ಶಾಸ್ತ್ರಿಗಳು ಮಾತ್ರ ಭಟ್ಟರ ಮಾತಿನಿಂದ ಬಹಳ ಗಾಭರಿಗೊಳಗಾದಂತೆ ಕಂಡರು. ''ಅಲ್ದೋ ಭಾವ ನಾಳೆ ಏನಾರೂ ಹೆಚ್ಚು ಕಮ್ಮಿ ಆದ್ರೆ ನಂಗ್ಳ ಕುತ್ತಗೆಗೇ ಬತ್ತಲೋ..!'' ಎಂದು ಅವರು ಬೆದರಲು, ಭಟ್ಟರು ಮತ್ತೂ ಧೈರ್ಯ ತುಂಬಿದರು. ''ಅಯ್ಯೋ ಮಳ್ಳ.. ಹಾಂಗೆಂತೂ ಆಗ್ತಿಲ್ಲೆ. ಈಗ ನೋಡು.. ಹುಶಾರಿಲ್ಲಗಿದ್ರೆ ಔಷ ಕೊಡ್ತವಿಲ್ಯ? ಹಾಂಗೇಯಪಾ. ಯಾರಿಗೂ ಎಂತದೂ ಗೊತ್ತೇ ಆಗ್ತಿಲ್ಲೆ. ನಿರಂಜನ ಭಟ್ರೂ ತೆಳ್ಕತ್ರು, ಪರಿಸ್ಥಿ ಎಂತದು ಹೇಳಿ. ರಾಧಾನಂಥ ಹೆಣ್ಣಿಗೆ ತಮ್ಮ ಮಗ್ಳು ಸರಿಸಮ ಆಗ್ತಿಲ್ಲೆ ಹೇಳಿ. ನಾಲ್ಕು ಮಾತು ಹೇಳಿ ಸುಮ್ಮನಾಗ್ತ್ರು. ಒತ್ತಾಯ ಮಾಡಿ ಮದ್ವೆ ಮಾಡಲಾಗ್ತಾ? ನೀ ಬೇರೇನೂ ಯೋಚ್ಸದು ಬೇಡ. ದುಡ್ಡು ಕಾಸು ಬೇಕಾರೆ ನಾನೇ ಕೊಡ್ತಿ. ನಾನೂ ನಿಮ್ಮವ್ನೇಯಾ..ನಮ್ಮವೇ ನಮ್ಮವಕೆ ಅಪ್ಪುದು..'' ಎಂಬೆಲ್ಲಾ ಅವರ ಭರವಸೆಯ ನುಡಿಗಳಿಗೆ ಮರುಳಾದ ಶಾಸ್ತ್ರಿಗಳು ಅಂತೂ ಕೊನೆಗೆ ಕೊಂಚ ಅರೆ ಮನಸ್ಸಿನಿಂದಲೇ ಹೋಗಲೊಪ್ಪಿದರು. ತಮ್ಮ ಕೆಲಸವಾಗಲು ಭಟ್ಟರ ಆನಂದಕ್ಕೆ ಪಾರವೇ ಇರದಾಯಿತು. ಬಹು ಸಂತಸದಿಂದಲೇ ತಂಗಿಯ ಜೊತೆಯೂ ಪ್ರೀತಿಯ ಮಾತುಗಳನ್ನಾಡಿ ಈ ಸಿಹಿ ಸುದ್ದಿಯನ್ನು ಸಾವಿತ್ರಿಗೆ ಅರುಹಲು ಮನೆಯದಾರಿ ಹಿಡಿದರು.

ಇತ್ತ ರಾಮ ಶಾಸ್ತ್ರಿಗಳಿಗೆ ನಿದ್ದೆಯೇ ಬರದು. ಕುಪ್ಪಣ್ಣ ಜೋಯಿಸರ ಹೆಸರು ಕೇಳಿದ್ದರೇ ಹೊರತು.. ಅವರನ್ನು ಕಂಡಿರಲಿಲ್ಲ. ಮನದಲ್ಲಿ ವಿಪರೀತ ಗೊಂದಲ, ಯಾವುದೋ ಅವ್ಯಕ್ತ ಭಯ ಮೂಡಲು ಪತ್ನಿಯ ಕಡೆ ನೋಡಿದರು. ಇದಾವುದರ ಪರಿವೆಯೇ ಇಲ್ಲದ ಜಾನಕಮ್ಮ ನೆಮ್ಮದಿಯ ನಿದ್ದೆಗೆ ಜಾರಿದ್ದರು. ಮಗ ಎಲ್ಲಿ ದೂರವಾಗುತ್ತಾನೋ ಎಂಬ ಭಯ ಕ್ಷಣ ಅವರ ಬುದ್ಧಿಗೆ ಮಂಕು ಕವಿಸಿತ್ತು. ಭಟ್ಟರ ಕುತಂತ್ರ ಸರಿಯಾಗಿಯೇ ಕೆಲಸಮಾಡಿತ್ತು.

ಬೆಳಗಾಗುವುದನ್ನೇ ಕಾದ ಶಾಸ್ತ್ರಿಗಳು ಮೊದಲ ಬಸ್ಸಿಗೇ ಕುಪ್ಪಣ್ಣ ಜೋಯಿಸರ ಮನೆಗೆ ಬಂದಿಳಿದರು. ಜೋಯಿಸರ ಹಿರಿಯಮಗ ಶಾಸ್ತ್ರಿಗಳನ್ನು ಆದರದಿಂದ

ಬರಮಾಡಿಕೊಮಡು ಕಂಬಳಿ ಹಾಸಿ ಕೂರಿಸಿದನು. "ಅಪ್ಪಯ್ಯ ಪೂಜೇಲಿ ಇದ್ದ.. ಇನ್ನೇನೂ ಆಗ್ಹೋತು. ಸ್ವಲ್ಪ ಕುಂತ್ಗಳಿ. ಆಸರಿಗೆ ಕಳಸ್ತೆ" ಎಂದು ವಿನಯದಿಂದ ನುಡಿದು ಒಳಹೋದನು. ಸೊಸೆ ತಂದ ಕಷಾಯವನ್ನು ಕುಡಿದು ಸುಧಾರಿಸಿಕೊಳ್ಳಲು ಕುಪ್ಪಣ್ಣ ಜೋಯಿಸರ ಆಗಮನವಾಯಿತು. 'ಶುಭ್ರವಾದ ಬಿಳೀ ಪಂಚೆ, ಅದೇ ಬಣ್ಣದ ತುಸು ತೆಳುವಾದ ಮೇಲುಹೊದಿಕೆ, ಆಗಷ್ಟೇ ಪೂಜೆ ಮುಗಿಸಿದ್ದುದರ ಕುರುಹಾಗಿ ಅಗಲವಾದ ಹಣೆಯ ತುಂಬಾ ಹರಡಿದ್ದ ಮೂರುಪಟ್ಟೆಯ ವಿಭೂತಿ, ಕೊರಳಲ್ಲಿದ್ದ ರುದ್ರಾಕ್ಷಿ ಮಾಲೆ, ಎದುರಿನ ವ್ಯಕ್ತಿಯನ್ನು ಬಗೆದು ನೋಡುವಂಥ ತೀಕ್ಷ್ಣವಾದ ಕಣ್ಣುಗಳು, ಎಪ್ಪತ್ತರ ಹರೆಯದಲ್ಲೂ, ಅಲ್ಪವೂ ಬಾಗದ ಅವರ ದೃಢ ಕಾಯ..ಇಂತಹ ಅಜಾನುಬಾಹು, ತೇಜೋಪುಂಜ ವ್ಯಕ್ತಿಯನ್ನು ಕಂಡು ಶಾಸ್ತ್ರಿಗಳು ಬೆರಗಾದರು. ವಿನೀತರಾಗಿ ಕೈ ಜೋಡಿಸಿ ವಂದಿಸಿದರು. ಶಾಸ್ತ್ರಿಗಳ ಕಲ್ಪನೆಗೂ ಬಾರದ ಜೋಯಿಸರ ವ್ಯಕ್ತಿತ್ವ ಅವರ ಹಣೆಗಳಲ್ಲಿ ಬೆವರನ್ನು ತಂದಿತು.

ಉಭಯ ಕುಶಲೋಪರಿಯ ನಂತರ ಜೋಯಿಸರು ನೇರವಾಗಿ ಮಾತಿಗೆ ಬಂದರು. ಶಾಸ್ತ್ರಿಗಳಿಂದ ಎಲ್ಲಾ ವಿಷಯವನ್ನೂ ಸವಿವರವಾಗಿ ತಿಳಿದುಕೊಂಡರು. ಕೊನೆಗೆ ಶಾಸ್ತ್ರಿಗಳು ತಮ್ಮ ಮಗ ಕಂಡರಿಯದ ಹೆಣ್ಣನ್ನು ಮದುವೆಯಾಗಿ, ಮನೆ ಅಳಿಯನಾಗುವುದನ್ನು ತಪ್ಪಿಸಲು, ವಶೀಕರಣ ಮಂತ್ರದಿಂದ ಒಂದು ಯಂತ್ರ ಕೊಡಲು ವಿನಂತಿಸಿದರು. ತಮ್ಮ ಭಾವ ಶ್ಯಾಂ ಭಟ್ಟರ ಸಲಹೆಯ ಮೇರೆಗೆ ಈ ಕಡೆ ಬಂದುದಾಗಿಯೂ, ತಮ್ಮ ಮನದ ದುಗುಡವನ್ನು ದೂರಮಾಡಬೇಕೆಂದೂ ಕೋರಿದರು. ಆವರೆಗೂ ಎಲ್ಲಾ ವಿಷಯಗಳನ್ನು ಗಮನವಿಟ್ಟು ಕೇಳಿಸಿಕೊಂಡ ಜೋಯಿಸರು ಶ್ಯಾಂ ಭಟ್ಟರ ಹೆಸರನ್ನು ಕೇಳಿದ ಕೂಡಲೇ ಮುಗುಳ್ನಕ್ಕರು. ಅವರೂ ಭಟ್ಟರ ಬಗ್ಗೆ ಸಾಕಷ್ಟು ವಿಷಯ ಕೇಳಿದ್ದರು. ಜೋಯಿಸರಿಗೆ ಸಮಸ್ಯೆಯ ಮೂಲ ತಿಳಿದು ಹೋಯಿತು. ಅಂತೆಯೇ ಶಾಸ್ತ್ರಿಗಳ ಮನದ ಕಳೆಯನ್ನು ಕಳೆಯಲು ಮೊದಲಿಟ್ಟರು.

"ಶಾಸ್ತ್ರಿಗಳೇ ನಾನು ಹೇಳುವ ಮಾತ್ನಿಂದ ಬೇಜಾರಾಗಡಿ. ನಾ ಹೇಳುದ್ನ ಗಮನಕೊಟ್ಟು ಕೇಳ್ಕಳಿ. ನಾನು ಹೇಳ್ತಾ ಇಪ್ಪುದು ಸತ್ಯವಾದದ್ದು. ಎಲ್ಲಾ ಸಾವಧಾನವಾಗಿ ಯೋಚ್ನೆಮಾಡಿ ನಿರ್ಧಾರಕ್ಕೆ ಬನ್ನಿ. ಆತಾ?" ಎಂದು ತಮ್ಮ ಕಂಚಿನ ಕಂಠದಲ್ಲಿ ಹೇಳಲು, ಮೋಡಿಗೊಳಗಾದವರಂತೆ ಶಾಸ್ತ್ರಿಗಳು ತಲೆತೂಗಿದರು. "ನೋಡಿ..ಆಗುವ ಶುಭಕಾರ್ಯನ ತಪ್ಸಲೆ ಹೇಳೀ ಈ ಯಂತ್ರ–ಮಂತ್ರ ಎಲ್ಲಾ ಇಪ್ಪದಲ್ಲ. ಜನಕ್ಕೆ ಏನಾರೂ ಆಪತ್ಕಾಲ ಬಂದ್ರೆ ಅದ್ನ ತಪ್ಸಲೆ, ದೂರಮಾಡಲೆ ಇಪ್ಪದು. ಅದೂ ಅಲ್ದೆ ಒಂದ್ ಒಳ್ಳೇ ಕೆಲ್ಸ ಮಾಡ್ಬೇಕಿರೆ ಸಾವಿರ ವಿಘ್ನ ಬತ್ತು. ಒಳ್ಳೇದು ಅಪ್ಪುದ್ನ ತಪ್ಸಲೆ ಹೇಳೀ ನೂರು ಜನ

ಹುಟ್ಕತ್ತ. ಈಗ ನೀವು ಆ ತಂಗಿಗೆ ಕುಲ–ಗೋತ್ರ ಇಲ್ಲೆ ಹೇಳತ್ರಿ. ಆದ್ರೆ ಅದು ಬೆಳ್ದಿದ್ದೆಲ್ಲಾ ಒಂದು ಒಳ್ಳೆ ಸ್ವಜಾತೀ ಕುಟುಂಬದಲ್ಲೇ ಅಲ್ದ? ಎಷ್ಟ ಮಕ್ಕ ಸ್ವಂತ ಹೊಟ್ಟೇಲಿ ಹುಟ್ಟದವೇ ಸರಿ ನಡ್ಕತ್ತ ಹೇಳಿ? ಅದೂ ಅಲ್ದೆ ಮದ್ವೆ ಆದ್ ಮೇಲೆ ನಿಮ್ಮ್ ಕುಲ–ಗೋತ್ರನೇ ಆದ್ರದ್ದೂ ಆಗ್ತು. ನಿಂಗವೂ ಪ್ರೀತಿ ತೋರಿಸ್ರೆ ಆಕೆ ನಿಮ್ಮನ್ನೆಲ್ಲಾ ಸರಿಯಾಗೇ ನೋಡ್ಕಳ್ಗು. ಶಾಸ್ತ್ರಿಗಳೇ, ಅದೂ ಅಲ್ದೆ... ನಿರಂಜನ ಭಟ್ರು ನಂಗೆ ಚೆನ್ನಾಗಿ ಗೊತ್ತಿದ್ದು. ಅವ್ರು ಬಹಳ ಸಾಧು ಜನ. ಖಂಡಿತ ನಿಮ್ಮ ಮಗ್ನ ಸೆಳ್ಕತ್ರಿಲ್ಲೆ. ಇನ್ನು ನೀವು ಖುಶಿ ಪಡವು, ನಿಮ್ಮ ಮಗ ಅಂಥ ಹುಡುಗಿಗೆ ಬಾಳು ಕೊಡ್ತಾ ಇದ್ದ ಹೇಳಿ. ನಿಂಗವೂ ಆ ಪುಣ್ಯಕ್ಕೆ ಭಾಗಿಯಾಗಿ. ಇಲ್ಲದ ಕೆಲ್ಸ ಮಾಡಲೆ ಹೋಗಿ ಪಾಪಕಟ್ಕಳಡಿ. ನಾಳೆದಿನ ಈ ಯಂತ್ರನೇ ತಿರುಗಿ ಬಿದ್ದು, ನಿಮ್ಮ ಮಗ್ನೇ ಶಾಶ್ವತವಾಗಿ ದೂರಾಗ್ಲಕ್ಕು! ಹಾಂಗಾಗಿ ನಿಮ್ಮ ಭಾವ್ನ ಮಾತ್ ಕೇಳಿ ಹಾಳಾಗಡಿ. ಅವ್ನ ಬಗ್ಗೆ ನಿಮ್ಗೇ ಚೆನ್ನಾಗಿ ಗೊತ್ತಿರವು, ಅಲ್ದ? ಮತ್ಸರ ತನ್ನನ್ನಲ್ದೇ ತನ್ನ ತೆಕ್ಕೆಗೆ ಬಂದವ್ರನ್ನೂ ಸುಟ್ಟು ಹಾಕ್ತು. ನೀವು ಬಲಿ ಬೀಳಡಿ. ಮುಂದಿನ ಶುಭಕಾರ್ಯಕ್ಕೆ ಮನಸ್ಸು ಮಾಡಿ” ಎಂದು ಸಾವಧಾನವಾಗಿ, ದೃಢವಾಗಿ, ಮನಸ್ಸಿಗೆ ನೇರವಾಗಿ ನಾಟುವಂತೆ ಬುದ್ಧಿಹೇಳಿದರು.

ಜೋಯಿಸರ ಸತ್ವಯುತ, ಸತ್ಯನುಡಿಗಳಿಂದ ಶಾಸ್ತ್ರಿಗಳ ಮನಸ್ಸನ್ನು ಆವರಿಸಿದ್ದ ಭಟ್ಟರ ಅಸೂಯಾಪೊರೆ ಹರಿಯಿತು. ಭಾವನ ಮಾತುಕೇಳಿ ತನ್ನಿಂದ ಎಂಥಹ ದೊಡ್ಡ ತಪ್ಪು ನಡೆದುಹೋಗುತ್ತಿತ್ತು, ತಾನೇ ಸ್ವತಃ ತಮ್ಮ ಮಗನ ಸಂತೋಷವನ್ನು ಹಾಳುಗೆಡುತ್ತಿದ್ದೆ ನಲ್ಲಾ, ಎಂದು ಅವರು ಪರಿತಪಿಸಿದರು. ಆವರೆಗಿದ್ದ ಅನಿಶ್ಚಿತತೆ ಮಾಯವಾಗಿ ದೃಢನಿರ್ಧಾರ ಮನದಲ್ಲಿ ಮೂಡಲು ಶಾಸ್ತ್ರಿಗಳು ನಿರಾಳರಾದರು. “ಜೋಯಿಸರೆ ನಿಮ್ಮಿಂದ ದೊಡ್ಡ ಉಪಕಾರಾತು. ನನ್ನಿಂದಪ್ಪೂ ಮಹಾಪರಾಧಾನಾ ತಪ್ಪಿಸಿದ್ರಿ. ಇನ್ನು ಯಾರ ಮಾತ್ನೂ ಕೇಳ್ತನಿಲ್ಲೆ. ಮುಂದಿನ ತಿಂಗ್ಳೇ ಮದ್ವೆಗೆ ಏರ್ಪಾಟು ಮಾಡ್ತೆ. ನೀವಂತೂ ತಪ್ಪದೇ ಬರವು” ಎಂದು ವಿನೀತರಾಗಿ ಜೋಯಿಸರ ಕಾಲಿಗೆರಗಿದರು.

***

ಸಾಗರದೊಳಗಿನ ಮಾತು..

ಮುಸ್ಸಂಜೆಯ ಹೊತ್ತು. ತಂಪುಗಾಳಿ ಸುಯ್ಯೆಂದು ಬೀಸುತಿದೆ. ರವಿ ತನ್ನ ದಿನದಕೆಲಸಗಳನ್ನು ಮುಗಿಸಿ ವಿಶ್ರಾಂತಿಸಲು ಹೋಗುತ್ತಿರುವೆನೋ ಎಂಬಂತೆ ಪಡುವಣದ ಕಡೆ ಓಡುತ್ತಿರುವನು. ತಿಳಿನೀಲಿ ಸೀರೆಯುಟ್ಟ ಬಾನು ಕಡು ನೀಲನಾಗಿರುವ ಸಾಗರನಕಡೆ ಬಾಗಿ ರಂಗಾಗಿ ನಗುವಂತಿದೆ. ನೋಟ ಚಾಚಿದಷ್ಟೂ ಮುಗಿಯದ ಮರಳರಾಶಿಗಳ ಹೊಂಬಣ್ಣ. ನಿರಂತರ ಕಿವಿಗಪ್ಪಳಿಸುತ್ತಿದ್ದ ಮೊರೆತಗಳ ರಿಂಗಣ. ಇಂತಹ ಆಹ್ಲಾದಕರ ವಾತಾವರಣದಲ್ಲಿ ಮೈಮರೆತಿದ್ದ ನನಗೆ ಬೇಂದ್ರೆಯವರ ಸುಂದರ ಕವನದ ಸಾಲೊಂದು ನೆನಪಾಯಿತು.

"ಬಂಗಾರ ನೀರ ಕಡಲಾಚೆಗೀಚೆಗಿದೆ ನೀಲ ನೀಲ ತೀರ..
ಮಿಂಚು ಬಳಕ ತೆರೆ ತೆರೆಗಳಾಗಿ ಹರಿಯುವುದು ಪುಟ್ಟ ಪೂರ...."

ಬಾಲ್ಯದಿಂದಲೂ ಕಡಲೆಂದರೆ ಅದೇನೋ ಸೆಳೆತ, ಅರಿಯದ ಮೋಹ. ನನ್ನೊಳಗಿನ ನೋವು–ನಲಿವು, ಸುಖ–ದುಃಖ ಗಳಿಗೆ ಮೂಕಸಾಕ್ಷಿಯೋ ಎಂಬಂತೆ, ಸದಾ ಸ್ವಾಗತಕೋರುತ್ತದೆ ನೊರೆಗಳ ನಗೆಯುಕ್ಕಿಸಿ . ಹಾಗಾಗಿಯೇ ಎಂದು ಬಂದರೂ ನನಗೆ ನವ ನವೀನ, ನೂತನ ಈ ಸಾಗರ. ಆದರೆ ಅದೇಕೋ ನಾನೆಂದೂ ನೀರೊಳಗೆ ಇಳಿದಿಲ್ಲ. ಭಯವೆಂದು ಅಲ್ಲ. ಅದಕ್ಕೂ ಜೀವವಿದೆ ಎಂಬ ಭಾವ. ಮೆಟ್ಟಿದರೆ ಅದೆಲ್ಲಿ ನೋಯುವುದೋ ಎಂಬ ಹುಚ್ಚು ಅಂಜಿಕೆ. ದೂರದಿಂದಲೇ ಆರಾಧಿಸುವ ಬಯಕೆ. ಹಾಗೆ ನೋಡಿದರೆ ನಾನು ಎಷ್ಟೋ ಸಲ ಅಂದು ಕೊಂಡದ್ದಿದೆ.. ಆಹಾ! ನಾನು ಸಾಗರವಾಗಬೇಕಿತ್ತೆಂದು.. ಈ ಬದುಕಿನ ಜಂಜಾಟಗಳಾವುವೂ ಅದಕ್ಕಿಲ್ಲವಲ್ಲವೆಂದು.

ಎಲ್ಲಾ ಕಡಲು ತಡಿಗಳೂ ಸುಂದರವೇ. ಆದರೆ ಸಸಿಹಿತ್ಲುವಿನಲ್ಲಿರುವ ಕಡಲತಡಿ ನನಗೆ ಸದಾ ಮುದನೀಡಿದೆ. ಮುಕ್ಕದಿಂದ ಸುಮಾರು ಒಂದೂವರೆ ಕಿ.ಮೀ. ದೂರ ಸಾಗಿದರೆ ಸಿಗುವುದು ಈ ತಾಣ. ತಣ್ಣೀರು ಬಾವಿ, ಪೆಣಂಬೂರು ಮುಂತಾದ ಕಡೆಯೆಲ್ಲಾ ಅಪಾರ ಜನಜಂಗುಳಿ. ಇಲ್ಲಿಯಾದರೋ ಒಂಟಿಯಾಗಿ ಕುಳಿತುಕೊಳ್ಳಲು ತಾಣ ಹುಡುಕಿದರೆ ಸಿಕ್ಕುವುದು. ಹಾಗಾಗಿಯೇ ಇಲ್ಲಿಗೆ ಆದಾಗಲೆಲ್ಲಾ ಭೇಟಿ ನೀಡುತ್ತಿರುತ್ತೇನೆ. ಅಂದೂ ಹಾಗೆಯೇ ಥಟ್ಟೆಂದು ಹೊರೆಟೇ ಬಿಟ್ಟೆ ನನ್ನ ಪ್ರಿಯ ಸಾಗರನ ಕಾಣಲು. ಒಂಟಿಯಾಗಿರಲು

ಬೇಕಾದ ಸೂಕ್ತ ಜಾಗವೊಂದನ್ನು ಆರಿಸಿ ಕುಳಿತೆ. ಕಣ್ಮುಂದಿನ ಅಪಾರ ಜಲರಾಶಿಯನ್ನು ಹಾಗೆಯೇ ಕಣ್ತುಂಬಿಕೊಂಡು ಮೈಮರೆತಿರಲು, ಕೇಳಿಬಂತು ಆ ಕರೆ...

"ಗೆಳತಿ.. ಕುಶಲವೇ?" ಚಕಿತಳಾಗಿ ನಾನು ಕಣ್ತೆರೆದು ನೋಡಿದರೆ ಹತ್ತಿರದಲ್ಲೆಲ್ಲೂ ಯಾರ ಸುಳಿವೂ ಕಾಣದು. ಎಲ್ಲೋ ನನ್ನ ಭ್ರಮೆಯಿರಬೇಕೆಂದು ಮತ್ತೆ ಕಣ್ಮುಚ್ಚಿದರೆ ಅದೇ ಕರೆ ಮತ್ತೆ ಕೇಳಿ ಬಂತು.

"ಗೆಳತಿ... ಸೌಖ್ಯವೇ? ನನ್ನ ಗುರುತೇ ಸಿಗಲಿಲ್ಲವೇ?!" ಈಗ ಮಾತ್ರ ನಿಜಕ್ಕೂ ಸ್ವಲ್ಪ ಭಯುವಾಗತೊಡಗಿತು. ಪ್ರೇತಚೇಷ್ಟೆಯೋ ಎಂದು. ಆದರೂ ವೈದಿಕ ಮನೆತನದವಳಾದ ನಾನು ತುಸು ಧೈರ್ಯಮಾಡಿಕೊಂಡು ಗಟ್ಟಿಯಾಗಿ ಕೇಳಿದೆ.. "ಯಾರದು?! ಯಾರು ಕರೆಯುತ್ತಿರುವುದು?!" ಎಂದು ಅತ್ತಿತ್ತ ನೋಡತೊಡಗಿದೆ.

"ಸಖಿ ಹೆದರದಿರು..ನಾನು ನಿನ್ನ ಪ್ರಿಯ ಸಾಗರ. ಅದೆಷ್ಟೋ ವರುಷಗಳಿಂದ ನೀನು ನನ್ನ ಆರಾಧಿಸಿರುವೆ, ನಿನ್ನ ನಲಿವು-ನೋವುಗಳನ್ನು ನನ್ನೊಡನೆ ಹಂಚಿಕೊಂಡಿರುವೆ, ನಿನ್ನೊಳಗೆ ನನ್ನ ತುಂಬಿಕೊಂಡು ಸಂತಸ ಪಟ್ಟಿರುವೆ, ನನ್ನ ಕವನ-ಕತೆಯನ್ನಾಗಿಸಿ ಕೊಂಡಾಡಿರುವೆ. ಅದಕ್ಕೆಂದೇ ನಾನು ಇಂದು ನ್ನ ಬಳಿ ಕೆಲಹೊತ್ತು ಕಳೆದು ಕುಶಲೋಪಚರಿ ಮಾತಾಡಲು ಬಂದೆ..ಗುರುತಾಯ್ತೋ ಈಗ" ಎಂಬ ಮೃದುವಾಣಿಯೊಂದು ನೀರಲೆಗಳ ಜೊತೆ ತೇಲಿ ಬರಲು ಖಾತ್ರಿಯಾಯಿತು, ಇದು ಸಾಗರದೊಳಗಿನ ಮಾತೆಂದು!

"ಸಂತೋಷ ಸಾಗರ ..ಸ್ವಾಗತವಿದೆ ನಿನಗೆ. ನಾನು ಕ್ಷೇಮ. ನಿನ್ನ ಕುರಿತು ಹೇಳು? ಹೇಗಿರುವೆ?" ಎಂದೆ.

"ಇತ್ತೀಚಿನ ಮಾಲಿನ್ಯಗಳಿಂದಾಗಿ ತುಸು ಸೊರಗಿರುವೆ, ಬಿಟ್ಟರೆ ನಾನದೇ ಸಾಗರ, ಸದಾ ನಿರುಮ್ಮಳ, ವಿಶಾಲ ಹಾಗೂ ಗಂಭೀರ." ಸಾಗರನ ಮಾತುಕೇಳಿ ನಗು ಬಂತು.

"ಸಾಗರ ನಿನ್ನ ನೋಡಿದರೆ ನನಗೆ ಕೆಲವೊಮ್ಮೆ ಹೊಟ್ಟೆಯುರಿಯುತ್ತದೆ. ಅದೆಷ್ಟು ಜನ ನಿನ್ನ ನೋಡ ಬಯಸುವರು, ನಿನಗಾಗಿ ದೂರದೂರುಗಳಿಂದ ಓಡಿ ಬರುವರು, ನಿನ್ನೊಡನೆ ಆಡುವರು! ನೀನೇ ಧನ್ಯ ಬಿಡು. ಪರಮ ಸುಖಿ. ಒಮ್ಮೊಮ್ಮೆ ನಾನು ನೀನೇ ಆಗಬಾರದಿತ್ತೇ ಎಂದೆನಿಸುತ್ತದೆ. ಆಗ ಈ ಬದುಕು ಬವಣೆಯಿಲ್ಲದೆ ನಿನ್ನಂತೆ ಹಾಯಾಗಿರಬಹುದು" ಎಂದೆ.

"ನಿಜ ಹುಡುಗಿ, ಜನಸಾಗರವೇ ಬರುತ್ತದೆ ನನ್ನ ದರ್ಶನಕ್ಕೆ, ನನ್ನೊಳಗೆ ಮುಳುಗೇಳುವುದಕ್ಕೆ, ನನ್ನೊಡನೆ ಕುಣಿದಾಡುವುದಕ್ಕೆ, ಮುಂದೆ ಕುಳಿತು ಅಳುವುದಕ್ಕೆ,

ಬಿದ್ದು ಸಾಯುವುದಕ್ಕೆ..ಎಲ್ಲಾ ರೀತಿಯ ಜನ ಬರುತ್ತಲೇ ಇರುತ್ತಾರೆ. ಆದರೆ ಮನುಷ್ಯನ ಬದುಕು ನನ್ನ ಬದುಕಿಗಿಂತ ಭಿನ್ನವೇನಲ್ಲ. ನನ್ನ ಕಾಣಲು ಬರುವವರಾರೂ ನನ್ನ ನಿಗೂಢತೆಯನ್ನರಿಯುವುದಿಲ್ಲ. ನನ್ನಿಂದೇನೂ ಕಲಿಯುವುದಿಲ್ಲ. ಈ ಸಾಗರನುದ ಪಾಠವ ಕಲಿತು ತಿದ್ದಿಕೊಂಡವರೆಷ್ಟು ಹೇಳು?ಅದೇ ಬಲು ಬೇಸರ ನನಗೆ" ಎಂದ ಸಾಗರದ ಮಾತು ಕೇಳಿ ನನಗೆ ಬಲು ಆಶ್ಚರ್ಯವಾಯಿತು.

"ಎಲೇ ಸಾಗರ ನಿನ್ನ ಮಾತು ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಬುದ್ಧಿವಂತರಾದ ನಾವು ನಿನ್ನಿಂದೇನು ಕಲಿಯಬೇಕಾಗಿದೆ? ಅಂತಹ ವಿಶೇಷವೇನಿದೆ ನಿನ್ನಲಿ? ಮನುಷ್ಯನಿಗಿರುವ ಯಾವ ಕಷ್ಟ-ಕಾರ್ಪಣ್ಯಗಳಿವೆಯಪ್ಪಾ ನಿನಗೆ? ನಮ್ಮ ಬದುಕಿಗೆ ನಿನ್ನ ಹೋಲಿಸಲು ಹೇಗೆ ಸಾಧ್ಯ?" ನನ್ನೊಳಗಿನ 'ಅಹಂ' ಪ್ರಶ್ನೆ ಮಾಡಿತು.

"ಅಯ್ಯೋ ಹುಚ್ಚಿ ನಿನಗೂ ನಾನು ಅರಿವಾಗಲಿಲ್ಲವೆ? ಒಮ್ಮೆ ನಿನ್ನ ಮನಸ್ಸನ್ನು ವಿಶಾಲವಾಗಿಸಿ ನೋಡು. ..ನಿನಗೇ ತಿಳಿಯುವುದು ನನ್ನೊಳಗೂ ದು:ಖ-ದುಮ್ಮಾನಗಳಿವೆಯೆಂದು. ನೀವೇ ನೀಡಿದ ಮಾಲಿನ್ಯದ ರೋಗವಿದೆ, ಅದರ ನೋವು ಕಣ್ಣೀರಾಗಿ ಹರಿಯುತ್ತಿದೆ. ಕಾಣುವುದಿಲ್ಲವೇ ಉಕ್ಕಿಹರಿಯುತ್ತಿರುವುದು ನನ್ನ ನೀರು ಉಪ್ಪಾಗಿ ನಿನ್ನ ಕಣ್ಣೀರಿನಂತೆ? ಆದರೂ ನಗುತ್ತಿರುವೆ ಬಿಳಿ ನೊರೆಗಳನ್ನು ಚೆಲ್ಲುತ್ತಾ, ಕಪ್ಪು ತೆರೆಗಳನ್ನು ಮರಳಿಸಿ. ತೀರ ಸೇರಲು ಅದೆಷ್ಟೋ ವರುಷಗಳಿಂದ ಪ್ರಯತ್ನಿಸುತ್ತಲೇ ಇದ್ದೇನೆ. ಆದರೂ ಸೋಲೊಪ್ಪಿಕೊಳ್ಳದೇ ತೀರ ಸೇರುವ ಯತ್ನವನ್ನೇನೂ ಬಿಟ್ಟಿಲ್ಲ ! ನಿಮ್ಮಂತೆ ನನ್ನ ಬದುಕಿನಲ್ಲೂ ಒಳಿತು-ಕೆಡುಕುಗಳಿವೆ. ನನ್ನ ಗರ್ಭದೊಳಗಡಗಿರುವ ಅಸಂಖ್ಯಾತ ವಿಷಜಂತುಗಳು, ಶಾರ್ಕ್‌ಗಳ ಜೊತೆಗೆ ಸುಂದರ ಮುತ್ತು, ಹವಳಗಳಿಲ್ಲವೇ? ನಾನೆಂದೂ ಕೇವಲ ಮುತ್ತು-ಹವಳಗಳನ್ನು ಮಾತ್ರ ಬಯಸಿಲ್ಲ. ಹಾಗೆಯೇ ವಿಷಜಂತುಗಳಿಂದ ನನಗೇನೂ ಅಪಾಯವಾಗದಂತೆಯೂ ನೋಡಿಕೊಳ್ಳುತ್ತಿರುವೆ. ಸುನಾಮಿ, ಚಂಡಮಾರುತ, ಸುಳಿಗಳಿಂದಾಗಿ ಅದೆಷ್ಟು ಹಡಗು, ದೋಣಿಗಳು ಮುಳುಗಿಲ್ಲ. ಆ ದುಃಖಗಳನ್ನೆಲ್ಲಾ ಮೆಟ್ಟಿಯೂ ನಾನು ಭೋರ್ಗರೆಯುವುದಿಲ್ಲವೆ? ಹಲವಾರು ನದಿಗಳು ನನ್ನ ಸೇರಿ ಬೆರೆವಂತೆ, ಹತ್ತು ಹಲವು ಭಾವನೆಗಳು ನಿನ್ನ ಮನ ಮುಟ್ಟಿ ಒಳಸೇರುವುದಿಲ್ಲವೇ? ಒಮ್ಮೆ ನಿನ್ನ ಮನಸ್ಸಿನ ನಿಗೂಢತೆಯನ್ನು, ಪ್ರಶಾಂತತೆಯನ್ನು, ಬಿರುಗಾಳಿಯನ್ನು ನನ್ನೊಡಲಿಗೆ ಹೋಲಿಸಿ ನೋಡು, ಆಗ ನೀನೇ ಹೇಳಿವೆ ನಾನು-ನೀನು ಬೇರೆಯಲ್ಲಾ. ಆದರೆ ಪ್ರಿಯ ಸಖಿ ನೀನು ನಿನ್ನೊಳಗಿನ ಭಾವನೆಗಳೊಳಗೆ ಮುಳುಗಿ ಕಳೆದುಹೋಗುವೆ, ನಾನಾದರೋ ಎಲ್ಲವನ್ನೂ ನನ್ನೊಳಗೆ ಎಳೆದುಕೊಂಡೂ ನಾನಾಗಿಯೇ ಉಳಿಯುವೆ. ನನಗೆ ಕೊನೆಯೂ ಇಲ್ಲ, ಮೊದಲೂ ಇಲ್ಲ. ಆದ್ಯಂತ ರಹಿತ ನಾನು ನಿನ್ನೊಳಗಿನ ಆತ್ಮದಂತೆ. ಕಾಲ ಚಕ್ರ

ನಿಮ್ಮಂತೆ ನನಗೂ ಬಾಧಿತ. ಆದರೆ ನಾನು ಆತನ ಬಂಧಿಯಲ್ಲ. ನಿನಗೇಕೆ ಕಾಲನಗೊಡವೆ? ಇಂದಿನ ದಿನ ನಿನ್ನದು. ನಾಳೆಯನ್ನು ಯಾರೂ ಬಲ್ಲವರಲ್ಲ.

ಗೆಳತಿ ನೀನೂ ನನ್ನಂತೆ ನೀನು ನೀನಾಗಿಯೇ ಯಾಕಿರಬಾರದು? ನಾನಾವ ಬೇಡದ ವಸ್ತುಗಳನ್ನೂ ಇಟ್ಟುಕೊಳ್ಳುವುದಿಲ್ಲ. ನನ್ನದಲ್ಲದ ತ್ಯಾಜ್ಯವಸ್ತುಗಳನ್ನೆಲ್ಲಾ ತತ್‌ಕ್ಷಣ ವರ್ಜಿಸಿ ಬಿಡುವೆ ಸದಾ ಅಣಕಿಸಿ ನಗುವ ಈ ತೀರಕ್ಕೆ. ನಿರಾಳನಾಗುವೆ, ಪ್ರಶಾಂತನಾಗುವೆ, ಗಂಭೀರತೆಯಿಂದ ಹಿಂತಿರುಗಿವೆ ಮತ್ತೆ ನನ್ನ ಬದುಕಿಗೆ. ನೀವೇಕೆ ನಿಮಗೆ ಸೇರದ, ನಿಮ್ಮ ಸುಡುವ ಕಾಮನೆ, ಭಾವನೆ, ಆಕಾಂಕ್ಷೆಗಳನ್ನೆಲ್ಲಾ ಹೊರದೂಡಿ ನನ್ನಂತೆ ಆಗಬಾರದು? ಒಮ್ಮೆ ಹಾಗೆ ಮಾಡಿನೋಡಿ ನೀವೂ ಆಗುವಿರಿ ನನ್ನಂತೆ ಸುಂದರ, ವಿಶಾಲ. ಆಗೋ ಅಲ್ಲಿ ಕಾಯುತಿದೆ ನಿನಗಾಗಿ ನಿನ್ನ ಪ್ರಪಂಚ.. ಸಂತೋಷದಿಂದ ಅಪ್ಪಿಕೋ ಅದನ್ನ. ಹಿಂತಿರುಗಿ ನೋಡದಿರು, ಕರುಬದಿರು ನನ್ನ ನೋಡಿ ಇನ್ನೆಂದೂ. ನೀನು ನೀನೇ ಆಗಿರು. ನಾನು ನಾನೇ ಆಗಿರುವೆ. ಇನ್ನಾದರೂ ನಾನು ತೋರಿದ ಈ ಪಾಠವನ್ನು ಮನಗಂಡು ಅಳವಡಿಸಿಕೋ. ಆಗ ನನಗೂ ತೃಪ್ತಿ . ಸರಿ ಸಖಿ ಹೋಗಿಬರುವೆ''. ಸಾಗರದೊಳಗಿನ ಮಾತು ಅಲೆಗಳೊಂದಿಗೆ ಮಾಯವಾಯಿತು.

'ಹೌದಲ್ಲಾ? ನಾವು ನಮ್ಮ 'ಅಹಂ'ನ ಬಿಟ್ಟು , ಪ್ರಕೃತಿಯೊಳಡಗಿರುವ' ಬಾಹ್ಯ ಸೌಂದರ್ಯವನ್ನೊಂದೇ ಕಾಣದೇ, ಅದರೊಳಗಿರುವ ಹೊಸ ಅರ್ಥ, ನೀತಿ–ರೀತಿಗಳನ್ನೂ ಅರಿತು ಅಳವಡಿಸಿಕೊಂಡರೆ ನಮ್ಮ ಬದುಕೆಷ್ಟು ಸರಳ–ಸುಗಮವಾಗುವುದು, ಸಹನೀಯವೆನಿಸುವುದು ! ಎಂದೆನಿಸಿತು. ಮನಸ್ಸು ಮತ್ತೆ ಹಾಡತೊಡಗಿತು....

"ಇದು ಉಪ್ಪು ನೀರ ಕಡಲಲ್ಲೋ, ನಮ್ಮ ಒಡಲಲ್ಲೂ ಇದರ ನೆಲೆಯೂ
ಕಂಡವರಿಗಲ್ಲೋ, ಕಂಡವರಿಗಷ್ಟೇ ತಿಳಿದದ್ದಾ ಇದರ ಬೆಲೆಯು..."

***

ನಿಯುತಿ

"ಸುಮತಿ ಮುಂದಿನ ಸೋಮವಾರ ಅಗಸ್ಟ್ ೧೫. ಅಂದ್ರೆ ಶನಿವಾರ, ರವಿವಾರ ಸೇರಿಸಿದ್ರೆ ಒಟ್ಟೂ ಮೂರು ದಿನ ರಜೆ ಸಿಗತ್ತೆ. ನಾವಿಬ್ರೂ ಹೊರಗೆ ಬಿದ್ದು ತುಂಬಾ ದಿವಸಗಳಾದವು. ಇಲ್ಲೇ ಮೈಸೂರಿಗೆ ಹೋಗಿಬರೋಣ್ವಾ? ಈ ಕಂಪೆನಿಯ ಕೆಲ್ಸದಿಂದ ನಮಗೂ ಸ್ವಾತಂತ್ರ್ಯ ಸಿಕ್ಕಿದ ಹಾಗೆ ಆಗೊತ್ತೆ" ಎಂದ ಲತಾಳ ಮಾತು ಕೇಳಿ ಸುಮತಿಯ ಮುಖ ಪ್ರಫುಲ್ಲವಾಯಿತು. "ಹೌದಲ್ವಾ! ನಾನೂ ಗಮನಿಸಿಯೇ ಇಲ್ಲಾ ..ಆದ್ರೆ ಸ್ಸಾರಿ ಕಣೇ ಲತಾ ನಾನು ಊರಿಗೆ ಹೋಗ್ಬೇಕು. ಅಮ್ಮ , ಅಪ್ಪ ಬೈತಾ ಇದ್ದಾರೆ. ಮೂರು ತಿಂಗಳ ಮೇಲಾಯ್ತು ಊರಿನ ಕಡೆ ತಲೆ ಹಾಕಿ. ನಿನ್ನೆ ಫೋನ್ ಬೇರೆ ಬಂದಿತ್ತು ಬೇಜಾರಾಗ್ಬೇಡ ಪ್ಲೀಸ್" ಎಂದಾಗ ಲತಾಳಿಗೆ ತುಸು ಬೇಸರವಾಯಿತು. "ಹೂಂ ..ಎಲ್ಲಾ ಸುಳ್ಳು ಅಪ್ಪ, ಅಮ್ಮನ ಮಾತಿಗೆ ನೀನು ಓಡಿ ಹೋಗೊಳಲ್ಲ. ನಂಗೊತ್ತು.. ನಿನ್ನೆ ನಿನ್ನ ಮುದ್ದಿನ ತಮ್ಮ ರಾಜೇಶನ ಪತ್ರ ಬಂತು ನೋಡು ಆಗ್ಲೇ ಅಂದ್ಕೊಂಡೆ ನೀನು ಬರೋದು ಅಷ್ಟರಲ್ಲೇ ಇದೆ ಎಂದು" ವ್ಯಂಗ್ಯವಾಡಿದ ಅವಳ ಮಾತಿಗೆ ಸುಮತಿ ಜೋರಾಗಿ ನಕ್ಕು ಬಿಟ್ಟಳು. ಕಾರಣ ಅವಳ ಮಾತಿನೊಳಗಿದ್ದ ಸತ್ಯತೆ.

ಸುಮತಿಯ ಊರು ಶಿರಸಿಯ ಸಮೀಪದಲ್ಲಿರುವ ಮತ್ತೀಗಾರು. ಕೃಷಿಕರಾಗಿರುವ ತಂದೆ ಶ್ರೀಧರ ಭಟ್ಟರು ಪ್ರಸಿದ್ಧ ವೈದಿಕರೂ ಕೂಡ. ತಾಯಿ ಸುಶೀಲಮ್ಮ ಬಾಲ್ಯದಿಂದಲೂ ಸುಮತಿ ಓದಲು ಬಲು ಚುರುಕು. ಹಾಗಾಗಿಯೇ ಸುಲಭವಾಗಿ ಇಂಜಿನೀಯರಿಂಗ್ ಪದವಿ ಮುಗಿಸಿ, ಬೆಂಗಳೂರಿನಲ್ಲಿ ಕೆಲಸಕ್ಕೆ ಸೇರಿದ್ದಳು ಕುಲಪುತ್ರನೊಬ್ಬನಿಲ್ಲವಲ್ಲಾ ಎಂದು ಶ್ರೀಧರ ದಂಪತಿಗಳು ಕೊರಗುತ್ತಿರುವಾಗಲೇ ಅವರ ಮನೆ-ಮನ ತುಂಬಿದವನು ರಾಜೇಶ. ಮಗಳು ಹುಟ್ಟಿ ೧೪ ವರುಷಗಳ ಮೇಲೆ ಹುಟ್ಟಿದವನು. ಹಾಗಾಗಿಯೇ ಮನೆಯವರಿಗೆಲ್ಲಾ ಪುಟ್ಟ ರಾಜೇಶನೆಂದರೆ ಬಲು ಮುದ್ದು ಅದರಲ್ಲೂ ಸುಮತಿಗಂತೂ ತಮ್ಮನೆಂದರೆ ತುಸು ಅತಿಯಾದ ಮಮತೆ. ಚಿಕ್ಕಂದಿನಿಂದಲೂ ಒಂಟಿತನದ ನೋವನ್ನು ಅನುಭವಿಸಿದವಳಲ್ಲಿ ಈ ಪುಟ್ಟ ಪೋರನ ಆಗಮನ ನವ ಚೈತನ್ಯವನ್ನು ತುಂಬಿತ್ತು.

ಆತ ಮಗುವಾಗಿದ್ದಾಗ ತಾನೇ ಎಣ್ಣೆ ಹಚ್ಚಿ ಸ್ನಾನ ಮಾಡಿಸುತ್ತಿದ್ದಳು , ಅತ್ತರೆ ಲಾಲಿ ಹಾಡಿ ಮಲಗಿಸುತ್ತಿದ್ದಳು. ಹಸಿವಾದರೆ ತುತ್ತನಿತ್ತು ಮುದ್ದಿಸುವಳು. ಚಿಕ್ಕ ಜ್ವರ ಬಂದರೂ ಸಾಕು ರಾತ್ರಿ-ಹಗಲು ಒಂದು ಮಾಡಿ ಅವನ ಬಳಿ ಕುಳಿತಿರುತ್ತಿದ್ದಳು. ಯಾವುದೇ

ಹಬ್ಬ ಬರಲಿ ತನಗಿಂತ ಮೊದಲು ತಮ್ಮನಿಗಾಗಿ ಹೊಸ ಬಟ್ಟೆ ತರುತ್ತಿದ್ದಳು. ಯಾವ ಸುಂದರ ವಸ್ತುಕಂಡರೂ ಆತನಿಗೆಂದು ತೆಗೆದಿಡುತ್ತಿದ್ದಳು. ಒಟ್ಟಿನಲ್ಲಿ ಆತನಿಗೆ ಇಬ್ಬರು ತಾಯಂದಿರು ಎಂದರೆ ಹೆಚ್ಚಲ್ಲ. ಅದಕ್ಕೆ ಅವರಿಬ್ಬರ ನಡುವಿನ ವಯಸ್ಸಿನ ಅಂತರವೂ ಕಾರಣವಾಗಿತ್ತು. ಅವಳ ಮಾನಸಿಕ ದೌರ್ಬಲ್ಯ ಹಾಗೂ ಶಕ್ತಿ ಎರಡೂ ಆಕೆಯ ಮುದ್ದಿನ ರಾಜೂ ಆಗಿದ್ದ ಎಂದರೆ ತಪ್ಪಾಗಲಾರದು.

ಇನ್ನು ರಾಜೇಶನಿಗೂ ಅಷ್ಟೇ, ಹೆತ್ತವರಿಗಿಂತಲೂ ಅಕ್ಕನನ್ನೇ ಹೆಚ್ಚು ಹಚ್ಚಿಕೊಂಡಿದ್ದ. ಆಕೆ ಕೊಟ್ಟ ವಸ್ತು ಚೆಂದ, ಅಕ್ಕ ತಂದ ಬಟ್ಟೆಯನ್ನೇ ಹಾಕುವ. ಆತನ ತುಂಟಾಟವನ್ನು ಸಹಿಸಲಾರದೆ ಒಮ್ಮೊಮ್ಮೆ ಬೀಳುವ ಅಮ್ಮನ ಹೊಡೆತವಾಗಲೀ, ಅಪ್ಪನ ಬೈಗುಳವಾಗಲೀ ಆತನನ್ನು ತಡೆಯದು. ಆದರೆ ಅಕ್ಕನ ಒಂದೇ ಒಂದು ಅಕ್ಕರೆಯ ಅಪ್ಪಣೆ ಆತನ ಪಾಲಿಗೆ ಸುಗ್ರೀವಾಜ್ಞೆಯೇ ಸರಿ. "ಕೂಸೆ... ನೀ ರಾಶಿನೇ ಅವ್ನ ತಲೆ ಮೇಲೇ ಕೂರಿಸಕಂಜೆ ಅದ್ಕೇಯಾ ಅಂವ ನಂಗ್ಳ ಮಾತೇ ಕೇಳ್ತನಿಲ್ಲೆ" ಎಂದು ಸುಶೀಲಮ್ಮ ಎಷ್ಟೋ ಸಲ ಮಗಳನ್ನು ಗದರಿಸಿದ್ದರೂ, ಮನಸ್ಸಿನಲ್ಲೇ ಮಕ್ಕಳ ಈ ಅನೂಹ್ಯ ಬಂಧವನ್ನು ಕಂಡು ಹೆಮ್ಮೆ ಪಟ್ಟುಕೊಳ್ಳುತ್ತಿದ್ದರು.

ರಾಜು ಈಗ ನಾಲ್ಕನೆಯ ತರಗತಿಗೆ ಕಾಲಿಟ್ಟಿದ್ದ. ಮನೆಯಲ್ಲಿ ಕಲಿಸಲು ತಂದೆ ತಾಯಿಯರಿದ್ದರೂ ಅಕ್ಕನೇ ಬಳಿ ಕೂರಬೇಕು. ಇತ್ತೀಚಿಗಷ್ಟೇ ಆತನ ಮೇಷ್ಟ್ರು ಪತ್ರ ಬರೆಯುವುದನ್ನು ಹೇಳಿಕೊಟ್ಟಿದ್ದರು. ಹಾಗಾಗಿಯೇ ರಾಜುವಿಗೆ ಒಂದು ಪತ್ರ ಬರೆಯುವ ಉಮೇದು ಬಂತು. ಸರಿ ಮೊದಲ ಪತ್ರವನ್ನು ತನ್ನ ಪ್ರೀತಿಯ ಸುಮಕ್ಕನಿಗೇ ಬರೆದ. ಅವಳಿಗಂತೂ ತಮ್ಮನ ಮೊದಲ ಪತ್ರ ನೋಡಿ ತುಂಬಾ ಸಂತೋಷವಾಗಿತ್ತು.

ತಮ್ಮನ ನೆನಪಾಗಲು ಈಗಾಗಲೇ ಎರಡು ಬಾರಿ ಓದಿಟ್ಟಿದ್ದ ಆತನ ಪತ್ರವನ್ನು ಮತ್ತೊಮ್ಮೆ ಓದಲು ಕುಳಿತಳು. ಮುದ್ದು ಮುದ್ದಾದ ಬಾಲ್ಯ ಶೈಲಿಯಲ್ಲಿದ್ದ ಪತ್ರನೋಡಿ ಮಂದಹಾಸ ಮೂಡಿತು.

ಪ್ರೀತಿಯ ಸುಮಕ್ಕಂಗೆ,

ನಿನ್ನ ಮುದ್ದು ರಾಜೂನ ಮುತ್ತುಗಳು. ನೀ ಹೇಂಗಿದ್ದೆ? ಬೆಂಗಳೂರಲ್ಲಿ ರಾಶಿ ಚಳಿಯಡ .. ನನ್ನ ಫ್ರೆಂಡ್ ಶಶಿ ಹೇಳ್ದ. ಶಶಿ ಯಾರು ಹೇಳಿ ಗೊತ್ತಾತ? ಅದೇ ಹೋದ್ವರ್ಷ ನನ್ನ ಪೆನ್ಸಿಲ್ ಬಾಕ್ಸ್ ಮುರ್ದು ಹಾಕಿಯಿದ್ನಲೇ ಅವ್ನೇಯಾ.. ಮೊನ್ನೆ ನನ್ಗೇ ಹೇಳಿ ಪುನ್ನೇರ್ಲ ಹಣ್ಣು ತಂದಕೊಟ್ಟಿದ್ದ. ಹಂಗಾಗಿ ಅಂವ ಈಗ ನನ್ನ ಬೆಸ್ಟ್ ಫ್ರೆಂಡ್. ಸುಮಕ್ಕ ಇವತ್ತು ಆಯಿ ನನ್ನ ಬೈಯದ್ದೇ. ನಾನೆಂತ ತಪ್ಪೂ ಮಾಡಿದ್ನಿಲ್ಯಪ್ಪ.. ಅದು

ನಿನ್ನ ಹಳೇ ಚೂಡಿದಾರನ ಆ ಸಿಡಕ ಮೂತಿ ಗಂಗಮ್ಮಂಗೆ ಕೊಡಲ್ಹೋಗಿತ್ತು, ಬೇಡ ಹೇಳಿ ಕಸ್ದಿದಕ್ಕೇಯಾ.. ನೀ ಈ ಸಲ ಬಂದಾಗ ಅಮ್ಮಂಗೆ ಸ್ವಲ್ಪ ಬುದ್ಧಿ ಹೇಳವು ನೋಡು..ಅಪ್ಪಯ್ಯಂಗೂ ಎಂತದೋ ಹೇಳಿಕೊಟ್ಟಿರವು.. ಅದ್ಕೆಯಾ ಮೊನ್ನೆ ಸುಮ್ ಸುಮ್ನೇ ಅಪ್ಪಯ್ಯನೂ ಬೈದ್ನಪ.. ಹೀಂಗೇ ನೀರೆಷ್ಟಿದ್ದು ಹೇಳಿ ಬಾವಿ ಬಗ್ಗಿ ನೋಡ್ತಾ ಇದ್ನಾ..ಅಪ್ಪಯ್ಯ ಕೋಲ್ ತಗಳವಾ? ನೀ ಇಲ್ಲೆ ಹೇಳದು ಇವೆಲ್ಲಾ ಯನ್ನ ಸರಿ ನೋಡ್ಕತಾನೆ ಇಲ್ಲೆ.. ಬೆಗ್ನೆ ಬಾರೆ ಸುಮಕ್ಕ.. ಹಂ.. ಹಾಂಗೆ ಬರಬೇಕಿರೆ ಒಂದ್ ಕಂಪ್ಯೂಟರ್‌ನೂ ಹೊತ್ಕಬಾ .. ನಿನ್ನ ಆಫೀಸಲ್ಲಿ ಸುಮಾರು ಕಂಪ್ಯೂಟರ್ ಇದ್ದು ಹೇಳಿಯಿದ್ಯಲೇ.. ನಾವಿಬ್ರೂ ಆಟ ಆಡಲಾಗ್ತು. ಈ ತಿಂಗ್ಳು ನೀನು ಬರ್ಲೇ ಬೇಕು. ಮುಂದಿನ ತಿಂಗ್ಳು ಪರೀಕ್ಷೆ ಇದ್ದು.. ನೀನೇ ಹೇಳ್ಕೊಡವು. ಪರೀಕ್ಷೆ ಮುಗ್ದ ಮೇಲೆ ಬೆಂಗ್ಳೂರಿಗೆ ಹೋಪಾಂಗೆ ಬಾ ಅಕಾ? ಸರಿ ಸುಮಕ್ಕ ಇನ್ನು ಮುಗಸ್ತಿ. ಕೈ ನೋಯ್ತಾ ಇದ್ದು. ಮತ್ತೆ ಅಮ್ಮಂಗೆ ನಾ ಹೀಂಗೆಲ್ಲಾ ಬರದ್ದಿ ಹೇಳಿ ಹೇಳಿಕಡ ಮಾರಾಯ್ತಿ. ಬೈತು ನಂಗೆ.

ಇತಿ ನಿನ್ನ ಪ್ರೀತಿಯ,
ರಾಜು.

ಶಿರಸಿಯನ್ನು ಬೆಳಿಗ್ಗೆ ಏಳು ಗಂಟೆಗೇ ತಲುಪಿದರೂ , ಅಲ್ಲಿಂದ ಬಸ್ಸು ಹಿಡಿದು ತನ್ನ ಊರು ಸೇರುವಾಗ ಗಂಟೆ ಎಂಟಾಗಿತ್ತು. ಒಂದೆಡೆ ಧೋ ಎಂದು ಸುರಿಯುವ ಆಷಾಢ ಮಾಸದ ಮಳೆ, ಮತ್ತೊಂದೆಡೆ ಗಾಳಿಗೆ ಹಾರುತ್ತಿದ್ದ ಪುಟ್ಟ ಕೊಡೆ ಎರಡನ್ನೂ ಸಂಭಾಳಿಸುತ್ತಾ ಹೇಗೋ ಮನೆಯ ಹತ್ತಿರ ಬಂದಳು. ದೊಡ್ಡ ಕೊಡೆಯೊಂದನ್ನು ಹಿಡಿದು ಕೊಂಡು ಮನೆಯ ದಣಪೆಯ ಬಳಿಯೇ ಠಳಾಯಿಸುತ್ತಿದ್ದ ತಮ್ಮನ್ನು ಕಂಡ ಸುಮತಿಗೆ ಬಂದ ಆಯಾಸವೆಲ್ಲಾ ಕಡಿಮೆಯಾದಂತಾಯಿತು. ಅಷ್ಟು ದೂರದಿಂದಲೇ ಅಕ್ಕನನ್ನು ಕಂಡು ಮಳೆಯನ್ನೂ ಲೆಕ್ಕಿಸದೇ ಓಡಿ ಬಂದು ಛಂಗನೇ ಹಾರಿ ಅವಳ ಮೈಗೆ ಜೋತು ಬಿದ್ದನು. ಜಗುಲಿಗೆ ಬಂದದ್ದೇ ತಡ ಅಕ್ಕ ತನಗೇನು ತಂದಿಹಳೆಂದು ಆಕೆಯ ಕೈಚೀಲವನ್ನೆಲ್ಲಾ ಜಾಲಾಡಲಾಯಿತು. ಚೋಕಲೇಟು, ಬಿಸ್ಕಿಟ್ ಪೊಟ್ಟಣಗಳನ್ನೆಲ್ಲಾ ನೋಡಿ ತೃಪ್ತಿಗೊಂಡ ರಾಜು, ಆ ವರೆಗಿನ ತನ್ನ ಆಟ–ಪಾಠಗಳ ವರದಿಯನ್ನೆಲ್ಲಾ ಕೊರೆಯತೊಡಗಿದ. ಬಂದು ಹದಿನೈದು ನಿಮಿಷವಾದರೂ ಕೈ–ಕಾಲುಗಳನ್ನೂ ತೊಳೆಯಲು ಬಿಡದ ಮಗನನ್ನು ಎಬ್ಬಿಸಲು ಸುಶೀಲಮ್ಮನೇ ಬರಬೇಕಾಯಿತು – "ರಾಜು ಸಾಕೋ ಮಾರಾಯಾ ಅದು ಈಗಷ್ಟೇ ಬಂಜು, ಮಳೇಲಿ ಬಂದು ಬಟ್ಟೆ ಎಲ್ಲಾ ಒದ್ದೆ ಬೇರೆ ಆಜು. ಅದ್ರನ್ನ ಈಗ ಒಂದ್ಸಲ ಬಿಡು ಮಾರಾಯ. ಅದಿನ್ನೂ ಸ್ವಲ್ಪ ದಿನ ಇರ್ತು. ಆರಾಮಾಗಿ ಬಿಚ್ಚಲಕ್ಕು ನಿನ್ನ ಪುರಾಣಾನೆಲ್ಲಾ, ಏಳೇ ಸುಮಾ ನೀ ಆಸರಿಗೆ ಬಾ, ಬಿಸೀ ಚಾ ಕುಡ್ದು ತೆಳ್ಳೇವು ತಿನ್ಲಕ್ಕು. ತಮ್ಮ ನಿಂಗೆ

ಪರೀಕ್ಷೆಬಂತು, ಅಕ್ಕ ಆಸರಿಗೆ ಕುಡ್ದು ಮಲಗಲಿ ಸ್ವಲ್ಪ. ಅಲ್ಲಿವರೆಗಾದ್ರೂ ನೀ ಓದ್ಕ ನಡಿ" ಎಂದು ಗದರಿದರು. "ತಡ್ಯೆ ಅಮ್ಮ ಅಕ್ಕಂಗೇನೂ ಬೇಜಾರಾಜಿಲ್ಲೆ. ಯಾವಾಗ ನೋಡಿರೂ ಓದು, ಓದು. ಸಾಕಾಗೋತು ನಂಗೆ. ಪರೀಕ್ಷೆಲಿ ಓದ್ಸಲೆ ಹೇಳೀ ಕರ್ಸಕಂಜೆ ಇದ್ರನ್ನ. ಕಡಿಗೆ ಓದ್ಸತು ಬಿಡು. ನಾನೂ ಇನ್ನೊಂದ್ಸಲ ಅಕ್ಕನ ಜೊತೆಗೇ ಆಸರಿಕುಡಿತಿ" ಎಂದು ಅಕ್ಕನನ್ನು ಅಪ್ಪಿದನು. "ಅಮ್ಮ ಇಂವೆಲ್ಲೂ ಬಿಡ್ತಿನಿಲ್ಲೆ..ನಾ ಮಧ್ಯಾಹ್ನ ಮಲಗ್ತಿ..ಈ ಕೋತಿನೂ ಮಲಗಿಸಿದ್ದಾಂಗಾಗ್ತು" ಎಂದು ತಮ್ಮನನ್ನು ಪ್ರೀತಿಯಿಂದ ಬಳಸಿಕೊಂಡೇ ತಿಂಡಿ ತಿಂದು ಮುಗಿಸಿದಳು ಸುಮತಿ. ಅಪ್ಪನ ಜೊತೆ ಹರಟೆ, ಅಮ್ಮನಿಗೆ ಸಹಾಯ , ತಮ್ಮನ ಜೊತೆ ಆಟ–ಇವುಗಳಲ್ಲಿ ಕಳೆದೇ ಹೋದಳು.

‘‘ನೀ ಎಂತದೇ ಹೇಳು ಕೂಸೆ ರಾಶಿನೇ ತಲೆಮೇಲೆ ಕೂರಸ್ಕಂಜೆ ಅವ್ನ.. ಈಗಿತ್ಲಾಗಂತೂ ಹಠಮಾರಿನೇ ಆಗ್ಹೋಜಾ, ಮಾಡಡಾ ಹೇಳಿದ್ನೇಯಾ ಮಾಡ್ತೆ ಅಂಬ. "ನೀ ಹೋದ್ಮೆಲೆ ಹಿಡ್ಯಲೇ ಆಗ್ತಿಲ್ಲೆ ಗೊತ್ತಿದ್ದ? ನಿನ್ನ ಮಾತೊಂದೇ ಕೇಳ್ತ, ಎಂತ ಬೇಕಿರೂ ಮಾಡ್ಲಿ.... ಆದ್ರೆ ಮೊನ್ನೆ ಅಷ್ಟೇ ತೆಗ್ಸಿದ್ದ ಬಾವಿ ಬಗ್ಗಡ ಹೇಳು. ಯಂಗವಂತೂ ಹೇಳಿ, ಹೇಳಿ ಸೋತ್ಹೋಜ, ದಿನಾ ಹೋಪದು ಎಷ್ಟು ನೀರು ಬಂಜು ನೋಡದು. ಅವಂಗೆ ಆಟ. ಕಾಲು–ಗೀಲು ಜಾರಿ ಬಿದ್ಹೋದ್ರೆ ಎಂತ ಮಾಡದು? ಇವ್ರಿಗೂ ಹೇಳಿ ಸೋತ್ಹೋದಿ ಆನು, ನೀವು ಬಾವಿ ದಂಡೆನ ಉಂಚೂರಾದ್ರೂ ಎತ್ರ ಮಾಡ್ಸಿ ಹೇಳಿ. ಇವತ್ತು ಮಾಡ್ತೆ ನಾಳಿ ಮಾಡ್ತೆ ಹೇಳೆ ಮುಂದ್ಹಾಕ್ತಾ ಇದ್ದೊ... ನೀನಾರೂ ಕೂರ್ಸಕಂಡಿ ಹೇಳಿಕ್ಕಿಹೋಗು"– ರಾತ್ರಿ ಮಗಳ ಪಕ್ಕದಲ್ಲೇ ಹಾಸಿಕೊಂಡು ಪವಡಿಸಿದ ತಾಯಿ ಮಗಳಲ್ಲಿ ತನ್ನ ಅಳಲನ್ನು ತೋಡಿಕೊಂಡಳು. ‘‘ನೀ ಎಂತ ಚಿಂತೆ ಮಾಡಡ್ದೆ ಆಯಿ. ದಿನ ಹೋದಾಂಗೆ ಅಂವಂಗೇ ಬುದ್ಧಿ ಬತ್ತು. ಆರನೇ ಕ್ಲಾಸಿಂದ ಹೇಂಗಿದ್ರೂ ಶೀನೂ ಮಾವನ ಮನೆಯಲ್ಲಿ ಇಡದು. ಆವಾಗ ತನ್ನಿಂದ ತಾನೇ ಥಂಡಾಗ್ತ. ಆಯಿ ನಾ ಸೋಮವಾರ ರಾತ್ರಿನೇ ಹೋಪಂವಾ.. ರಾಶಿನೇ ಕೆಲ್ಸ ಇದ್ದು. ರಾಜುಗಾಗಿ ಬಂದಿದ್ದು. ನಾ ಅವ್ನ ಹತ್ರ ಹೇಳಿದ್ನಿಲ್ಲೆ ಈಗಿಂದನೇಯಾ ಕೊಂಯ್ಯಿ ಗುಡ್ತ ಹೇಳಿ. ನಿಂಗಾರು ಎಂತಕ್ಕೆ ಅಂದಿ ಅಂದ್ರೆ ಕೊನೆಗಳಗೇಲಿ ಗಡಬಿಡಿ ಆಗ್ತೆ, ಅದು ಕಟ್ಟು, ಇದ್ನ ತಗೊ ಹೇಳಿ..ಈ ಸಲ ಚಟ್ನಿ ಪುಡಿ, ಸಂಡಿಗೆ ಎರಡನ್ನೂ ತಗ ಹೋಗ್ತಿ, ಲತಂಗೆ ಬೇಕಡ...ರಾಜೂನ ಚಿಂತೆ ಮಾಡಡಾ ನಾ ಹೋಪದ್ರೊಳ್ಗೆ ಹೇಳ್ತಿ ಬಿಡು. ನಾಳೆನೇ ಹೇಳಿರೆ ನಿಂಗವೇ ಹೇಳಿಕೊಟ್ರೆ ಹೇಳಿ ಬೇಜಾರು ಮಾಡ್ಕತ್ತ." ಎಂದು ಪಕ್ಕದಲ್ಲೇ ಅಪ್ಪಿ ಮಲಗಿದ್ದ ತಮ್ಮನಿಗೆ ಮುತ್ತನಿಟ್ಟಳು. ತಾಯಿ ಮಗಳ ಮಾತು ಸುಮಾರು ಹೊತ್ತು ನಡೆದಿತ್ತು. ನಿದ್ದೆ ಬಿದ್ದಾಗ ಮಧ್ಯರಾತ್ರಿಯೇ ಕಳೆದಿತ್ತೇನೋ.

"ತಂಗಿ ಪೊಟ್ನ ಎಲ್ಲಾ ಸರಿಯಾಗಿ ಕಟ್ಕಳೇ.. ಈಗ್ಲೇ ಬ್ಯಾಗಿಗೆ ಹಾಕ್ಯಂಬುಡು. ಕೊನೇ ಗಳಿಗೇಲಿ ಬಿಟ್ಟಿಕಿ ನಡೀತೆ. ಬಸ್ಸು ಒಂಭತ್ತಕ್ಕಲ್ದಾ ..." ಎನ್ನುತ್ತಾ ತಾಯಿ ಜಗುಲಿಗೆ ಬಂದರೆ, ಅಲ್ಲಿ ಬೇರೆಯೇ ಕಥೆ ನಡೆಯುತ್ತಿತ್ತು. ಮಗ ಜೋರಾಗಿ ನೆಲದಲ್ಲಿ ಹೊರಳಾಡಿ ಅಳುತ್ತಿದ್ದರೆ, ಮಗಳು ಆತನ್ನು ಸಮಾಧಾನಿಸಲು ಶತಃಪ್ರಯತ್ನ ಪಡುತ್ತಿದ್ದಳು. ಹೊರಗೆ ಮಳೆಯ ಆರ್ಭಟವೂ ರಾಜುವಿನ ಗೋಳಿಗೆ ತಾಳ ಹಾಕುವಂತಿತ್ತು. "ಇಶಿಶಿ.. ಎಂತದೋ ಮಾಣಿ ಇದು? ಆಳ್ಗ ಎಲ್ಲಾ ನೋಡ್ತಾ ಇದ್ದೊ ನೋಡು.. ಎಂತಕ್ಕೆ ಕೂಗ್ತಾ ಇದ್ದೆ ? ಎಂತ ಆತೆ ಸುಮ ಇವಂಗೆ?" ಒಳ ಬಂದ ಶ್ರೀಧರರು ಗದರಿದರು. "ಅಪ್ಪಯ್ಯ ಇಂವದು ಒಂದೇ ಹಠ..ನಾ ಇವತ್ತೇ ಹೋಗ್ಲಾಗ್ದಡ, ಪರೀಕ್ಷೆಮುಗ್ದ ಮೇಲೇ ಹೋಗವಡ. ಹದಿನೈದು ದಿನಗಟ್ಲೆ ರಜೆ ಕೊಡಲೇ ಕಂಪೆನಿ ಇವಂದ? ನಾಳೆ ನಾ ಅಲ್ಲಿರ್ಲೇ ಬೇಕು. ಒಂದು ರಿಲೀಸಿದ್ದು. ಬೇಕಾರೆ ಮುಂದಿನ ಶನಿವಾರ ಮತ್ತೆ ಬತ್ತಿ ಅಂದ್ರೂ ಕೆಳ್ತಾ ಇಲ್ಲೆ.. ಆಯಿ ನೀಯಾರೂ ಹೇಳೇ.." ಮಗಳ ಅಸಹಾಯಕತೆ ಕಂಡು ಸುಶೀಲಮ್ಮನಿಗೆ ಕನಿಕರವಾಯಿತು. "ರಾಜು ಎಂತದೋ ಇದು ನಿನ್ನ ಅವತಾರ? ಇಷ್ಟು ದೊಡ್ಡಂವ ಆಗಿ ಹೀಂಗನೋ ಮಾಡದು? ಹೀಂಗೆ ಅತ್ರೆ ಸುಮಕ್ಕಂಗೆ ಎಷ್ಟು ಬೇಜಾರಾಗಡ? ನಗ್ತಾ ಕಳ್ಸಿಕೊಡವಪ, ಎದ್ಕೊ ಮೇಲೆ. ಅಕ್ಕ ಮತ್ತೆ ಬರ್ತಾ ಇರ್ತು" ಎಂದು ಮಗನನ್ನು ಸಮಾಧಾನಿಸಿದಳು. ಅಂತೂ ಇಂತೂ ಅಕ್ಕನ ಮುದ್ದು, ಅಪ್ಪನ ಏಟಿನ ಭಯ, ಅಮ್ಮನ ಬೆಲ್ಲದ ಉಂಡೆ ಏನೋ ಒಂದು ರಾಜುವನ್ನು ತಹಬಂದಿಗೆ ತಂದವು.

ಸಮಾಧಾನಗೊಂಡ ತಮ್ಮನ ಮುಖ ತೊಳಿಸಿಕೊಂಡು ಹಿತ್ತಲಿಗೆ ಕೊಂಡೊಯ್ದಳು ಸುಮತಿ. ಅಲ್ಲೇ ಇದ್ದ ಮರದ ದಿಮ್ಮಿಯ ಮೇಲೆ ತಮ್ಮನ ಕೂರಿಸಿಕೊಂಡು ಮೆಲ್ಲನೆ ತನ್ನ ಕೈ ಬಿಡಿಸಿದಳು. ಅಕ್ಕನ ಕೈಯಲ್ಲಿದ್ದ ತನ್ನಿಷ್ಟದ ಕೊಕ್ಕೋ ಚೋಕೋಲೇಟ್‌ನ್ನು ಕಂಡು ಮುಖದಲ್ಲಿ ತುಸು ನಗು ಆವರಿಸಿತು. ತಾನು ಹೋಗುವಾಗ ಅತ್ತರೆ ಸಮಾಧಾನಿಸಲೆಂದೇ ಅದನ್ನು ಈವರೆಗೂ ಮುಚ್ಚಿಟ್ಟಿದ್ದಳು ಸುಮತಿ. ಸುತ್ತಲಿನ ವಾತಾವರಣ ಮನಸ್ಸಿಗೆ ಮುದ ನೀಡುವಂತಿದ್ದವು. ಆಗ ಮಾತ್ರ ಮಳೆಯಾರ್ಭಟ ನಿಂತಿದ್ದು, ಎಲೆಗಳಿಂದ ನೀರ ಹನಿ ತೊಟ್ಟಿಕ್ಕುತ್ತಿದ್ದವು. ಮಣ್ಣಿನ ಕಂಪನ್ನುನ್ನು ಬೀರುತ್ತಾ ತಂಗಾಳಿ ಹಿತನೀಡುತ್ತಿತ್ತು. ಸಂಜೆಯ ಸೂರ್ಯ ಮೋಡದೊಳಗೆ ಮರೆಯಾಗಿ ಇಣುಕಿಯಾಡುತ್ತಿದ್ದ. ಮಳೆನೀರೆಲ್ಲಾ ಒಟ್ಟಿಗೆ ಸೇರಿ ಅಲ್ಲೇ ಒಂದು ಚಿಕ್ಕ ಕಾಲುವೆ ನಿರ್ಮಾಣವಾಗಿತ್ತು. ಅದನ್ನೇ ನೋಡುತ್ತಾ ತಿನ್ನುತ್ತಿದ್ದ ರಾಜುವಿಗೆ ಥಟ್ಟನೆ ಯೋಚನೆಯೊಂದು ಬಂತು. ಚೋಕಲೇಟಿನ ಹೊರಕಾಗದದ ಎರಡೂ ತುದಿಗಳನ್ನು ತಿರುಪಿದ. "ಸುಮಕ್ಕ ನೋಡೆ ಈ ಕಾಗ್ದ ಸೀದ ಮುಂದಕ್ಕೆ ಹೋಗಿ

ಮರೆಯಾಗಿ ಹೋದ್ರೆ ನೀನಿವತ್ತು ಹೋಗ್ತೆ ಹೇಳಿ ಲೆಕ್ಕ. ಇಲ್ದೆ ಹೋದ್ರೆ ನೀ ಉಳ್ಕಳವು ಸರೀನಾ" ಎಂದ. ತಮ್ಮನ ಬಾಲಿಶ ಮಾತು ಕೇಳಿ ಅವಳಿಗೆ ನಗು ಬಂತು. ತಮಾಷೆಗಾಗಿ ಹೂಂ ಅಂದಳು. ಅದೂ ಅಲ್ಲದೆ ನೀರು ಮುಂದಕ್ಕೆ ಹರಿಯುತ್ತಿತ್ತು. ಕಾಗದ ಮುಂದೆ ಸರಿದು ಹೋಗುವುದು ಖಚಿತವಾಗಿತ್ತು. ಇದರಿಂದಾದರೂ ತಾನು ಪ್ರಯಾಣಿಸುವುದನ್ನು ಆತ ಸಮಾಧಾನದಿಂದಲೇ ಒಪ್ಪುವನೆಂದುಕೊಂಡಳು. ಅಕ್ಕನ ಒಪ್ಪಿಗೆಯಿಂದ ರಾಜು ಹುರುಪುಗೊಂಡ. ಕಾಗದವನ್ನು ನೀರಿಗೆ ಬಿಟ್ಟ. ಕುತೂಹಲದಿಂದ ಇಬ್ಬರೂ ನೋಡತೊಡಗಿದರು. ತುಸು ದೂರ ಹೋದಂತಾದ ಕಾಗದ ಥಟ್ಟನೆ ಗಾಳಿಗೆ ದಿಕ್ಕು ಬದಲಿಸಿ ಸುರುಳಿ ಸುತ್ತುತ್ತಾ ಅಲ್ಲೇ ಇದ್ದ ದೊಡ್ಡ ಕಲ್ಲಿಗೆ ಅಂಟಿಕೊಂಡಿತು. "ಹೇ! ಸುಮಕ್ಕ ನೀ ಹೋಪಲಾಗ್ತಿಲ್ಲೆ.. ನಾ ಹೇಳಿದ್ನಿಲ್ಯ? ನೀ ಇವತ್ತು ಖಂಡಿತ ಹೋಗ್ತಿಲ್ಲೆ" ಎಂದು ಕುಣಿಯುತ್ತಿದ್ದ ತಮ್ಮನ ಮುಖವನ್ನೇ ಕನಿಕರದಿಂದ ನೋಡಿದಳು ಸುಮತಿ. ಅಷ್ಟರಲ್ಲೇ ಅವನ ಗೆಳಯ ಶಶಿ ಆಡಲು ಕರೆದ. ರಾಜು ನಿಶ್ಚಿಂತನಾಗಿ ಆತನ ಜೊತೆ ತೋಟಕ್ಕೆ ಓಡಿದ, ಹಿಂದಿನಿಂದ 'ಹುಶಾರು ಮಾಣಿ ..' ಎಂದು ಕೂಗುತ್ತಿದ್ದ ಅಮ್ಮನನ್ನೂ ನೋಡದೇ.

ಇತ್ತ ಬಸ್ಸಿಗೆ ಇನ್ನೂ ಸಮಯವಿರಲು ತುಸುವೇ ದೂರದಲ್ಲಿದ್ದ ಊರಿನ ಶಿವನ ದೇವಸ್ಥಾನಕ್ಕೆ ಹೋದಳು ಸುಮತಿ. ರಾಜುವಿನ ಹೆಸರಿನಲ್ಲಿ ಹಣ್ಣು-ಕಾಯಿ ಮಾಡಿಸಿಕೊಂಡು ದಾರಿಯಲ್ಲಿ ಸಿಕ್ಕ ಪರಿಚಿತರೊಡನೆ ಕುಶಲೋಪರಿ ಕೇಳಿತ್ತಾ ಮನೆಯಕಡೆ ಹೊರಟಳು. ದೂರದಲ್ಲೇಲ್ಲೋ ಗುಡುಗಿನ ಸದ್ದು, ಕೋಲ್ಮಿಂಚೊಂದು ಕಂಡು ಮತ್ತೆ ಮಳೆಯಾರ್ಭಟದ ಸೂಚನೆಯಾಗಲು ನಡಿಗೆಯನ್ನು ವೇಗಗೊಳಿಸಿದಳು. ದಣಪೆಯ ಬಳಿ ಬರುವಾಗ ಪಕ್ಕದ ಮನೆಯವರು ಮುಂದಿದ್ದ ತೋಟದಿಂದ ಮೇಲೇರಿಬರುತ್ತಿದ್ದರು. ಎಲ್ಲರ ಮುಖದಲ್ಲೂ ಪ್ರೇತಕಳೆ. ರಾಜುವಿನ ಜೊತೆ ಆಡುತ್ತದ್ದ ಶಶಿ ಜೋರಾಗಿ ಅಳುತ್ತಿದ್ದರೆ, ಅವನಮ್ಮ ಅಪ್ಪಿಕೊಂಡು ಸಂತೈಸುತ್ತಿದ್ದಳು. "ಎಂತ ಆತೋ ಶಶಿ? ಎಂತಕ್ಕೆ ಅಳ್ತೆ? ರಾಜು ಎಂತಾರು ಅಂದ್ನಾ? ಎಲ್ಲಿ ರಾಜು?" ಸುಮಳ ಪ್ರಶ್ನೆಗಳಿಗೆ ಉತ್ತರಿಸುವ ಬದಲು ಶಶಿ ಮತ್ತಷ್ಟೂ ಜೋರಾಗಿ ಅಳತೊಡಗಿದ. ಅವನಮ್ಮ ಕಣ್ತುಂಬಿ ಕೊಂಡು "ಸುಮ ನೀ ಈಗ ಧೈರ್ಯ ತಂದಕಳವು. ಆಯಿ ಅಪ್ಪಯ್ಯನ ನೀನೇ ಸಮಾಧಾನಿಸವು. ಆಡ್ಬೇಕಿರೆ ಶಶಿ ಎಷ್ಟು ಬೇಡ ಅಂದ್ರೂ ರಾಜು ಬಾವಿನ ಬಗ್ಗಿ ನೋಡಲೆ ಹೋದ್ನಡ. ದಂಡೆ ರಾಶಿ ತಗ್ಗದಲ್ಲಿದ್ದಲಿ, ಮಳೆಬಂದು ಪಾಚಿಗಟ್ಟಿತ್ತು ಬೇರೆ.. ಅದ್ರ ಮೇಲೆ ಕಾಲು ಜಾರಿ ಬಾವಿಯೊಳಗೆ ಬಿದ್ನಡ. ನೀರು ಬೇರೆ ರಾಶಿ ಇತ್ತು, ಈಗಷ್ಟೇ ಮೇಲೆತ್ತಿ ಕಾರಲ್ಲಿ ಶಿರಸಿಗೆ ತಗ ಹೋದ. ಮೂಲೆ ಮನೆ ಶಿವ ಡಾಕ್ಟ್ರ ಆಸ

ಇಲ್ಲೆ ಹೇಳಿದ್ರು. ಆದ್ರೂವಾ ದೇವ್ರ ದೊಡ್ಡಂವ ಕಾಯ್ತ .." ಇನ್ನೂ ಏನೋ ಹೇಳುತ್ತಲೇ ಇದ್ದಳು ಆಕೆ.. ಆದರೆ ಅದಾವುದನ್ನೂ ಕೇಳುವ ಸ್ಥಿಯಲ್ಲೇ ಇರಲಿಲ್ಲ ಸುಮತಿ. ಕಣ್ಮುಂದ ಸಂಜೆ ತಮ್ಮ ಬಿಟ್ಟ ಕಾಗದವು ನೀರಲ್ಲಿ ಸುರುಳಿಯಾಗಿ ಸುತ್ತಿ ನಿಂತು, ಕಲ್ಲಿಗೆ ಬಡಿದ ದೃಶ್ಯವೇ ಕುಣಿಯತೊಡಗಿತು. "ಹೇ! ಸುಮಕ್ಕ ನೀ ಹೋಪಲಾಗ್ತಿಲ್ಲೆ.. ನಾ ಹೇಳಿದ್ನಿಲ್ಯ? ನೀ ಇವತ್ತು ಖಂಡಿತ ಹೋಗ್ತಿಲ್ಲೆ ...ಕಾಗ್ದ ಮುಂದೆ ಹೋಜಿಲ್ಲೆ... " ತಮ್ಮನ ಈ ಮಾತುಗಳೇ ಕಿವಿಯೊಳಗೇ ಮೊರೆಯತೊಡಗಿದವು.. ಸಿಡಿಲು ಬಡಿದಂತಾಗಿ ಸುಮತಿ ಅಲ್ಲೇ ಕುಸಿದಳು.

* * *

(ಅ)ಬಲೆ

'ಗಣಪ ಗಣಪ ಏಕದಂತ ಪಚ್ಚೆ ಕಲ್ಲು ಪಾಣಿ ಪೀಠ,
ಮುತ್ತಿನುಂಡೆ, ಹೊನ್ನ ಗಂಟೆ, ಒಪ್ಪುವ ಒಪ್ಪುವ
ಶ್ರೀ ವಿಘ್ನೇಶ್ವರನಿಗೆ ಜಯವಾಗಲಿ'– ಎಂದು ದೇವರಿಗೆ ಅಡ್ಡ ಬಿದ್ದು ಪಾಟೀ ಚೀಲವೇರಿಸಿ ಶಾಲೆಗೆ ಹೊರಡಲನುವಾದಳು ಕಮಲ. ಆಗಷ್ಟೇ ಅಡುಗೆ ಮನೆಯಿಂದ ಬಂದ ಶಾಂತಳಿಗೆ ಮಗಳು ಹೊರಟಿದ್ದು ಕಂಡು ಆಶ್ಚರ್ಯವಾಯಿತು.

"ಕಮಲಿ ನಿನ್ನೆನೇ ನಾ ಹೇಳಿದ್ನಿಲ್ಯ ನೀ ಇವತ್ತು ಶಾಲಿಗೆ ಹೋಪಲಾಗ್ತಿಲ್ಲೆ ಹೇಳಿ. ಬೇಗ ಹಿತ್ಲಿಗೆ ಹೋಗಿ ಹೂವೆಲ್ಲಾ ಕೊಯ್ಕ ಬಾ. ಬಿಸಲೇರಿದ್ರೆ ಬಾಡಿ ಹೋಗ್ತು. ಯಂಗ್ ಬೇರೆ ಏನೂ ಕೂಡ್ತಿಲ್ಲೆ, ನಿನ್ನೆ ರಾತ್ರಿಯಿಂದನೇ ದಮ್ಮು ಕಟ್ತಾ ಇದ್ದು. ತಮ್ಮಂಗೆ ಬೇರೆ ಜ್ವರ ಬಂಜು, ಸಂಜೆಯಾದ್ರೂ ಔಷಧಿಗೆ ಹೋಗವು. ನಡಿ ಮೊದ್ಲು". ಅಮ್ಮನ ಮಾತು ಕೇಳಿ ಕಮಲಿಯ ಮುಖ ಚಿಕ್ಕದಾಯಿತು. "ಆಯಿ ನಾ ಇವತ್ತು ಶಾಲಿಗೆ ಹೋಗಲೇ ಬೇಕು. ಬಾಬಣ್ಣ ಮಾಸ್ಟ್ರು ಹೊಸ ಸಂಗೀತ ಹೇಳಿಕೊಡ್ತರಡ. ಇವತ್ತೊಂದಿನ ಹೂವಿನ ಮಾಲೆಗಳನ್ನ ಮಾಡ್ದೇ ಹೋದ್ರೆ ಎಂತ ಆಗ್ತು? ನಾ ಹೋಪಂವನೇಯಾ" ಎಂದು ಮುಖ ಊದಿಸಿದಳು. ಮಗಳ ಮಾತು ಕೇಳಿ ಶಾಂತಳಿಗೆ ಸಿಟ್ಟೇ ಬಂತು.

ನಿಂಗೆ ಒಂದ್ಸಲ ಹೇಳಿರೆ ಅರ್ಥ ಆಗ್ತಿಲ್ಯ? ಎಂಟು ವರ್ಷದ ಕೋಣ, ಮನೆ ಪರಿಸ್ಥಿತಿ ಗೊತ್ತಿದ್ದೂ ಹಿಂಗ್ ಮಾತಾಡ್ತೆ! ನಿನ್ನ ಅಪ್ಪ ಹೇಳಂವ ಕುಡ್ದು ಹಾಳಾಗಿ ಯಂಗಳನ್ನೆಲ್ಲಾ ಅನಾಥರ ಮಾಡಿ ಹೋದ. ಇನ್ನು ನಾನೋ ದಮ್ಮ ಹಿಡ್ಕಿ , ಹೂ ಮಾರಿ ಬಂದ್ ಹಣದಲ್ಲಿ ನಾಲ್ಕ ಕಾಸಾದ್ರೂ ಬತ್ತು. ತಮ್ಮನ ಔಷಧ, ನಂಗಕಗೆ ಒಂದ್ಹೊತ್ತಿನ ಊಟನೂ ಸಿಗ್ತು. ನಾ ಹೋಗಿ ಹೂ ಮಾರಾನ ಅಂದ್ರೆ ಇವ್ನ ಹೊತ್ಕ ಹೋಗವು. ನಿನ್ನ ಶಾಲೆಗೆ ಮಣ್ಣು ಹಾಕು. ನೀ ಕಲ್ತು ಗುಡ್ಡೆ ಹಾಕುದ್ರಲ್ಲಿ ಅಷ್ಟೇ ಇದ್ದು. ದೂಸರಾ ಮಾತು ಬೇಡ. ನಡಿ ಮೊದ್ಲು." - ಎಂದು ಚೆನ್ನಾಗಿ ಗದರಿ ಬಚ್ಚಲಿಗೆ ನಡೆದಳು, ತುಂಬಿದ ಕಣ್ಣೀರು ಮಗಳಿಗೆ ಕಾಣಬಾರದೆಂದು. ತನ್ನ ಅಸಹಾಯಕತೆಗೆ ಮಗಳನ್ನು ಬಲಿ ಕೊಡುತ್ತಿರುವುದು ಶಾಂತಳಿಗೆ ತುಂಬಾ ಹಿಂಸೆಯಾಗುತ್ತಿತ್ತು. ಆದರೆ ಮನೆಯೊಡೆಯನಿಲ್ಲದ ಮನೆ, ದೇವನಿಲ್ಲದ ಗುಡಿಯಂತಾಗಿತ್ತು. ಕಾಯುವವ ಮೇಲಿದ್ದಾನೆಂದು ಮಾತ್ರ ಆಕೆ ನಂಬಿದ್ದಳು. ಹಂಡೆಗೆ ನೀರು ತುಂಬಿಸಿ, ಬೆಂಕಿ ಹಾಕಲು ಕುಳಿತರೆ ಹಸಿ ಕಟ್ಟಿಗೆ ಉರಿಯಲೊಲ್ಲೆ ಎನ್ನಲು, ಕಣ್ಣೀರು ಧಾರೆಯಾಗಿ ಹರಿಯಿತು..

ಇತ್ತ ಕಮಲಳ ಕಣ್ಣುಗಳು ತುಂಬಿದ ಕೊಡಗಳಾದವು. ಹಾಸಿಗೆಯಲ್ಲಿದ್ದ ತಮ್ಮನು ಕಾಣಲು ಕಣ್ಣೊರೆಸಿಕೊಂಡು, ಭಾರವಾದ ಹೆಜ್ಜೆಗಳೊಂದಿಗೆ ಹಿತ್ತಲಿಗೆ ನಡೆದಳು. “ಹಾಳಾದ್ ಗೀತ ಶಾಪ ಹಾಕಿರವು ನಂಗೆ... ನಾ ಇವತ್ತು ಬರ್ಲಾಗ ಹೇಳಿ. ಅದ್ರಕ್ಕಿಂತ ಚೊಲೋ ಹಾಡ್ತಿ ನೋಡು ಅದಕೇಯಾ.. ಇರಲಿ ಒಂದ್‌ದಿನ ಹೋದ್ರೆ ಏನಾತು? ನಾಳೆ ನಾನೇ ಚೊಲೋ ಹೇಳಿ ಅದ್ರ ಸೊಕ್ಕ ಮುರೀತಿ. ಅಮ್ಮಂಗೆ ಎಂತ ತೆಳೀತು? ನಾ ಕಲ್ತರೆ ದೊಡ್ಡ ಆಫೀಸರ್ ಆಗಿ ತಮ್ಮನ್ನೂ ಚೆನ್ನಾಗಿ ನೋಡ್ಕಂಬಲೆ ಆಗ್ತಿಲ್ಯ? ಆಮ್ಮನ ಹತ್ರಾ ಮಾತಾಡವು ಕಡಿಗೆ” ತನ್ನೊಳಗೇ ಹಲುಬುತ್ತಾ ಹೂ ತೋಟಕ್ಕೆ ಬಂದಳು ಕಮಲ.

ತೋಟದ ತುಂಬೆಲ್ಲಾ ಹೂವುಗಳು ಅರಳಿ ನಗುತ್ತಿದ್ದವು, ನಾಳೆಯ ಹಂಗು ನಮಗಿಲ್ಲ ಎಂಬಂತೆ.

ಇನ್ನೂ ಬಿಸಿಲೇರದಿದ್ದ ಕಾರಣ ಘಟ್ಟದ ತಂಪುಗಾಳಿ ಹಿತವಾಗಿ ಬೀಸಿ ಕಮಲಿಗೆ ಸ್ವಾಗತ ಕೋರಿದವು. ಜಾಜಿ, ಗೊಂಡೆ, ಸಂಪಿಗೆ, ಕೇದಿಗೆ, ಅಬ್ಬಮಲ್ಲಿಗೆ, ಗುಲಾಬಿ, ಡೇರೆ ಹತ್ತು ಹಲವು ಬಗೆಗಳ ಹೂಗಳನ್ನು ನೋಡಿ ಹುಡುಗಿಯ ಮೊಗದಲೂ ನಗುವರಳಿತು. ‘ಛೇ ಈಗ ಮೂಲೆ ಮನೆ ಲತಾ ಇದ್ದಿದ್ರೆ ಎಷ್ಟು ಚೊಲೋ ಆಗ್ತಿತ್ತು?! ನಾನೂ ಅದು ಸೇರಿ ವೊನ್ನೆ ಶಾಲೇಲಿ ಕಲ್ತ ಹಾಡನ್ನು ಕುಣಿಯುಲಾಗ್ತಿತ್ತು...’ ಮನದಲ್ಲೇ ಅಂದುಕೊಂಡರೂ ಹಾಡು ಬಾಯಿಗೆ ಬಂದಾಗಿತ್ತು.

ಬಾ ಸಖಿ ಆಡುವಾ ಬಾಲೆಯರೆಲ್ಲಾ ಕೂಡುವಾ
ಲೇಸಿನಿಂದ ಆಡುವಾಗ ಬೇಸರವನ್ನೇ ಕಳೆಯುವಾ
ಚೊಕ್ಕ ಕೊಳದ ನೀರನ್ನು ಪುಟ್ಟ ಕೊಡಕೆ ತುಂಬುವಾ
ಅಕ್ಕರೆಯಿಂದ ತಂದು ನಾವು ಚಿಕ್ಕ ಸಸಿಗೆ ಎರೆಯುವಾ
ಹಸಿರು ವನಕೆ ಪೋಗುವಾ ಕುಸುಮಗಳನು ಕೊಯ್ಯುವಾ
ಹಸನವಾದ ಮಾಲೆ ಮಾಡಿ ಕರಿಯ ಜಡೆಗೆ ಮುಡಿಯುವಾ
ಬಾ ಸಖಿ ಆಡುವಾ ಬಾಲೆಯರೆಲ್ಲಾ ಕೂಡುವಾ
ಲೇಸಿನಿಂದ ಆಡುವಾಗ ಬೇಸರವನ್ನೇ ಕಳೆಯುವಾ..

ಹಾಡುತ್ತಾ, ಕುಣಿಯುತ್ತಾ ತನ್ನ ಮನದ ಬೇಸರವನ್ನೆಲ್ಲಾ ಕಳೆಯುತ್ತಾ ಹೂಗಳನ್ನೆಲ್ಲಾ ಕೊಯ್ದು ಬುಟ್ಟಿಯೊಳಗೆ ತುಂಬಿದಳು. ವೇಳೆಯಾಯಿತು ಅಮ್ಮ ಬೈವಳೆಂದುಕೊಳ್ಳುತ್ತಾ ಮನೆಯ ಕಡೆ ಓಡಿದಳು. ಹೊತ್ತಾದರೂ ಬರದ ಮಗಳನ್ನು ಕಾಯುತ್ತಾ ಅಲ್ಲೇ ಜಗುಲಿಯಲ್ಲಿ ಕುಳಿತಿದ್ದಳು ಶಾಂತಾ. ತೊಡೆಯಲ್ಲಿ ಮಗ ನರಳುತ್ತಿದ್ದರೆ, ದಮ್ಮಿನ ಖೆಮ್ಮು ಆಕೆಯ

ಎದೆಗೂಡನ್ನು ಒತ್ತಿ ಮೇಲೇರಿ ಬರುತ್ತಿತ್ತು. "ಎಂತಕ್ಕೆ ಇಷ್ಟೊತ್ತಾತು ಕೂಸೆ? ನಿಂಗೊಚೂರು ಸಮಯದ ಬೆಲೆ ಗೊತ್ತಿಲ್ಲೆ. ಆಟ-ಕುಣಿತ ಒಂದೇಯಾ.. ಹೊತ್ತಾದ್ರೆ ಹೂ ಮಾಲೆಯೆಲ್ಲಾ ಬಾಡ್ಹೋಗ್ತಿಲ್ಯ? ಕಡಿಗೆ ಯಾರು ತಗತ್ತ ಅದ್ನ? ದೊಡ್ಡ ರಸ್ತೆಗೆ ಹೋಪಲೆ ಒಂದ್ ಮೈಲಿ ನಡ್ಕ ಬೇರೆ ಹೋಗವು. ಸರಿ ತಾ ಮಾಲೆ ಮಾಡನ" ಎಂದು ಅವಸರಿಸಿ ಬುಟ್ಟಿ ಎಳೆದು ಕೊಂಡಳು. ಕೆಲವೇ ನಿಮಿಷಗಳಲ್ಲಿ ಕನಕಾಂಬರ, ಮಲ್ಲಿಗೆ, ಜಾಜಿ ಮುಂತಾದ ಹೂಗಳ ಸುಂದರ ಮಾಲೆ ತಯಾರಾದವು. ಹಿಂದಿನ ರಾತ್ರಿಯೇ ನೀರಲ್ಲಿ ನೆನಸಿಟ್ಟ ಬಾಳೆ ನಾರಿನಲ್ಲಿ ಮುತ್ತುಗಳನ್ನು ಪೋಣಿಸಿಟ್ಟಂತೆ ಹೂವುಗಳು ನಗುತ್ತಿದ್ದವು.. ಗಿಡದಲ್ಲಿದ್ದರೂ ಇಲ್ಲದಿದ್ದರೂ ನಗುವುದು ನಮ್ಮ ಸಹಜ ಧರ್ಮವೋ ಎಂಬಂತೆ. ಅಮ್ಮನ ಕೈ ಚಳಕ ನೋಡಿ ಮಲ್ಲಿಗೆ ಹೆಮ್ಮೆಯಾಯಿತು. ಒಂದು ಮೊಳ ಹೂವನ್ನಾದರೂ ಅಮ್ಮ ಆಕೆಯ ಹಾವಿನಂತಹ ಕರಿಯ ಜಡೆಗೆ ಮುಡಿದಿರೆ ಎಷ್ಟು ಚೆನ್ನ ಎಂದೆನಿಸಿತು. ಕೇಳಲು ಭಯ, ಒಮ್ಮೆ ಹಾಗೆ ಕೇಳಿಸಿಕೊಂಡು ಚೆನ್ನಾಗಿ ಬೈಸಿಕೊಂಡಿದ್ದಳು. ಕುಡಿದ ಮತ್ತಿನಲ್ಲಿ ಅಪ್ಪ ಬಂದು ಅಮ್ಮನ ಹೊಡೆಯುವಾಗ ಆಕೆಗೆ ಅನಿಸಿದ್ದುಂಟು 'ಈ ಅಪ್ಪ ಹೇಳಂವ ಯಾಕಾದ್ರೂ ಇದ್ನೋ ಎಂತೋ' ಎಂದು. ಆದರೆ ಈಗ ಅಮ್ಮ ತಾನೇ ನೆಟ್ಟು ಬೆಳಿಸಿ ಕಟ್ಟುವ ಹೂ ಮಾಲೆ ಮುಡಿಯದಂತಾಗಿರಲು ತುಂಬಾ ನೋವಾಗುತ್ತಿತ್ತು, ಅಮ್ಮ ಹೂ ಮುಡಿಯಲಿಕ್ಕಾದರೂ ಅಪ್ಪ ಇರಬೇಕಿತ್ತೆಂದುಕೊಳ್ಳುತ್ತಿದ್ದಳು.

ತಾಯಿ ಕೊಟ್ಟ ಗಂಜಿ ಕುಡಿದು ಬುಟ್ಟಿಯಲ್ಲಿ ಹೂಗಳನ್ನು ಹಾಕಿಕೊಂಡಳು.. ನೀರನ್ನು ಸಿಂಪಡಿಸಿಕೊಂಡು ಸವೆದ ಚಪ್ಪಲಿಗಳನ್ನೇರಿಸಿ ಹೊರಟಳು ಕಮಲ. ಹನಿತುಂಬಿದ ಕಣ್ಣಿಂದ ಮಗಳು ಹೋಗುವುದನ್ನೇ ನೋಡುತ್ತಿದ್ದಳು ಶಾಂತ.ಹೊಟ್ಟೆಯೊಳಗೆ ಏನೋ ತಳಮಳ. ಯಾರೋ ಕರುಳ ಬಳ್ಳಿಗೇ ಕತ್ತರಿ ಹಾಕಿದಂತೆ, ಒಳಗೆ ಮಗನ ನರಳುವಿಕೆ ಕೇಳಲು ಒಳನಡೆದಳು.

ಮನೆಯಿಂದ ಹೆದ್ದಾರಿ ಸುಮಾರು ಒಂದು ಮೈಲಿಯಷ್ಟು ದೂರವಿತ್ತು. ಸೂರ್ಯ ನೆತ್ತಿಯ ಕಡೆ ವಾಲುತ್ತಿದ್ದ. ಅಕ್ಕ ಪಕ್ಕದಲ್ಲೆಲ್ಲೂ ಮನೆಗಳಿಲ್ಲ. ಹುಲ್ಲು ಮುಳಿಗಳಿಂದ ತುಂಬಿದ ಗುಡ್ಡ. ಮಣ್ಣಿನ ದಾರಿಯಲ್ಲಿದ್ದ ಕಲ್ಲೊಂದು ಸವೆದ ಚಪ್ಪಲಿಯ ತೂರಿ ಎಡಗಾಲಿಗೆ ಬಡಿಯಲು, ಕಣ್ಣಲ್ಲಿ ನೀರು ಬಂತು 'ಅಮ್ಮಾ..' ಎಂದು ಕೂಗುತ್ತಾ ಅಲ್ಲೇ ಕುಳಿತಳು. ತುಸು ಸಾವರಿಸಿಕೊಂಡು ಆ ಕಲ್ಲನ್ನೇ ಕೋಪದಿಂದ ನೋಡುತ್ತಾ ಬಲಗಾಲಿನಿಂದ ತನ್ನ ಶಕಿಯನ್ನೆಲ್ಲಾ ಹಾಕಿ ಒದ್ದಳು... ತನ್ನೊಳಗಿನ ಆಸೆಗಳನ್ನೆಲ್ಲಾ ಎತ್ತಿ ಎಸೆಯುವಂತೆ. 'ಅಮ್ಮಂಗೆ ಹೇಳವು ಶಿರಸಿ ಜಾತ್ರೆಗೆ ನಂಗೆ ಹೊಸ ಅಂಗಿ ಬೇಡ, ಚಪ್ಪಲಿನೇ ತೆಗ್ಸಿಕೊಡು ಹೇಳಿ.. ಎಂದುಕೊಳ್ಳುತ್ತಾ ಮುಂದೆ ಸಾಗಿದರೆ, ಕಂಡಿತು

ಕುಸುಮಾಲೆ ಹಣ್ಣು. ಕೆಂಪಾಗಿ, ನುಣ್ಣಗಿದ್ದ ಹಣ್ಣುಗಳನ್ನು ತಿನ್ನುತ್ತಾ ಕಾಲಿನ ಗಾಯದ ನೋವು ಮರೆಯಾಯಿತು. ಹಣ್ಣುಗಳನ್ನು ತಿನ್ನುತ್ತಾ, ಹಾಡುಗಳನ್ನು ಗುನಗುನಿಸುತ್ತಾ ಹೆದ್ದಾರಿಯನ್ನು ಸೇರುವಾಗ ತಾಸೇ ಕಳೆದಿತ್ತು. ಕಿವಯಿಂದಿಳಿದು ಕೆನ್ನೆ ಸೇರಿದ ಬೆವರನ್ನು ಅಂಗಿಯ ತುದಿಯಲ್ಲಿ ಒರೆಸಿಕೊಳ್ಳುತ್ತಾ ಮರದ ಬುಡವೊಂದಕ್ಕೆ ಬಂದಳು ಕಮಲ.

ಸುಮಾರು ತಾಸುಗಳೇ ಕಳೆದವು. ಮನುಷ್ಯರ ಸುಳಿವೇ ಇಲ್ಲಾ . ಪೇಟೆಯ ಕಡೆ ಹೋಗುವ ಗಾಡಿಗಳಿಗೆಲ್ಲಾ ಕೈಮಾಡಿ ಸೋತು ಹೋದಳು. ಯಾರೊಬ್ಬರೂ ಕಮಲಿಯನ್ನಾಗಲಿ, ಕೈಯಲ್ಲಿದ್ದ ಮಾಲೆಗಳನ್ನಾಗಲೀ ಕಣ್ಣೆತ್ತೂ ನೋಡಲಿಲ್ಲ. ಸಮಯ ಕಳೆಯಲು ಹೊಟ್ಟೆ ಚುರುಗುಟ್ಟಿತು. ಪಕ್ಕದಲ್ಲೇ ಇದ್ದ ಬೋರ್‌ವೆಲ್ ನೀರನ್ನು ಕುಡಿದು ತಂಪಾಗಿಸಿಕೊಂಡು, ಮಾಲೆಗಳು ಬಾಡದಂತಿಡಲು ಸ್ವಲ್ಪ ನೀರನ್ನು ಚಿಮುಕಿಸಿಕೊಂಡಳು.

ರವಿ ಈಗ ತನ್ನ ಪ್ರಖರತೆಯನ್ನು ಕಳೆದುಕೊಳ್ಳತೊಡಗಿದ್ದ. ಮಲ್ಲಿಯ ಮನ ನಿರಾಸೆ ಮತ್ತು ಬೇಸರದ ಗೂಡಾಗಿತ್ತು. ಸಂಜೆಯಾಗುವುದರೊಳಗೆ ಮಾಲೆಗಳನ್ನು ಮಾರಿ ಮನೆಯನ್ನು ಬೇರೆ ಸೇರಬೇಕಿತ್ತು. ಮನೆಯ ನೆನಪಾದೊಡನೆ ಕಣ್ಣಲ್ಲಿ ನೀರು ಬಂತು. ಮಾವಿನ ಮರದ ಕೋಗಿಲೆಯೊಂದು ಕುಹೂ .. ಎನ್ನಲು, ಕಣ್ಣೀರೊರೆಸಿಕೊಂಡು ತಾನೂ ಕುಹೂ.. ಎಂದಳು, ಆಕೆಯ ನೋವಿಗೆ ತನ್ನ ಹಾಡೊಂದೇ ಮದ್ದು ಎಂಬಂತೆ ಕೋಗಿಲೆ ಮತ್ತೆ ಮಾರ್ದನಿಯಿತು. ಹೀಗೇ ಮತ್ತಷ್ಟು ತಾಸುಗಳು ಕಳೆದವು. ಜನರ ಸುಳಿವೇ ಇಲ್ಲಾ. ಸಮಯ ಜಾರಿದಂತೆ ಮಲ್ಲಿಯ ಮನದಲ್ಲಿ ನಿರಾಸೆಯ ಕಾರ್ಮೋಡ ಕವಿದು ಕಣ್ಣೀರು ಬಂತು. ಇನ್ನು ಯಾರೂ ಕೊಳ್ಳರೆಂದುಕೊಳ್ಳುತ್ತಾ ಸೋತ ಹೆಜ್ಜೆಯನ್ನು ಹಾಕಿದಳು ಮನೆಯ ಕಡೆಗೆ.

ಆಗ ಕೇಳಿತು ದೂರದಲ್ಲೇಲ್ಲೋ ಕಾರಿನ ಸದ್ದು. ಕವಿದ ಕಾರ್ಮೋಡ ಸೀಳಿ ಆಶಾ ಕಿರಣಮೂಡಿದಂತಾಯಿತು. ಪುಟ್ಟ ಕೈಯನ್ನು ಇಷ್ಟುದ್ದ ಮಾಡಿ ಇದ್ದುದರಲ್ಲಿಯೇ ಚೆನ್ನಾದ ಮಾಲೆಗಳನ್ನು ಮುಂದೆಮಾಡಿದಳು. ಹಸಿವು, ಆಯಾಸಗಳಿಂದ ಬಸವಳಿದ ಮುಖ, ಮಾಸಲು ಅಂಗಿ, ಕೆದರಿದ ಕೂದಲು, ಸವೆದ ಚಪ್ಪಲಿಗಳು– ದೈನ್ಯವೇ ಮೂರ್ತವೆತ್ತಂತೆ ನಿಂತಿದ್ದಳು ಕಮಲ.

ಭರ್ರೆಂದು ಕಾರು ಅವಳ ದಾಟಿ ತುಸು ದೂರ ಹೊದರೂ ಮತ್ತೆ ತಿರುಗಿ ಅವಳ ಬಳಿ ಬಂದು ನಿಂತಿತು. "ಸ್ವಲ್ಪ ಹೂ ತಗೊಳೋಣ್ವಾ? ಹೇಗಿದ್ರೂ ಪೇಟೆಲಿ ತಗೋ ಬೇಕು. ಲೇಟಾದ್ರೆ ಅಲ್ಲಿ ಸಿಗತ್ತೋ ಇಲ್ವೋ !" ಆಕೆ ಆತನನ್ನು ಕೇಳಿದಳು. ಕ್ಷಣ ಆತ ಯೋಚಿಸಿದ. ಏನೋ ಹೊಳೆದಂತಾಗಿ ಕಮಲಿಯ ಕಡೆ ತಿರುಗಿದ. ಆಸೆ ಕಣ್ಣಗಳು ಆತನ್ನೇ

ದಿಟ್ಟಿಸುತ್ತಿದ್ದವು. "ಲೇ ಹುಡುಗಿ ಎಷ್ಟು ಮೊಳವಿದೆ ಇಲ್ಲಿ" ಎಂದು ಕೇಳದಾಕ್ಷಣ ಥಟ್ಟನೆ "ಏಳು ಮೊಳ ಅಣ್ಣ" ಎಂದುತ್ತರಿಸಿದಳು. "ಸರಿ ಹಾಗಿದ್ರೆ ಎಲ್ಲಾ ಮೊಳ ಕೊಡು. ತಗೋ ದುಡ್ಡು" ಎಂದು ನೂರರ ಎರಡು ನೋಟುಗಳನ್ನಿತ್ತ. ಅಷ್ಟೊಂದು ದುಡ್ಡನ್ನು ಕಮಲಿಯೆಂದೂ ಕಂಡಿದ್ದಿಲ್ಲ. ಆಯೋಮಯಗೊಂಡು ಆತನ್ನೇ ನೋಡಿದಳು. ಪಕ್ಕದಲ್ಲಿ ಕುಳಿತಿದ್ದಾಕೆ ಏನೋ ಹೇಳಲು ಹೋಗಲು ಕಣ್ಸನ್ನೆಯಲ್ಲೇ ಸುಮ್ಮನಾಗಿಸಿ "ಪರವಾಗಿಲ್ಲ ಇಟ್ಟುಕೋ.." ಎಂದು ಹೊರಟೇ ಬಿಟ್ಟ. ಕಮಲಿಗೆ ತುಂಬಾ ಸಂತೋಷವಾಯಿತು.. ಬೆಳಗಿನಿಂದ ಕಾದು ಸೋತಹೋಗಿದ್ದ ಅವಳಲ್ಲಿ ನವ ಚೈತನ್ಯ ತುಂಬಿದಂತಾಯಿತು. 'ಬಾ ಸಖಿ ಆಡುವಾ ಬಾಲೆಯರೆಲ್ಲಾ ಕೂಡುವಾ..' ಎಂದು ಹಾಡುತ್ತಾ, ಕುಣಿಯುತ್ತಾ, ನೋಟುಗಳನ್ನೇ ನೋಡುತ್ತಾ ಹೊಸ ಹುರುಪಿನಿಂದ ಮನೆಯ ಕಡೆ ಹೊರಟಳು, ಕಣ್ಣಲಿ ಹೊಸ ಅಂಗಿ, ಚಪ್ಪಲಿಗಳ ಕನಸುಗಳ ಹೊತ್ತು.

ಇತ್ತ ಕಾರೊಳಗೆ ಆಕೆ ಆತನನ್ನು ತರಾಟೆಗೆ ತೆಗೆದುಕೊಂಡಳು. "ದುಡ್ಡು ಹೆಚ್ಚಾಗಿದ್ಯಾ ನಿನಗೆ? ಒಂದ್ ಮೊಳ ಹೂವಿಗೂ ಅಳೆದೂ ಸುರಿದೂ ಚೌಕಾಶಿ ಮಾಡುವವ, ಇವತ್ತು ಸೊರಗಿದ ಅಷ್ಟೊಂದು ಮಾಲೆಗಳನ್ನ ತಗೊಂಡ್ಯಲ್ಲಾ? ಅಯ್ಯೋ ಪಾಪ ಚಿಕ್ಕ ಹುಡ್ಗಿ ಅಂತ ಒಂದ್‌ಮೊಳ ತಗೋ ಅಂದ್ರೆ...ನೀನೂ ಸರಿ.. ಎಲ್ ಹೋಯ್ತು ನ್ನ ಕಂಜೂಸ್ ಬುದ್ಧಿ? " ಎಂದು ಕಿಚಾಯಿಸುತ್ತಾ ಆಕೆ ತಿರುಗಿದರೆ, ಆತ ನಗುತ್ತಿದ್ದ ! "ಲೇ ಮಂಕೆ ನಾನೇನೂ ಪೆದ್ದನಲ್ಲ...ಅವತ್ತು ನನಗೆ ಯಾರೋ ಟೋಪಿ ಹಾಕಿದ್ರು ಅಂದ್ನಲ್ಲಾ ..ಆ ನೋಟುಗಳನ್ನೇ ನಾನು ಕೊಟ್ಟಿದ್ದು ಆ ಹುಡುಗಿಗೆ... ಅವುಗಳು ಖೋಟಾ ನೋಟುಗಳು..ನಯಾ ಪೈಸೆ ಖರ್ಚಿಲ್ಲದೆ ನಿಂಗೆ ಇಷ್ಟೊಂದು ಮಾಲೆಗಳು ಸಿಕ್ಕಿದ್ವೋ ಇಲ್ವೋ.." ಎಂದು ಗಹಗಹಿಸಿ ನಕ್ಕ, ಬೇಟೆಗಾರ ತನ್ನ ಬಲೆಯೊಳಗೆ ಸಿಕ್ಕಿಬಿದ್ದಿದ್ದ ಮಿಗವೊಂದನ್ನು ನೆನೆಸಿಕೊಂಡು ನಗುವಂತೆ.

***





• ತೇಜಸ್ವಿನಿ

ಜನ್ಮದಿಂದಲೇ ದೈಹಿಕ ದೌರ್ಬಲ್ಯವಿದ್ದರೂ, ಆತ್ಮಿಕ ಸ್ಥೈರ್ಯದಿಂದ ಅದೆಲ್ಲವೂ ಏನಲ್ಲವೆಂದು ಸ್ವಾಭಿಮಾನದಿಂದ ಶಾಲಾಬಾಲಿಕೆಯಾಗಿಯೇ ಗೀತೆ, ಗಾಯನ, ನಾಟಕ, ಭಾಷಣ ಸ್ಪರ್ಧೆಗಳಲ್ಲಿ ರಂಗದಲ್ಲಿದ್ದು ಪ್ರಶಸ್ತಿ ಪಡೆದು ತನ್ನ ತೇಜಸ್ಸನ್ನು ತೇಜಸ್ವಿನಿ ತೋರಿಸಿದ್ದಾರೆ. ಪ್ರೌಢಶಾಲೆಯಲ್ಲಿ ಕನ್ನಡ ಕಲಿಸಿದ ಶಿಕ್ಷಕರಿಂದ ಪ್ರೇರಣೆ ಪಡೆದು 'ಚಿಗುರು' ಕವನ ಸಂಗ್ರಹ ಬಿಡುಗಡೆ (1995) ಕೆನರಾ ಕಾಲೇಜಿನಿಂದ ಬಿ.ಎಸ್ಸಿ., ಮೈಸೂರು ಮುಕ್ತ ವಿ.ವಿ.ಯಿಂದ ಕನ್ನಡ ಎಂ.ಎ., ಕಂಪ್ಯೂಟರ್ ತರಬೇತಿ; ವರಿಸಿ ಬಂದ ರಾಮಕೃಷ್ಣ ಹೆಗಡೆಯ ಪತ್ನಿಯಾಗುವ ಸೌಭಾಗ್ಯ, ಪ್ರತಿಬಿಂಬ ದಂತಿರುವ 'ಅದಿತಿ'ಯ ತಾಯಿ; ಹೀಗಿದ್ದು ಕಥೆ, ಕವನಗಳ ರಚನೆಯೊಂದಿಗೆ ನೋವನ್ನು ನಲಿವಾಗಿಸುವ ತವಕವುಳ್ಳವರು ತೇಜಸ್ವಿನಿ.